ತಮಗೆ ಸಾರ್ಥಕವಾದಂಥ ಹೆಸರು ಬರುತ್ತದೆ. ಇಲ್ಲದೇ ಹೋದರೆ ದೊಡ್ಡ ನಿಟ್ಟುಸಿರು ಬಂದುಬಿಡುತ್ತದೆ. ಅದು ತಮಗೆ ಈಗಾಗಲೇ ಗೊತ್ತಾಗಿದೆ. ಇದಕ್ಕೆ ಹೇಗೆ ನಾವು ಪರಿಹಾರ ಕಂಡುಹಿಡುಯುವುದು. ಅದಕ್ಕೋಸ್ಕರವಾಗಿ ತಕ್ಷಣ ಒಂದು ಕಮಿಟಿ ಮಾಡಿ ಅವರಿಗೆ ಕೊಡಬೇಕಾದಂಥ ರಿಯಾಯಿತಿಯನ್ನು ಕಾನೂನುಬದ್ಧವಾಗಿ, ಶಾಸನಬದ್ಧವಾಗಿ ದಯಪಿಟ್ಟು ಅದಕ್ಕೆ ಮಂಜೂರಾತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ರಾಜ್ಯಪಾಲರ ಭಾಷಣದ ವಂದನಾರ್ಪಣ ಪ್ರಸ್ತಾವದ ಮೇಲಿನ ಚರ್ಚೆಗೆ ಮುಖ್ಯಮಂತ್ರಿಗಳಿಂದ ಉತ್ತರ

+ಶ್ರೀ ಜೆ. ಎಚ್. ಪಟೇಲ್ (ಮುಖ್ಯಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷರೆ, ವಿರೋಧ ಪಕ್ಷದ ನಾಯಕರನ್ನು ಒಳಗೊಂಡು ಗೌರವಾನ್ವಿತ ಸದಸ್ಯರು, ವಿವಿಧ ಪಕ್ಷಗಳ ಮುಖಂಡರುಗಳು ರಾಜ್ಯಪಾಲರ ಭಾಷಣದಮೇಲೆ ಅವರದೇ ಆದ ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಕೆಲವರು ಕೆಲವು ಅಂಶಗಳನ್ನು ಗಮನಿಸಿದ್ದಾರೆ, ಕೆಲವರು ಯಾವ ಅಂಶಗಳನ್ನೂ ಗಮನಿಸದೆ ಇದು ಯಥಾಪ್ರಕಾರ ಪ್ರತಿವರ್ಷವೂ ನಡೆಯುವ ಒಂದು ರಿಚುವಲ್ ಆ ತರಹ ನಡೆದಿದೆ ಎಂದು ಹೇಳಿದ್ದಾರೆ. ನಾನು ರಾಜ್ಯಪಾಲರು ಭಾಷಣ ಮಾಡಿದ ಸಂದರ್ಭದಲ್ಲಿ................

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

.........ಈ ಸದನದಲ್ಲಿ ನಡೆದ ಗೊಂದಲದ ಬಗ್ಗೆ ಮಾನ್ಯ ಅಧ್ಯಕ್ಷರೆ, ನಾನು ಇಷ್ಟು ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು, ವಿರೋಧಪಕ್ಷಗಳು ಸರ್ಕಾರದ ಮೇಲೆ ಎಷ್ಟೇ ಉಗ್ರವಾದ ಟೀಕೆ ಮಾಡಲಿ, ಹೇಳಲಿ, ಅದಕ್ಕೆ ನಾವು ಉತ್ತರವನ್ನು ಕೊಡುತ್ತೇವೆ. ಆದರೆ ರಾಜ್ಯಪಾಲರ ಭಾಷಣದ ಸಮಯದಲ್ಲಿ ಸದನದ ಗಂಭೀರತೆಯನ್ನು ಕಾಪಾಡಿಕೊಂಡು ಹೋಗಬೇಕೆಂದು ನಾನು ಮೊದಲು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ರಾಜ್ಯಾಂಗ ಬದ್ಧವಾಗಿ ಸರ್ಕಾರದ ನೀತಿ ಏನು ಎಂದು ಹೇಳುತ್ತಾರೆ. ಅವರು ಹೇಳುವಂಥ ಸಮಯದಲ್ಲಿ ನನ್ನ ಸರ್ಕಾರವೆಂದು ಹೇಳುವುದು ಸಂಪ್ರದಾಯವಿದೆ. ಸರ್ಕಾರದ ಕೆಲಸ ಏನು ಆಗಿದೆ, ಯಾವ ಯಾವ ಇಲಾಖೆಯಲ್ಲಿ ಏನೇನು ಆಗಿದೆ, ಏನು ಆಗಿಲ್ಲವೆನ್ನುವುದರ ಬಗ್ಗೆ ಒಟ್ಟು ಸಾರಾಂಶವನ್ನು ಅವರ ಭಾಷಣದಲ್ಲಿ ಹೇಳುತ್ತಾರೆ. ಇದು ಏನು ಬಜೆಟ್ ಭಾಷಣವಲ್ಲ. ಸರ್ಕಾರ ಕೈಗೊಳ್ಳಬೇಕಾದಂತಹ ಕೆಲವು ಸರ್ಕಾರ ಕಾರ್ಯಕ್ರಮಗಳು ಇವು ಎಂದು ಹೇಳುತ್ತಾರೆ. ಆದುದರಿಂದ ಬಜೆಟ್ ಅಧಿವೇಶನದಲ್ಲಿ ಇಲಾಖೆಗಳ ಮೇಲೆ ವಿರೋಧಪಕ್ಷದ ನಾಯಕರಾಗಲಿ, ಬೇರೆಯವರಾಗಲಿ ಲೋಪದೋಷಗಳನ್ನು ಕಂಡಿದ್ದರೆ, ತಿಳಿಸಲಿ, ಈಗ ರಾಜ್ಯಪಾಲರ ಭಾಷಣದ ಮೇಲೂ ತಾವು ಅವಕಾಶ ಕೊಟ್ಟಿರುವ ಹಾಗೆ ಎಲ್ಲಾ ವಿಷಯಗಳ ಮೇಲೆ ಪ್ರಸ್ತಾಪ ಮಾಡಿದ್ದಾರೆ. ನಮ್ಮ ಸರ್ಕಾರದ ಇಲಾಖೆಯ ಕೆಲಸದ ಬಗ್ಗೆ ಮಾತ್ರವಲ್ಲ, ರಾಷ್ಟ್ರದಲ್ಲಿರುವಂತಹ ರಾಜಕೀಯ ವ್ಯವಸ್ಥೆ ಅದರಲ್ಲಿರುವಂತಹ ರಾಜ್ಯಾಂಗ, ಕಾರ್ಯಾಂಗ, ನ್ಯಾಯಾಂಗ ಇವುಗಳು ಯಾವ ನಿಟ್ಟಿನಲ್ಲಿ ಕೆಲಸ ಮಾಡುತ್ತಾ ಇವೆ, ಮತ್ತು ಮಾಡಬೇಕೆನ್ನುವ ಬಗ್ಗೆ

ಮಾನ್ಯ ನಂಜೇಗೌಡರು ತಿಳಿಸಿದ್ದಾರೆ. ಅದೇ ರೀತಿಯಲ್ಲಿ ವೇದಾಂತದ ಮಾತುಗಳನ್ನು ಮಾನ್ಯ ವಾಟಾಳ್ ನಾಗರಾಜ್‌ರವರು ಕೋಡಗನ ಕೋಳಿ ನುಂಗಿತ್ತಾ ಎನ್ನುವ ಕಥೆಯನ್ನು ಹೇಳಿದ್ದಾರೆ. ನಾನು ಮೊದಲು ಶಿಶುನಾಳ ಷರೀಫ್‌ನ ಕಡೆ ಹೋಗಿಬಿಟ್ಟರೆ ಮತ್ತೆ ವಾಪಸ್ಸು ಬರುವುದಕ್ಕೆ ಕಷ್ಟವಾಗುತ್ತದೆ. ಆದುದರಿಂದ ಮೊದಲು ಇಲಾಖೆಗಳ ಸಂಬಂಧವಾಗಿ ಏನು ಏನು ಆಗಿದೆ ಎಂಬುದರ ಬಗ್ಗೆ ಮಾನ್ಯ ವಿರೋಧಪಕ್ಷದವರು ಹೇಳಿದ್ದು ಏನು, ವಾಸ್ತವಿಕ ಸ್ಥಿತಿ ಏನು ಎನ್ನುವುದನ್ನು ಮೊದಲು ನಾನು ಸದನದ ಗಮನಕ್ಕೆ ತರುತ್ತೇನೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪ್ಲಾನ್ ಔಟ್‌ಲೈನ್‌ನಲ್ಲಿ ಇಷ್ಟು ಕಡಿತವಾಗಿದೆ, ಬಡವರಿಗೆ ಸಹಾಯವಾಗುವಂತಹ ಕಾರ್ಯಕ್ರಮಗಳೆ ಇಲ್ಲ, ಸಮಾಜ ಕಲ್ಯಾಣ ಇಲಾಖೆಯಲ್ಲಿ 50 ಕೋಟಿ ರೂಪಾಯಿಗಳು, ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ 56 ಕೋಟಿ ರೂಪಾಯಿಗಳು ಹೀಗೆ ಅವರ ವಿಚಾರಗಳನ್ನು ಇಟ್ಟಿದ್ದಾರೆ. ಪ್ಲಾನ್‌ಔಟ್‌ಲೈನ್‌ನಲ್ಲಿ ಕಡಿತವಿದೆ ಇಲ್ಲವೆಂದು ಹೇಳುವುದಿಲ್ಲ. ಅದು ಏಕೆ, ಏನು ಎಂಬುದನ್ನು ತಿಳಿಸುತ್ತೇನೆ. 460 ಕೋಟಿ ಕೆ.ಇ.ಬಿ. ಮತ್ತು ಕೆ.ಎಸ್.ಆರ್.ಟಿ.ಸಿಗೆ ನಾವು ಸಬ್ಸಿಡೈಜ್ ಮಾಡಿದ್ದರಿಂದ 460 ಕೋಟಿ ರೂಪಾಯಿಗಳು, ಸ್ಟಾಂಪ್ ರಿಜಿಸ್ಟ್ರೇಷನ್ ಮೂಲಕ 200 ಕೋಟಿ ರೂಪಾಯಿಗಳು ಬರುವಂತಹ ಆದಾಯ ಬರದೇ ಇದ್ದುದ್ದರಿಂದ External Aided Projects ಇವುಗಳಲ್ಲಿ ಭಾಗವಹಿಸುವುದು ಹಣಕಾಸನ್ನು ತೊಡಗಿಸುವುದು ಕಡಿಮೆಯಾದುದರಿಂದ ಈ 710 ಕೋಟಿ ರೂಪಾಯಿಗಳ ಕಡಿತವಾಗಿದೆ ಎಂದು ಹೇಳಿದರೆ, ಇದು ಏನು ಒಂದು ಅನಾಹುತವೆಂದು ಅಲ್ಲ. ಈ ಪ್ಲಾನ್‌ನಲ್ಲಿ ಏನೇ ಕಡಿತವಾದರೂ ನಮ್ಮ ಪ್ರಿಯಾರಿಟಿಸ ಏನು ಇದೆಯೋ ಗ್ರಾಮೀಣಾಭಿವೃದ್ಧಿ, ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯ, ನೀರಾವರಿ, ವಿದ್ಯುಚ್ಛಕ್ತಿ ಇವುಗಳಿಗೆ ನಮ್ಮ ವೆಚ್ಚವನ್ನು ಕಡಿಮೆ ಮಾಡಲಿಲ್ಲ. ನಾವು ದೊಡ್ಡ ಪ್ಲಾನ್ ಸೈಜ್ ಅನ್ನು ತೋರಿಸಿ ಇಂಪ್ಲಿಮೆಂಟೇಷನ್ ಏನಾಯಿತು? ಆದರೆ ಹಿಂದೆ ಪ್ಲಾನ್‌ನಲ್ಲಿ Annual Plan as well as Five Year Plan, total Five Year Plan, Eighth Plan Performance is good ನಮ್ಮ ಎರಡು ವರ್ಷದ್ದು, ಅದರ ಹಿಂದಿನ ಮೂರು ವರ್ಷದ್ದು ಅದನ್ನು ತುಲನೆ ಮಾಡುವುದಾದರೆ, ಬೇರೆ ರಾಜ್ಯಗಳಿಗೆ ಹೋಲಿಸಿದರೆ, ನಮ್ಮ Plan performance is comparatively better, eighth Five Year Plan. ಈಗ ಒಂಭತ್ತನೆಯ ಯೋಜನೆಯ ಮೊದಲನೆಯ ವರ್ಷ ಇದೆ. ಈಗ ನಮಗೆ ರಿಯಾಲಿಸ್ಟಿಕ್ಕಾಗಿ ಎಷ್ಟು ರಿಸೋರ್ಸಸ್ ಬರುತ್ತದೆ, ಯಾವ ಯಾವ ಇಲಾಖೆಗಳಿಗೆ ಖರ್ಚು ಮಾಡುವುದಕ್ಕೆ ಸಾಧ್ಯವಿದೆ ಎನ್ನುವುದು, ನಿಜವಾಗಿ ಹಣ ಎಷ್ಟು ಬರುತ್ತದೆನ್ನುವ ಆಧಾರದ ಮೇಲೆ practically, pragmatically ಎನ್ನುವುದನ್ನು ನಾವು ಈ ಸಾರಿ ಪ್ಲಾನ್‌ನಲ್ಲಿ ತೋರಿಸಿದ್ದೇವೆ. ಅದಕ್ಕೆ 4,630 ಕೋಟಿ ರೂಪಾಯಿಗಳು ಹೋದ ವರ್ಷದ ಪ್ಲಾನನಲ್ಲಿ, Actually our performance with the gap ಇದ್ದ ಗ್ರಾಫ್ ಅನುಸರಿಸಿ 4,130ಕೋಟಿ ರೂಪಾಯಿಗಳೆಂದು ಕಡಿಮೆ ಮಾಡಿದ್ದೇವೆ. ಆದುದರಿಂದ ಮಾನ್ಯ ಅಧ್ಯಕ್ಷರು, ಮಾನ್ಯ ಸದಸ್ಯರುಗಳು ತಿಳಿದ ಹಾಗೆ ಪ್ಲಾನ್‌ಸೈಜ್‌ಕಟ್ ಆಯಿತು ಎಂದರೆ, expenditure our priorites change ಅಲ್ಲ. ನಾವು ವ್ಯರ್ಥವಾಗಿ ದೊಡ್ಡ ಮೊತ್ತವನ್ನು ತೋರಿಸುವುದಕ್ಕೆ ಹೋಗಿಲ್ಲ. ಮತ್ತೆ ಹಣಕಾಸಿನ ಈ ವರ್ಷದ, ಹಿಂದಿನ ವರ್ಷದ, ಮತ್ತು ಮುಂದಿನ ವರ್ಷದ ಬಗ್ಗೆ ಏನು ಎಂಬುದು ಪ್ಲಾನ ಒಂದೇ ಅಲ್ಲ. Sufficient care has been taken to keep

the standard of services to social welfare. It has been kept up. even it has been increase. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು 52 ಕೋಟಿ ರೂಪಾಯಿಗಳ ಬಗ್ಗೆ ಹೇಳಿದರು, ಅದು ಹಾಗಲ್ಲ. ನಾವು 52 ಕೋಟಿ ರೂಪಾಯಿಗಳು ಎಂದು ಟಾರ್ಗೆಟ್ ಇಟ್ಟಿದ್ದೇವೆ. ಅದು 35 ಕೋಟಿ ರೂಪಾಯಿಗಳು ಆಗಿದೆ, ಇನ್ನು 17 ಕೋಟಿ ರೂಪಾಯಿಗಳ ಕಡಿತವಾಗಿದೆ. ಏಕೆಂದರೆ ಎಲ್ಲಾ ಇಲಾಖೆಯದು ಈಗ ನೀರಾವರಿ ಇಲಾಖೆಗೆ ನಾವು ಹಿಂದಿನ ಸರ್ಕಾರ ಮೂರು ವರ್ಷ ಮಾಡಿದ ಖರ್ಚನ್ನು ನಾವು ಒಂದು ವರ್ಷದಲ್ಲೇ ಮಾಡಿದ್ದೇವೆ. ಹೀಗೆ ಇಲಾಖೆಯ ಪ್ರಕಾರ ಹೇಳುತ್ತಾ ಹೋದರೆ Special Component Fund ಅಥವಾ Tribal Sub Plan ಇದರಲ್ಲಿ ಏನು ಖರ್ಚು ಮಾಡಬೇಕೆಂದು ನಿಗದಿ ಪಡಿಸಿದ್ದೆವೋ, ಅಷ್ಟನ್ನು ಖರ್ಚು ಮಾಡಿದ್ದೇವೆ. ಕೆಲವು ಕಡೆ ಜಾಸ್ತಿಯೂ ಖರ್ಚು ಮಾಡಿದ್ದೇವೆ. ನಾನು ಇದನ್ನು ಎಲ್ಲಾ ಇಲಾಖೆಗಳ ಅಧಿಕೃತ ಅಂಕಿಅಂಶಗಳ ಆಧಾರದ ಮೇಲೆ ಹೇಳುತ್ತಾ ಇದ್ದೇನೆ. ಯಾವುದೂ ಹೇಳಿಕೆಯ ಮೇಲೆ ಅಲ್ಲ. ಒಂದು ಕೊರತೆಯಾಗಿದೆ, ಕೆಲವು Centrally sponsored schemes ಏನು ಇವೆ. ಅವಕ್ಕೆ ಮ್ಯಾಚಿಂಗ್ ಪ್ರಾವಿಜನ್ ಮಾಡದೆ ಅಲ್ಲಿ ಸರಿಯಾಗಿ ಹಣ ಬಂದಿಲ್ಲ. ಅದು ಈ ಕಡತಕ್ಕೆ ಒಂದು ಕಾರಣವಾಗಿದೆ. ಇನ್ನು ನೀರಾವರಿಯ ಬಗ್ಗೆ ಹೇಳಿದರು. ಹಿಂದೆ ತಮ್ಮ ಕಾಲದಲ್ಲಿ ನೀರಾವರಿಗೆ ಎಷ್ಟು ಇತ್ತು. ಈಗ ಏನಾಗಿದೆ ಎಂಬ ಬಗ್ಗೆ ಕೆಲವರು ಏನು ಕೆಲಸವಾಗುತ್ತಿಲ್ಲವೆಂದು, ಮತ್ತೆ ಕೆಲವರು ಕೆಲಸ ನಿಧಾನಗತಿಯಾಗಿದೆ ಎಂದರೆ, ಕೆಲವರು ಹಾಗೆ ಇಲ್ಲವೆಂದರೆ ಅದಕ್ಕೆ ನಾವು ಜನವರಿ 1997ರವರೆಗೆ 924 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ಇದನ್ನು ಮಾಡುವ ಉದ್ದೇಶವೂ ಇತ್ತು. ಉದ್ದೇಶಿಸಲಾಗಿತ್ತು, ಅಲ್ಲಿ ಖರ್ಚು ಮಾಡಿದ್ದೇವೆ. ಕೃಷ್ಣ ಬೇಸಿನ್ ಪ್ರಾಜೆಕ್ಟ್‌ಗೆ ಆರು ವರ್ಷಗಳಲ್ಲಿ 1,350 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೋ ನಾವು ಎರಡು ವರ್ಷಗಳಲ್ಲಿ 1,200 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ನಮ್ಮ ಮೊದಲ ಆದ್ಯತೆ ನೀರಾವರಿಗೆ ಆಗಿದೆ. ಇದರಲ್ಲಿ ಆ ಭಾಗ ಈ ಭಾಗವೆಂದು ಅಲ್ಲ. ಉತ್ತರ ಕರ್ನಾಟಕವೆಂದು, ದಕ್ಷಿಣ ಕರ್ನಾಟಕವೆಂದು ಅದರಲ್ಲಿ ಏನು ಏನೋ ಹುಡುಕುವುದಕ್ಕೆ ಹೋಗುವುದಲ್ಲಾ. ನೀರಾವರಿಯಲ್ಲಿ ಎಲ್ಲೆ ಆದರೂ ನಮ್ಮ ರೈತರು ಬೆಳೆದರೆ ಅದು ನಮ್ಮ ನಾಡಿಗೆ, ನಮ್ಮ ರಾಷ್ಟ್ರಕ್ಕೆ ಕೊಡುವಂತಹ ಕೊಡುಗೆಯಾಗಿದೆ. ಆದುದರಿಂದ ನೀರಾವರಿಯ ಬಗ್ಗೆ ನಾವು ಕೆಲವು ಕಡೆ ಮಧ್ಯಮ ನೀರಾವರಿಗೆ ಮೊದಲ ಬಾರಿಗೆ ಆರು ಪ್ರಾಜೆಕ್ಟ್ ತೆಗೆದುಕೊಂಡಿದ್ದೇವೆ. ಅವರು ಹಿಂದೆ ಕೈ ಬಿಟ್ಟಿದ್ದರು. ವಾಟೆಹೊಳೆ, ಮಂಚನಬೆಲೆ, ಅಮರ್ಜಾ, ಲೋಯರ್ ಮುಲ್ಲಾಮುರಿ, ಚಾಲ್ಕಿನಾಲ್, ಮಸ್ಕಿಲಾಲ್ ಈ ಎಲ್ಲಾ ಸೇರಿ ಒಟ್ಟು ಸಣ್ಣ ನೀರಾವರಿಗಳು 88. ಇಷ್ಟನ್ನೂ ಜೂನ್ 1997ನೇ ಇಸವಿಯೊಳಗೆ ನಾವು ಎಷ್ಟು ಕಂಪ್ಲೀಟ್ ಮಾಡಬೇಕೋ ಅದಕ್ಕೆ ಒಟ್ಟು 143 ಕೋಟಿ ರೂಪಾಯಿ ಸಾಲವನ್ನು ನಾವು ನಾಬಾರ್ಡ್‌ನಿಂದ ತೆಗೆದುಕೊಂಡಿದ್ದೇವೆ. ಅದರಂತೆ ಜೂನ್ 1997ರೊಳಗೆ ಪೂರ್ಣಗೊಳಿಸುತ್ತೇವೆ. ಇನ್ನು ನೀರಾವರಿಯ ಬಗ್ಗೆ ಹೇಳುವಾಗ ಒಂದು ವಿನಂತಿಯನ್ನು ಈ ಸದನಕ್ಕೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿ ಸ್ಟೋರ್ ಮಾಡಿರತಕ್ಕ ನೀರಿನ ಬಳಕೆ ಸರಿಯಾಗಿ ಆಗುತ್ತಿಲ್ಲ. ನೀರು ವ್ಯರ್ಥವಾಗಿ ಉಪಯೋಗವಾಗುತ್ತಿದೆ, ವೇಸ್ಟ್ ಮಾಡುತ್ತಿದ್ದೇವೆ. ಇದಕ್ಕೆ ನಮ್ಮ ನೀರಾವರಿಯ ಇಲಾಖೆಯ ಇಂಜಿನಿಯರಾಗಲೀ, ಆಫೀಸರ್ಸ್‌ಗಳಾಗಲೀ ಅವರೇ ಇದನ್ನೆಲ್ಲಾ ಕಂಟ್ರೋಲ್ ಮಾಡಬೇಕೆ

ಮತ್ತು ಈ ನೀರನ್ನು ಬಳಸತಕ್ಕಂತಹ ರೈತರಾದ ನಾವೇ ಅದಕ್ಕೆ ಹಣ ಕೊಡುತ್ತಾ ಇಲ್ಲಾ, ಅದನ್ನು ಮೆಂಟೇನ್ ಮಾಡುವ ಖರ್ಚನ್ನು ಕೂಡ ಕೊಡುತ್ತಿಲ್ಲ ನಮಗೆ ಹಾಗೇ ನೀರಬೇಕೆಂದರೆ ಹೇಗೆ? ಮಹಾರಾಷ್ಟ್ರ ಸರ್ಕಾರ ತಮ್ಮ ರೈತರು ಒಂದು ಎಕರೆ ನೀರಾವರಿಗೆ ವ್ಯವಸ್ಥೆ ಮಾಡುತ್ತೇವೆಂದರೆ ಅಲ್ಲಿನ ರೈತರು ಒಂದು ಸಾವಿರ ರೂಪಾಯಿ ಅಡ್ವಾನ್ಸ್ ಕೊಡುವುದಕ್ಕೆ ತಯಾರಿದ್ದಾರೆ. ಈಗಾಗಲೇ ನಮ್ಮಲ್ಲಿ ಒಂದು ಎಕರೆಗೆ ನೀರು ಸೌಲಭ್ಯ ಒದಗಿಸಬೇಕಾದರೆ ಸುಮಾರು ನಲವತ್ತು ಸಾವಿರ ರೂಪಾಯಿ ಖರ್ಚಾಗುತ್ತದೆ. ಇದಕ್ಕೆ ನಾವು ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟಬೇಕಾಗುತ್ತದೆ ಅಂದರೆ ಕೇವಲ ಖರ್ಚಿನ ದೃಷ್ಟಿಯಿಂದ ನಾನು ಹೇಳುತ್ತಿಲ್ಲ, ನಮ್ಮ ರೈತರಿಗೆ ಏನು ಅನುಕೂಲವಾಗುತ್ತದೆ ಆ ಅನುಕೂಲದ ಪ್ರಯೋಜನ ನೀರಾವರಿ ಇಲಾಖೆಗೆ ವಾಪಸ್ಸಾಗಿ ಅದನ್ನು ಮೇಂಟೇನ್ ಮಾಡುವುದಕ್ಕೆ ಚೆನ್ನಾಗಿ ರೆಗ್ಯುಲೇಟ್ ಮಾಡುವುದಕ್ಕೆ ಕೊಡದೆ ಇದ್ದರೆ, ಆಸಕ್ತಿ ವಹಿಸದಿದ್ದರೆ ಬಹಳ ಕಷ್ಟವಾಗುತ್ತದೆ, ಎಲ್ಲಾ ಕೆಲಸವನ್ನೂ ಸರ್ಕಾರವೇ ಮಾಡಬೇಕು, ಇಂಜಿನಿಯರೇ ಮಾಡಬೇಕು ಎಂದರೆ ಆಗುವುದಿಲ್ಲ, ಅದಕ್ಕೆ ತಮಗೆ ಗೊತ್ತಿರುವಂತೆ ಮಹಾರಾಷ್ಟ್ರದವರು ಒಂದು ವಾಟರ್ ಮ್ಯಾನೇಜ್‌ಮೆಂಟ್ ಕಮಿಟಿಯನ್ನು ಮಾಡಿದ್ದಾರೆ. ನಾವು ಕೆಲವು ಭಾಗಗಳಿಗೆ ಸಣ್ಣ ಸಣ್ಣ ಮಂಡಲದಂತೆ ಮಾಡಿ, ಅದನ್ನು ರೈತರಿಗೆ ವಹಿಸೋಣ ಅವರಿಗೆ ಪೋಲಿಸ್ ಪವರ್ಸ್ ಕೊಡೋಣ, ಯಾರು ತಪ್ಪು ಮಾಡುತ್ತಾರೋ, ಅವರಿಗೆ ಶಿಕ್ಷೆಯಾಗಲಿ, ವಾಟರ್ ತೆರಿಗೆಯನ್ನು ವಸೂಲು ಮಾಡುವ ಅಧಿಕಾರವನ್ನು ಅವರಿಗೆ ಕೊಡೋಣ. ಅದು ಬಿಟ್ಟು ನಾವು ಅವರ ಪ್ರೀತಿ ಗಳಿಸಬೇಕೆಂದು ಹೇಳಿ. ವಿದ್ಯುತ್ ಫ್ರೀಯಾಗಿ ಕೊಡುತ್ತೇವೆ, ನೀರನ್ನು ಫ್ರೀಯಾಗಿ ಕೊಡುತ್ತೇ[illegible]ಂದು ಹೇಳುತ್ತಾ ಹೋದರೆ ಕೊನೆಗೆ ನಾವು ಯಾವ ಸ್ಥಿತಿಗೆ ಬರುತ್ತೇವೆಂದರೆ ನಾವು ಯಾರಿಗೂ ಏನನ್ನು ಕೊಡದೇ ಇರತಕ್ಕಂತಹ ಸ್ಥಿತಿಗೆ ಬರುತ್ತೇವೆ. ಅದು ಆ ರೀತಿ ಆಗಾಗಬಾರದು.

ಮಹಾರಾಷ್ಟ್ರದವರು ವಾಟರ್ ಮ್ಯಾನೇಜ್‌ಮೆಂಟ್, ಪವರ್ ಮ್ಯಾನೇಜಮೆಂಟ್‌ನ್ನು ಯಾವರೀತಿ ಮಾಡುತ್ತಿದ್ದಾರೋ ಅದೇ ರೀತಿಯಲ್ಲಿ ಆ ಜವಾಬ್ದಾರಿಯನ್ನು ರೈತರಿಗೇ ಕೊಡಬೇಕು. ಅವರಿಗೆ ಯಾವ ಯಾವ ರೀತಿಯ ಇಂಜಿನಿಯರಿಂಗ್ ಟೆಕ್ನಿಕಲ್ ಅಡ್ವೈಸ್ ಬೇಕೋ ಅದನ್ನು ಕೊಡೋಣ, ಪೋಲೀಸ್ ಫೋರ್ಸ್ ಏನು ಬೇಕೋ ಅದನ್ನೂ ಕೊಡೋಣ, ಆದರೆ, ಆದನ್ನವರು ಮ್ಯಾನೇಜ್ ಮಾಡಬೇಕು ಇದು ನನ್ನ ಒಂದು ಸಲಹೆ. ಈಗಾಗಲೇ ಇದಕ್ಕೆ ತಕ್ಕಂತಹ ಇರಿಗೇಷನ್ ಆಕ್ಟ್ ಇದೆ. ಈ ಸಲಹೆಯನ್ನು ಒಳಗೊಂಡತೆ ಅವಶ್ಯಕವಾದ ತಿದ್ದುಪಡಿಯನ್ನು ಈ ಸದನ ಒಪ್ಪಿದರೆ ಮಾತ್ರ ಮಾಡಬಹುದು. ನೀರಾವರಿ ಬಗ್ಗೆ ನಾನು ಮಾತನಾಡುವಾಗ ಇಲ್ಲಿ ಹಲವಾರು ಬಾರಿ ಹಲವಾರು ವಿಷಯಗಳ ಬಗ್ಗೆ ವಿವಾದಗಳು ಬಂದವು. ಕಾವೇರಿ ನದಿ ನೀರಿನ ಬಗ್ಗೆ, ನಮ್ಮ ಮತ್ತು ತಮಿಳು ನಾಡಿನ ಸಂಬಂಧ, ಆಂಧ್ರಪ್ರದೇಶ ನಮ್ಮ ಸಂಬಂಧ, ಮತ್ತು ಮಹಾರಾಷ್ಟ್ರ ನಮ್ಮ ಸಂಬಂಧ. ಇದನ್ನು ಹಿಂದಿನ ಅಧಿವೇಶನದಲ್ಲೂ ಹಿಂದಿನ ಸರ್ಕಾರದಲ್ಲೂ ನಾಲ್ಕಾರು ಬಾರಿ ಮಾತನಾಡಿದ್ದೇವೆ. ಈಗ ಸದನದಲ್ಲೂ ಮಾತನಾಡುತ್ತಿದ್ದೇವೆ. ನಮ್ಮ ಸರ್ಕಾರದ ಒಂದು ಸ್ಪಷ್ಟವಾದ ನಿಲುವು ಎಂದರೆ ನಾವು ಮಾತುಕತೆ ಆಡುವುದಕ್ಕೆ ತಿರಸ್ಕರಿಸುವುದಿಲ್ಲ. ಮಾತುಕತೆ ಆಡುವುದಕ್ಕೆ ನಾವು ಯಾವಾಗಲೂ ಸಿದ್ಧರಿದ್ದೇವೆ. ಹಾಗೆಂದ ಮಾತ್ರಕ್ಕೆ ಬಚವಾತ್ ಅವಾರ್ಡ್‌ನ ಷರತ್ತುಗಳು ಏನಿವೆ, ಆ ಫ್ರೇಮ್ ವರ್ಕ್‌ಗಳು ಏನಿವೆ, ಅವುಗಳನ್ನು ಮಾತ್ರ ಮೀರಿ ಹೋಗುವುದಿಲ್ಲ. ಕಾವೇರಿ ಟ್ರಿಬ್ಯುನಲ್ ಏನು ಇದೆ ಅಲ್ಲಿ ಏನು ತೀರ್ಮಾನ

ವಾಗುತ್ತದೆ ಎಂಬುದು ನಮಗೆ ಗೊತ್ತಿಲ್ಲ, ಟ್ರಿಬ್ಯುನಲ್ ಏನು ಇದೆ ಅಲ್ಲಿ ಏನು ತೀರ್ಮಾನವಾಗುತ್ತದೆ ಎಂಬುದು ನಮಗೆ ಗೊತ್ತಿಲ್ಲ, ಟ್ರಿಬ್ಯುನಲ್‌ನಲ್ಲಿ ತೀರ್ಮಾನವಾಗುವುದಕ್ಕೆ ಮುಂಚೆ ಅಥವಾ ಆಗುವಾಗ ತಮಿಳುನಾಡಿನವರು ಒಪ್ಪಬಹುದಾದ ಏನಾದರೊಂದು ಸೂತ್ರವನ್ನು ಕಂಡು ಹಿಡಿದರೆ ಆಗಬಹುದು. ಈಗಾಗಲೇ 4-5 ಸಾರಿ ಮಾತನಾಡಲಿಕ್ಕೆ ನೀವು ಹೋದಿರಲ್ಲಾ ಅದು ಏನಾಯಿತೆಂದು ನೀವು ನಮ್ಮನ್ನು ಕೇಳಿದಿರಿ. ಕಾವೇರಿ ಬಗ್ಗೆ ಏನಾಯಿತು ಎಂದು ಕೇಳಿ ಮಾನ್ಯ ವೈ. ರಾಮಕೃಷ್ಣ ಅವರೂ ಕೂಡ ನಮಗೆ ನೋಟೀಸ್ ಕಳಿಸಿದ್ದಾರೆ, ಕಾವೇರಿ ಏನೂ ಆಗಿಲ್ಲ, ಕಾವೇರಿ ಅಲ್ಲೇ ಇದೆ, ಆದರೆ ಮಾತುಕತೆಯ ಬಗ್ಗೆ ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಏಕೆಂದರೆ ಇಷ್ಟು ವರ್ಷಗಳೂ ಕೂಡ ಬರೀ ಕೋರ್ಟಿನಲ್ಲಿ ಇತ್ತು, ಕೆಲವು ಸಂದರ್ಭದಲ್ಲಿ ನಮಗೆ ಸ್ವಲ್ಪ ನೀರನ್ನು ಕೊಡಿ ಎಂದು ಅವರು ಕೇಳಿದಾಗ, ಈ ಹಿಂದಿನ ಎಲ್ಲಾ ಮಾನ್ಯ ಮುಖ್ಯಮಂತ್ರಿಗಳೂ ಕೊಟ್ಟಿದ್ದಾರೆ. ಆದರೆ ಇದು ಪ್ರತಿ ವರ್ಷದ ಪ್ರಸಂಗ ಆಗಬಾರದು, ಇದಕ್ಕೆ ಏನಾದರೊಂದು ಶಾಶ್ವತ ಪರಿಹಾರವನ್ನು ಕಂಡುಹಿಡಿಯಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ.

ಮಾನ್ಯ ಕರುಣಾನಿಧಿಯವರು ಸಹಕಾರಿ ಮನೋಭಾವದಿಂದಲೇ ಈ ವಿಚಾರವನ್ನು 2-3 ಸಾರಿ ಚರ್ಚೆ ಮಾಡಿದರು, ಯಾವುದೋ ಕಾರಣಕ್ಕೆ ಅವರ ಮೋಟೀವ್ಸ್‌ಗೆ ಆಟ್ರಿಬ್ಯೂಟ್ ಮಾಡುತ್ತಾರೋ ಏನೋ? ಆದರೆ ಒಂದು ಹಂತದಲ್ಲಿ ಟ್ರಿಬ್ಯುನಲ್ಲೇ ಮಾಡಲಿ ಎಂದರು ಬಹುಶಃ ನಾವು ಏನು ಇಚ್ಛೆ ಪಡುತ್ತೇವೋ ಅದನ್ನು ಟ್ರಿಬ್ಯುನಲ್‌ನವರು ಮಾಡಿದರೆ, ಇದು ಟ್ರಿಬ್ಯುನಲ್‌ನಿಂದ ಆಯಿತು ಎಂದು ಹೇಳಿಕೊಳ್ಳುವ ದೃಷ್ಟಿಯಿಂದಲೋ ಅಥವಾ ಬೇರೆ ಏನೋ ಕಾರಣದಿಂದಲೋ ಏನೋ ಟ್ರಿಬ್ಯುನಲ್ ಇರಲಿ ಎಂದು ಹೇಳಿದರು, ಈಗ ಆ ಹಂತದಲ್ಲಿದೆ. ಈಗಲೂ ಕೂಡ ಈ ಸದನದ ಪರವಾನಗಿಯನ್ನು ಪಡೆದು ಟ್ರಿಬ್ಯುನಲ್‌ನಲ್ಲಿ ಏನೇ ತೀರ್ಮಾನ ಆದರೂ ನಾವು ಪರಸ್ಪರ ಹೊಂದಿಕೊಳ್ಳದಿದ್ದರೆ, ಈ ಸಮಸ್ಯೆ ಬಗೆಹರಿಯುವುದಿಲ್ಲವೆಂದರು ತಮಿಳುನಾಡಿನವರಿಗೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇಂತಹ ನೀರಿನ ಸಮಸ್ಯೆಗಳು ಯಾವತ್ತೂ ಕೂಡ ಅಡ್ಜುಡಿಕೇಷನಿಂದ ಆಗಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಅದಕ್ಕೋಸ್ಕರವೇ ಆಗಿನ ಪ್ರಧಾನಮಂತ್ರಿಗಳೂ, ಪ್ರಯತ್ನ ಪಟ್ಟರೂ, ಅದೇ ರೀತಿ ನಮ್ಮ ಪ್ರಧಾನಿಗಳೂ ಪ್ರಯತ್ನ ಪಟ್ಟರು. ಈಗಲೂ ಇದಕ್ಕೆ ಅಂತಿಮ ಪರಿಹಾರ ಕೊಂಡುಕೊಳ್ಳಬೇಕಾದರೆ ನೀವು ವಿಚಾರ ಮಾಡಿ ನಾವು ಏನೂ ಇದರ ಬಗ್ಗೆ ಒತ್ತಾಯ ಮಾಡುವುದಿಲ್ಲ, ಇದು ತಮಿಳುನಾಡಿನ ಬಗ್ಗೆ ಇಷ್ಟು.

ಇನ್ನು ಆಂಧ್ರಪ್ರದೇಶದ ಮಾನ್ಯ ಮುಖ್ಯಮಂತ್ರಿಗಳು ಮೂರು ದಿವಸದ ಹಿಂದೆ ನನಗೆ ದೂರವಾಣಿ ಮಾಡಿ, ನಾವು ಆಲಮಟ್ಟಿಯ ಬಗ್ಗೆ ಮಾತನಾಡಬೇಕಾಗಿದೆ, ಜ್ಯೋತಿಬಸು ಅವರು ಕರೆದಿದ್ದಾರೆ, ನೀವು ಬರುತ್ತೀರೋ? ಎಂದು ಕೇಳಿದರು, ಅದಕ್ಕೆ ನಾನೇನು ಹೇಳಿದೆಯೆಂದರೆ ಜ್ಯೋತಿ ಬಸು ಕರೆದರೆ ನಾನು ಬರುತ್ತೇನೆ, ಆದರೆ ವಿಷಯ ಏನೆಂದು ಕೇಳಿದೆ, ಅದಕ್ಕೆ ಅವರು ಏನು ಹೇಳಿದರೆಂದರೆ ಒಂದು ತಜ್ಞರ ಸಮಿತಿ ಕಳುಹಿಸಿದ್ದರಲ್ಲಾ ಆ ಸಮಿತಿಯ ರೀಪೋರ್ಟ ಬಂದಿದೆಯೆಂತೆ ಎಂದು ಹೇಳಿದರು. ಆದರೆ, ಆ ಸಮಿತಿಯ ರಿಪೋರ್ಟ್ ನನಗೆ ಗೊತ್ತಿಲ್ಲ, ಎಂದು ಹೇಳಿದ್ದೆ, ಅದಕ್ಕೆ ಆ ರಿಪೋರ್ಟ್ ಜ್ಯೋತಿಬಸು ಅವರ ಹತ್ತಿರ ಇದೆ ಎಂದು ಹೇಳಿದರು. ಆಗ ಚಂದ್ರಬಾಬು ನಾಯ್ಡುರವರಿಗೆ ನಾನು ಇಷ್ಟು ಮಾತ್ರ ಹೇಳಿದೆ, ಜ್ಯೋತಿಬಸು ಕರೆದರೆ ಅವರ ಜೊತೆಗೆ ಮಾತನಾಡುವುದಕ್ಕೆ

ನನ್ನ ಅಭ್ಯಂತರ ಏನೂ ಇಲ್ಲ, ಏಕೆಂದರೆ ಅವರೂ ನಮ್ಮ ಸ್ನೇಹಿತರು, ಜೊತೆಗೆ ಹಿರಿಯ ರಾಜಕಾರಣಿ, ಒಂದು ವೇಳೆ ಅವರಿಗೆ ತಪ್ಪು ತಿಳುವಳಿಕೆ ಬರುವ ಹಾಗೆ ಈ ತಜ್ಞರ ಸಮಿತಿ ವರದಿ ಮಾಡಿದ್ದರೆ, ಆ ತಪ್ಪು ತಿಳುವಳಿಕೆ ಏನು ಎಂಬುದನ್ನು ಜ್ಯೋತಿಬಸು ಅವರಿಗೆ ತಿಳಿಸುವುದು ನನ್ನ ಕರ್ತವ್ಯ. ನಾನು ಅಲ್ಲಿಗೆ ಹೋಗದೆ ಸುಮ್ಮನೇ ಕುಳಿತುಕೊಂಡು ನಾನು ಅಲ್ಲಿಗೆ ಮಾತುಕತೆಗೆ ಬರುವುದಿಲ್ಲ, ನಾನು ಯಾರನ್ನೂ ಕೇಳಬೇಕಾಗಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ, ಏಕೆಂದರೆ ಆ ತಜ್ಞರ ಸಮಿತಿಯವರು ನಮಗೆ ಅಧಿಕೃತ ಅಲ್ಲ. We are not bound by that. Even then if some misleading statements are made, ನಮಗೂ ಪಶ್ಚಿಮಬಂಗಾಳಕ್ಕೂ ನೇರವಾದ ಸಂಬಂಧ ಇಲ್ಲದೇ ಇದ್ದರೂ ಕೂಡ ನಾವು ನಮ್ಮ ಮಾತಿಗೆ ಇವರು ಬೆಲೆಕೊಡಲಿಲ್ಲ, ಇವರಲ್ಲಿ ಏನೋ ತಪ್ಪಿರಬೇಕೆಂಬ ಸಂಶಯ ಬರುತ್ತದೆ, ಆದುದರಿಂದ ನಾನು ಹೇಳುವುದೇನೆಂದರೆ ನಮ್ಮದು ಎಲ್ಲೂ ತಪ್ಪೇ ಇಲ್ಲದಿರುವಾಗ ಮತ್ತು ಬಚಾವತ್ ಅವಾರ್ಡ್‌ನ ತೀರ್ಪನ್ನು ನಾವು ಎಲ್ಲಿಯೂ ಉಲ್ಲಂಘಿಸದೇ ಇರುವಾಗ ಮತ್ತು ನಮಗೆ ನಮ್ಮ ಹಕ್ಕಿನ ನೀರನ್ನು ನಾವು ಇನ್ನೂ ಸಂಗ್ರಹಿಸಿಕೊಳ್ಳದೇ ಇರುವಾಗ ಮತ್ತು ಆ ನೀರನ್ನು ಸಂಗ್ರಹಿಸಿಕೊಳ್ಳಲೂ ಇನ್ನೂ ಸಮಯ ಇರುವಾಗ ನಾವು ಅವರ ಜೊತೆ ಮಾತನಾಡುವುದಕ್ಕೆ ಏತಕ್ಕೆ ಅಂಜಬೇಕು ? ಈ ವಿಚಾರವನ್ನು ಕೆಲವರು ಒಪ್ಪಿದ್ದಿರಿ, ಕೆಲವರು ಒಪ್ಪಿಲ್ಲ, ಅವರಿಗೆ ನಾನು ಈಗಲೂ ಸಹ ಹೇಳುವುದು ಇಷ್ಟೇ ಮಾನ್ಯ ಜ್ಯೋತಿಬಸು ಅವರ ಜೊತೆ ಮಾತನಾಡಿ ತಜ್ಞರ ಸಮಿತಿ ನಮಗೆ ಏನು ಬೈಂಡಿಂಗ್ ಅಲ್ಲ. ನಮ್ಮ ಚರ್ಚೆಯನ್ನು ಆಧಾರವಾಗಿಟ್ಟುಕೊಂಡರೆ ಅದರಲ್ಲಿ ಏನೂ ಲೋಪದೋಷಗಳು ಇವೆ ಎಂಬುದನ್ನು ನಾನು ಹೇಳುತ್ತೇನೆಂದು ಹೇಳಿದ್ದೇನೆ. ಇದು ಆಂಧ್ರಪ್ರದೇಶ ಮತ್ತು ನಮ್ಮ ರಾಜ್ಯದ ನಡುವಿನ ಮಾತು.

ಅದೇರೀತಿ ಮಹಾರಾಷ್ಟ್ರದ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಗಡಿ ವಿವಾದದ ಬಗ್ಗೆ ನಮ್ಮೊಡನೆ ಮಾತನಾಡಲು ಇಚ್ಛಿಪಟ್ಟಿದ್ದಾರೆ ನೀವು ಬರಬೇಕೆಂದೂ ಕೇಂದ್ರದ ಗೃಹಮಂತ್ರಿಗಳು ನಮಗೆ ಒಂದು ಪತ್ರ ಬರೆದಿದ್ದಾರೆ. ಆಗ ನಾನು ಏನು ಹೇಳಿದೆ ಎಂದರೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳನ್ನು ಭೇಟಿ ಮಾಡಲು ನನ್ನ ಅಭ್ಯಂತರ ಏನೂ ಇಲ್ಲ, ಆದರೆ ಅಲ್ಲಿ ಚರ್ಚೆ ಮಾಡುವಂಥಾದ್ದು ಏನೂ ಇಲ್ಲ, ಮಹಾಜನ ಆಯೋಗದ ತೀರ್ಪು ಏನಿದೆ ಅದಕ್ಕೆ ನಾವು ಎಂದೆಂದೂ ಬದ್ಧರು, ಅದನ್ನು ಯಾವರೀತಿಯಿಂದಲೂ ರಿವೈಸ್ ಮಾಡುವುದಿಲ್ಲ, ಇದರ ಬಗ್ಗೆ ಮಾತನಾಡುವುದು ಅನಾವಶ್ಯಕ ಎಂದು ಹೇಳಿದೆ. ರಾಜ್ಯದ ಗಡಿ ಬಗ್ಗೆಯಾಗಲಿ, ನೆಲದ ಬಗ್ಗೆಯಾಗಲೀ, ಜಲದಬಗ್ಗೆಯಾಗಲೀ, ಹಿಂದಿನ ಸರ್ಕಾರದವರು ಏನೂ ಮಾಡಲಿಲ್ಲವೆಂದು ಹೇಳುವುದಿಲ್ಲ, ಹಿಂದಿನ ಸರ್ಕಾರಗಳು ಎಷ್ಟು ಉತ್ಸುಕತೆಯಿಂದ ಜಾಗರೂಕತೆಯಿಂದ ಇದನ್ನು ಕಾಪಾಡಿಕೊಂಡು ಬಂದಿದ್ದರೋ ಅದಕ್ಕೆ ಈ ಸರ್ಕಾರ ಎಳ್ಳಷ್ಟೂ ಕಡಿಮೆ ಇಲ್ಲ. ರಾಜ್ಯಸರ್ಕಾರದ ವಿವಿಧ ಇಲಾಖೆಗಳ ಬಗ್ಗೆ ಮಾತನಾಡುವಾಗ ನೀವು ಏನು ಹೇಳಿದಿರಿ, ಆದರೆ ಅಂತರ್‌ರಾಜ್ಯಕ್ಕೆ ಸಂಬಂಧಪಟ್ಟಂತೆ ಬಂದಾಗ ನಮ್ಮ ಇಡೀ ಸದನ ಒಮ್ಮತದಿಂದ ಇರಬೇಕು, ಇದರಲ್ಲಿ ಯಾವುದೇ ಭಿನ್ನಾಭಿಪ್ರಾಯ ಬರಬಾರದು.

1.00 ಪಿ.ಎಂ

ಅದಕ್ಕೆ ನೀವೆಲ್ಲಿ ನಮ್ಮನ್ನು ಕರೆದಿರಿ, ನಮ್ಮ ಜೊತೆ ಮಾತನಾಡಲೇ ಇಲ್ಲ ಎಂದು ಹೇಳಿದಿರಿ. ಮಾತನಾಡುವುದಕ್ಕೆ ಯಾವುದಾದರೂ ಒಂದು ಆಧಾರ ಸಿಗಬೇಕು. ಅವರು ಒಂದು ಫಾರ್ಮುಲ

ಪ್ರಪೋಸ್ ಮಾಡಿದ್ದಾರೆ, ಅದರ ಪ್ರಕಾರ ನಮಗೆ ಈ ರೀತಿಯಾಗಬಹುದು ಅಥವಾ ಕಾನ್ಸಿಕ್ವೆನ್ಸಸ್ ಆಗಬಹುದೆನ್ನುವುದು ಇದ್ದರೆ, ಆವಾಗ ನಿಮ್ಮನ್ನು ನಾನು ಮಾತುಕತೆಗೆ ಕರೆಯಲೇ ಬೇಕು. ಇದರಲ್ಲಿ ನಮ್ಮ ಇಷ್ಟು ಜನರ ಜವಾಬ್ದಾರಿಯಲ್ಲ, ಎಲ್ಲರ ಜವಾಬ್ದಾರಿ ಇದೆ. ವಾಟಾಳ್ ನಾಗರಾಜ್‌ರವರೆ, ಅದೇನು ಬರದೆ ಇದ್ದದರಿಂದ ಅದನ್ನು ಪ್ರಸ್ತಾಪ ಮಾಡುವ ಅವಶ್ಯಕತೆ ನನಗೆ ಬರಲಿಲ್ಲ, ಅದಕ್ಕೆ ನಿಮಗೆ ಕೋಪಬಂತು, ಮಾಡಿಕೊಳ್ಳಿ. ತಾವು ರಾಜ್ಯದ ಹಿತದೃಷ್ಟಿಯಿಂದ ನೀವು ಕೋಪ ಮಾಡಿಕೊಂಡಿರಿ, ಆದರೆ ನಾವು ಯಾವುದೇ ರೀತಿಯಲ್ಲಿ ಅಪಚಾರ ಮಾಡಿರಲಿಲ್ಲ. ಇದು ಅಂತರ್ ರಾಜ್ಯಕ್ಕೆ ಸಂಬಂಧಪಟ್ಟಂತೆ ಒಂದು ವಿಷಯ. ನಮ್ಮನಮ್ಮಲ್ಲೆ ಈಗ ಸಮಾಜ ಕಲ್ಯಾಣ ಇಲಾಖೆ ಏನು ಮಾಡಿದೆ? ಏನು ಮಾಡಿಲ್ಲ ಅಥವಾ ಕೊರತೆಯಾಗಿದೆ ಎಂದು ತಾವು ಹೇಳಿದಿರಿ, ಈ ಸಾರಿ ವಾಸ್ತವಿಕವಾಗಿ ಸಮಾಜ ಕಲ್ಯಾಣ ಇಲಾಖೆಗೆ ನಮ್ಮ ಸರ್ಕಾರ, ಮೂರು ಆದ್ಯತೆಗಳನ್ನು ಕೊಟ್ಟಿದೆ. ಅವು ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯ, ಒಂದು ಮನೆ ಮತ್ತು ಇರುವ ಸ್ವಲ್ಪ ಜಮೀನಿಗೆ ಗಂಗಾ ಕಲ್ಯಾಣ ಯೋಜನೆಯಲ್ಲಿ ಸ್ಕೀಂ ಅಥವಾ ಟ್ರೈಬಲ್ ಸಬ್ ಪ್ಲಾನ್, ಇವುಗಳಲ್ಲಿ ಕೆಲಸ ಮಾಡಿರುವುದನ್ನು ಮಾತ್ರ ನಾನು ಹೇಳುತ್ತೇನೆ, ಮಾಡಬೇಕಾಗಿತ್ತು ಎಂದು ಹೇಳುತ್ತಿಲ್ಲ. ಇಪ್ಪತ್ತು ಕೋಟಿ ರೂಪಾಯಿಗಳ ಕಾಂಟಿಜೆನ್ಸಿ ಫಂಡ್‌ನ್ನು ಡೈವರ್ಟ್ ಮಾಡಿ ಸ್ಪೆಶಲ್ ಕಾಂಪೊನೆಂಟ್ ಸ್ಕೀಂಗೆ ಕೊಟ್ಟಿದ್ದೇವೆ. ಇಪ್ಪತ್ತೈದು ಪ್ರೀ ಮೆಟ್ರಿಕ್, ಇಪ್ಪತ್ತೈದು ಪೋಸ್ಟ್ ಮೆಟ್ರಿಕ್ ಹೀಗೆ ಒಟ್ಟು ಐವತ್ತು ಹಾಸ್ಟೆಲ್ಸ್‌ಗಳನ್ನು 1996-97ನೇ ಸಾಲಿನಲ್ಲಿ ಮಂಜೂರು ಮಾಡಲಾಗಿದೆ, 5,000 additional students were accommodated; 47 hostel buildings completed; 49 hostels nearing completion; 40 Morarji Desai Residental Schools sanctioned. 38,000 houses were completed against the targetted figure of 87,500 houses under various housing schemes like Ambedkar Housing Programme, Ashraya Scheme and Indira Avas Yojana meant for Scheduled Castes and Scheduled Tribes people.

Under Ganga-Kalyana Scheme 3,300 borewells were dug benefiting about 4000 families. Of course, energisation will be done shortly.

50 B.C.M. Hostels have been sanctioned. Out of which 25 buildings were completed and works started as far as 30 buildings are concerned. This is our achievement. ನಾನು ಯಾವಾಗಲೂ ಹಿಂದಿನವರು ಮಾಡಿದ್ದಕ್ಕೆ ಹೋಲಿಸಿ ನೋಡಬೇಕೆಂದು ಹೇಳುವುದಿಲ್ಲ. ಆದರೆ ಹಿಂದಿನವರಿಗಿಂತ ಯಾವುದರಲ್ಲೂ ನಾವು ಕಡಿಮೆ ಮಾಡಿಲ್ಲ. ನಾವು ಇದನ್ನು ಬಹಳ ಹೇಳಿದ್ದೆವು, ಅಷ್ಟು ಮಾಡುವುದಕ್ಕಾಗದೇ ಇರಬಹುದು, ಆದರೆ ಸಮಾಧಾನಕರವಾದ ಕೆಲಸ ವನ್ನು ಈ ಸಮಾಜಕಲ್ಯಾಣಯಲ್ಲಿ ಮಾಡಿದ್ದೇವೆ. ಇನ್ನೂ ಕೂಡ ಈ ಹಾಸ್ಟೆಲ್ ಸೇರಿದಂತೆ ದೂರುಗಳಿದ್ದಾವೆ; ಇಲ್ಲವೆಂದಲ್ಲ. ಈ ಅಂಗನವಾಡಿಯವರು ಆಹಾರವನ್ನು ದುರುಪಯೋಗ ಮಾಡುತ್ತಿದ್ದಾರೆ, ಕಳ್ಳಸಂತೆಯಲ್ಲಿ ಅದನ್ನು ಮಾರಿಕೊಂಡು, ಅವು ಮಕ್ಕಳಿಗೆ ತಲುಪುತ್ತಿಲ್ಲವೆನ್ನುವ ಆಪಾದನೆ ಬಂದಿದೆ, ಅದನ್ನು ವಿಚಾರಣೆಗೆ ಒಳಪಡಿಸಿದ್ದೇವೆ, ವಿಚಾರಣೆ ಮಾಡಿಸುತ್ತಿದ್ದೇವೆ,

ತಪ್ಪಿತಸ್ಥರಿಗೆ ಶಿಕ್ಷೆಯನ್ನು ಕೊಡುತ್ತೇವೆ. ಏಕೆಂದರೆ ಮಕ್ಕಳಿಗೆ ಕೊಡುವ ಆಹಾರವನ್ನು ಮಧ್ಯದಲ್ಲಿರುವವರು ದುರುಪಯೋಗಪಡಿಸಿಕೊಳ್ಳುವ ಪಾಪವನ್ನು ಮಾಡುತ್ತಿದ್ದಾರೆ, ಅದು ಅವರಿಗೆ ದಕ್ಕುವುದಿಲ್ಲ, ತೀರಾ ಅಂಥ ರವೆಗಿವೆ ತಿಂದರೆ ಅವರಿಗೆ ರೋಗಗಳು ಬರುತ್ತವೆ. ಅದನ್ನು ಅವರ ಪಾಪದ ಕಡೆಗೆ ಬಿಟ್ಟುಬಿಡೋಣ, ಆದರೂ ಕಾನೂನು ಪ್ರಕಾರ ಏನು ಕ್ರಮವನ್ನು ನಾವು ತೆಗೆದುಕೊಳ್ಳಬೇಕೊ ಅದನ್ನು ತೆಗೆದುಕೊಳ್ಳುತ್ತೇವೆ. ಇನ್ನು ಎಂಎಸ್‌ಐಎಲ್ ಮುಖಾಂತರ ಸಾರಾಯಿ ಹಂಚಿಕೆ ಮಾಡಿದರೆ ಸರ್ಕಾರಕ್ಕೆ ಏಳು ನೂರು ಕೋಟಿ ರೂಪಾಯಿಗಳ ಅಧಿಕ ಆದಾಯ ಬರುತ್ತಿತ್ತು, ಹೈಕೋರ್ಟ್, ಸುಪ್ರೀಂ ಕೋರ್ಟ್ ವಾದವನ್ನು ಎತ್ತಿಹಿಡಿದಿದ್ದರೂ ಕೂಡ ಸದನ ನಡೆಯುತ್ತಿರುವಾಗ ಫೆಬ್ರವರಿ 13ನೇ ತಾರೀಖಿನಂದು ಅಧಿಸೂಚನೆಯನ್ನು ಹೊರಡಿಸಿ ವಿತರಣೆಯನ್ನು ಖಾಸಗಿಯವರಿಗೆ ಹಂಚಿಕೊಟ್ಟರೆಂದು ಮೊನ್ನೆ ಮೇಲ್ಮನೆಯ ಸದನದಲ್ಲಿ ಹೇಳಿದ್ದಾರೆ, ಆಗಲೇ ಅಲ್ಲ, ಈಗಲೂ ಹೇಳಿದ್ದಾರೆ. ಅದೇನೆಂದರೆ, ಇದಕ್ಕಾದರು ತರಾತುರಿಯಿಂದ ಮಾಡುವುದಕ್ಕೆ ಬರುತ್ತದೆ, ನಮ್ಮ ಬ್ಯಾಕ್‌ಲಾಗ್ ಕ್ಲಿಯರೆನ್ಸ್‌ಗೆ ಬರುವುದಿಲ್ಲ ವೆಂದು ಹೇಳಿದ್ದಾರೆ. ಇದು ತರಾತುರಿ ಮಾತಲ್ಲ, ಇದನ್ನು ಮೊನ್ನೆ ಪ್ರಸ್ತಾಪ ಮಾಡಿದಾಗ ಹೇಳಿದ್ದೇನೆ, ಆದರೂ ಮತ್ತೊಮ್ಮೆ ಹೇಳುತ್ತೇನೆ, ಹಿಂದೆ ಖಾಸಗಿ ವಲಯದಲ್ಲಿದ್ದ ಈ ವ್ಯವಹಾರವನ್ನು, ರಾಜ್ಯಪಾಲರ ಆಳ್ವಿಕೆಯಲ್ಲಿ ಗೌರ್ನಮೆಂಟ್ ಮನಾಪಲಿ ಏಜೆನ್ಸಿ ಕೊಟ್ಟರು. ಆವಾಗ ಈ ವ್ಯವಹಾರದಲ್ಲಿ ತೊಡಗಿದವರು ನ್ಯಾಯಾಲಯಕ್ಕೆ ಹೋದರು, ನ್ಯಾಯಾಲಯದವರು ಸರ್ಕಾರಕ್ಕೆ ಈ ಒಂದೇ ಏಜೆನ್ಸಿ ಮೂಲಕ ನಾವು ಈ ಹಂಚಿಕೆ ವ್ಯವಹಾರವನ್ನು ಮಾಡಿದರೆ ಏನಾಗುತ್ತದೆನ್ನುವುದನ್ನು ವಾಸ್ತವಿಕವಾಗಿ ನೋಡಿದಾಗ, ಮಾರುಕಟ್ಟೆಯಲ್ಲಿಯೂ ವ್ಯವಹಾರ ನಡೆಯುತ್ತಿತ್ತು ಅಲ್ಲಿ ಖಾಸಗಿಯವರಲ್ಲೂ ವ್ಯವಹಾರ ನಡೆಯುತ್ತಿತ್ತು. ಸೆಕೆಂಡ್ಸ್ ಎಂದು ನಾವೇನು ಕರೆಯುತ್ತೇವೆ, ಅದೊಂದು ತೆರಿಗೆಯನ್ನು ನೋಡಿದಾಗ, ತಪ್ಪಿಸತಕ್ಕಂಥ ಕಳ್ಳ ಮಾರಾಟ, ಅದು ನಿಂತಿರಲಿಲ್ಲ. ಸೆಕೆಂಡ್ಸ್ ಎಲ್ಲದರಲ್ಲೂ ಇದ್ದಾವೆ, ಟೆಕ್ಸ್‌ಟೈಲ್‌ನಲ್ಲೂ ಕೂಡ ಸೆಕೆಂಡ್ಸ್‌ಎಂದು ಬರುತ್ತದೆ. ಆದರೆ ಆ ಸೆಕೆಂಡ್ಸ್‌ನ ಹೆಸರಿನಲ್ಲಿ ಮದ್ಯವನ್ನು ಚೀಪ್ ಆಗಿ ಟ್ಯಾಕ್ಸ್ ಕೊಡದೆ, ಮಾರತಕ್ಕಂಥ ಇದೊಂದು ಕೆಟ್ಟರೋಗ ಬಹಳ ವರ್ಷಗಳಿಂದ ಇದೆ, ನಾನು ಇಲ್ಲವೆಂದು ಹೇಳುವುದಿಲ್ಲ. ಈಗ ಅದೇನೂ ಇಲ್ಲ ಸೆಕೆಂಡ್ಸ್ ಎಲ್ಲಾ ಬಂದ್ ಆಗಿದೆ ಎಂದು ಹೇಳಿದರೆ ತಪ್ಪಾಗುತ್ತದೆ; ಇಷ್ಟೆಲ್ಲಾ ಮಾಡಿದರು ನಮ್ಮ ರಾಜ್ಯದಲ್ಲಿ, ದೇಶದಲ್ಲಿ ಆ ಸೆಕೆಂಡ್ಸ್ ಇದ್ದೇ ಇದೆ. ಟ್ಯಾಕ್ಸ್ ಇವೆಷನ್ ಹೇಗಿದೆಯೋ, ಹಾಗೆ ಈ ಒಂದು ವ್ಯವಹಾರವನ್ನು ಯಾವುದೇ ಸರ್ಕಾರವಿರಲಿ ಇದನ್ನು ನಿಲ್ಲಿಸುವುದಕ್ಕಾಗಿಲ್ಲ. ಈ ಸೆಕೆಂಡ್ಸ್‌ನ್ನು ನಿಲ್ಲಿಸುವುದಕ್ಕಾಗುತ್ತದೆ ಎಂದು ಎಂಎಸ್‌ಐಎಲ್‌ಗೆ ಕೊಟ್ಟಿದ್ದು, ಆದರೆ ಅದಕ್ಕೆ ತದ್ವಿರುದ್ಧವಾದ ಪರಿಣಾಮವಾಯಿತು. ಅದಕ್ಕೆ ನಮಗೆ ಯಾವುದಾದರೂ ಒಂದು ದಾರಿಬೇಕು. ಇಲ್ಲ, ಎಲ್ಲವನ್ನೂ ಸರ್ಕಾರಿ ವಶದಲ್ಲೇ ಮಾಡಬೇಕೆಂದರೆ, ಅಲ್ಲಿ ಖಾಸಗಿಯವರು ಸಂಪೂರ್ಣವಾಗಿ ಇರಲೇ ಬಾರದೆಂದು ಹೇಳಬೇಕು. ಖಾಸಗಿಯವರದ್ದು ಇಟ್ಟುಕೊಳ್ಳುವುದು, ಸರ್ಕಾರದ್ದು ಇಟ್ಟುಕೊಳ್ಳುವುದು, ಹಾಗಾಗಿ ಕೆಲವು ಸರ್ಕಾರ ಮತ್ತು ಖಾಸಗಿ ವ್ಯವಹಾರಗಳಲ್ಲಿ ಘರ್ಷಣೆ ಬರುತ್ತದೆ. ಮೊದಲು ನಮಗೆ, ಇದನ್ನು ಸರಿಪಡಿಸುವುದು ಹೇಗೆ? ತೆರಿಗೆ ಹೆಚ್ಚು ಬರುವ ಹಾಗೆ ಮಾಡುವುದು ಹೇಗೆ? ಅಥವಾ ಜನರ ಆರೋಗ್ಯ ಉಳಿಸುವುದು ಹೇಗೆ, ಎನ್ನುವ ಬಗ್ಗೆ ಸ್ಪಷ್ಟನೆ ಬೇಕು. ಈ ವಿಷಯಗಳಲ್ಲಿ ನಾವು ವಿಚಾರ ಮಾಡಿ ಎಂ.ಎಸ್.ಐ.ಎಲ್ ನ ಮನಾಪಲಿಯನ್ನು ತೆಗೆದು ಹಾಕಿದ್ದೇವೆ. ಅದಕ್ಕೆ ಲಿಕ್ಕರ್ ಲಾಬಿ, ಆ ಲಾಬಿ, ಈ ಲಾಬಿಗೆ ಒಳಗಾಗಿದ್ದಾರೆಂದು ಹೇಳಲಾಗುತ್ತಿದೆ. ಲಿಕ್ಕರ್ ಲಾಬಿ, ಗ್ರಾನೈಟ್ ಲಾಬಿ, ಏನೇನೊ

ಲಾಬಿಗಳು ಸ್ವಾಭಾವಿಕವಾಗಿಬಿಟ್ಟಿದೆ. ನಾವು ಕೂಡ ವಿರೋಧಪಕ್ಷದಲ್ಲಿ ಕೆಲಸ ಮಾಡಿ ಗೊತ್ತಿದೆ, ಏನಾದರು ಕಾಂಕ್ರೀಟ್ ಆಗಿ ಇಂಥ ಕಡೆ ಇಂಥ ವ್ಯಕ್ತಿಯಿಂದ ಇಂಥ ಅಪ್ಯವಹಾರವಾಗಿದೆ ಎಂದು ಹೇಳಿದರೆ ನಾವು ಒಪ್ಪಿಕೊಳ್ಳುತ್ತೇವೆ, ಕ್ರಮ ಕೈಗೊಳ್ಳಬಹುದು, ಎಂಥ ತೀವ್ರವಾದ ಶಿಕ್ಷೆ ಕೊಡಬಹುದೋ, ಅದನ್ನು ಕೊಡಬಹುದು. ಅದು ಬಿಟ್ಟು ಸುಮ್ಮನೆ ಲಾಬಿ ಲಾಬಿ ಎಂದು ಈ ರೀತಿ ಬರಿ ಊಹೆಯಿಂದ, ಕೆಲವು ಭ್ರಮೆಗಳಿಂದ ಸರ್ಕಾರದ ಮೇಲೆ ಆಪಾದನೆ ಮಾಡುವುದು ಸರಿಯಲ್ಲ. ಆದುದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಯಾರದೋ ಲಾಬಿಗೆ ಮಣಿದಿದ್ದಾರೆಂದು ಹೇಳಿರುವುದು ಸರಿಯಲ್ಲ.

ಇನ್ನು ಕೃಷ್ಣಾ ಬೇಸಿನ್ ಯೋಜನೆಗಳಿಗೆ 10 ಸಾವಿರ ಕೋಟಿ ರೂಪಾಯಿಗಳು ಬೇಕೆಂದು ನಮ್ಮ ನೀರಾವರಿ ಸಚಿವರು ಹೇಳಿದರು. ಈಗಾಗಲೆ 4 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ 4 ಸಾವಿರ ಕೋಟಿ ರೂಪಾಯಿಗಳಲ್ಲಿ ಹಿಂದಿನ ಸರ್ಕಾರಗಳು ಒಂದೂವರೆ ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿವೆ. ಈಗ ಎರಡೂವರೆ ಸಾವಿರ ಕೋಟಿ ರೂಪಾಯಿಗಳಲ್ಲಿ ಈ ಸರ್ಕಾರ 940 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಇನ್ನು ಕೃಷ್ಣ ಜಲನಿಗಮ ಭಾಗ್ಯದಿಂದ ಬಂದಿರತಕ್ಕಂಥ ಡಿಪಾಸಿಟ್ ಹಣವನ್ನು ಉಪಯೋಗ ಮಾಡಿದರೆ, ನಮ್ಮ ವರ್ಕ್ ಪ್ರೋಗ್ರೆಸ್ ವರ್ಷಾವಾರು ಹೇಳಿಬಿಡುತ್ತೇನೆ.

		ಪ್ರೋಗ್ರಾಂ ಹಾಕಿದ್ದು ಕೋಟಿ ರೂ.ಗಳಲ್ಲಿ	ಖರ್ಚು ಆಗಿರುವುದು ಕೋಟಿ. ರೂ.ಗಳಲ್ಲಿ
ಅಪ್ಪರ್ ಕೃಷ್ಣಾ ಸ್ಟೇಜ್	1989-90	72	54
	1990-91	80	69
	1991-92	107	101
	1992-93	155	118
	1993-94	200	243
1993-94ರಲ್ಲಿ ಸ್ವಲ್ಪ ಇಂಪ್ರೂವ್‌ಮೆಂಟ್ ಆಗಿದೆ. ರಿವೈಸ್ಡ್ 303 ಕೋಟಿ ರೂ.ಗಳು.			
	1994-95	346	256
	1995-96	520	388
	1996-97	801	466

ಆದ್ದರಿಂದ 3 ವರ್ಷ ಎಂದರೆ 1991-92, 1992-93, 1993-94 ರಲ್ಲಿ ಅವರು ಎಷ್ಟು ಖರ್ಚು ಮಾಡಿದ್ದಾರೋ, ಅದನ್ನು ಒಂದು ವರ್ಷದಲ್ಲಿಯೇ ಖರ್ಚು ಮಾಡಿದೆ ಈ ವರ್ಷದ್ದು 940 ಕೋಟಿ ರೂಪಾಯಿ ಈಗಾಗಲೇ ಖರ್ಚು ಮಾಡಿದೆ. 1300 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಗುರಿ ಇಟ್ಟುಕೊಂಡಿದ್ದೆವು. ಇನ್ನು ಬರುವ ಮಾರ್ಚ್, ಎಪ್ರಿಲ್‌ನೊಳಗೆ ಆದಷ್ಟು ನಾವು ಟಾರ್ಗೆಟೆಡ್ ಕೆಲಸವನ್ನು ಮುಗಿಸುತ್ತೇವೆ. ಸಾಮಾನ್ಯವಾಗಿ ವಿರೋಧ ಪಕ್ಷದ ಸದಸ್ಯರು, ಸರ್ಕಾರ ಅಂದರೆ

ಪೋಲೀಸ್ ಎಲ್ಲರಿಗೂ ಕಾಣುವುದೇ ಪೊಲೀಸ್ ಇಲಾಖೆ. ಸರ್ಕಾರ ಅಂದ ತಕ್ಷಣ ಪೊಲೀಸ್ ಸರ್ಕಾರವೇ ಇಲ್ಲ, ಲಾ ಅಂಡ್ ಆರ್ಡರ್ ಇಲ್ಲವೆಂದು ಹೇಳುತ್ತಾರೆ. ಪೊಲೀಸರೇ ನಮ್ಮನ್ನೇ ಕಾಪಾಡಬೇಕು ಎಂದರೆ ಇದು ಯಾವ ರಾಜ್ಯದಲ್ಲಿಯು ಆಗುವುದಿಲ್ಲ, ಯಾವ ರಾಷ್ಟ್ರದಲ್ಲ ಆಗುವುದಿಲ್ಲ. ಕೆಲವು ಎಕನಾಮಿಸ್ಟ್ಸ್ ಏನು ಹೇಳುತ್ತಾರೆಂದರೆ - ಈ ಲಿಬರಲೈಜೇಷನ್ ಮತ್ತು ಗ್ಲೋಬಲೈಜೇಷನ್ ಇವೆಲ್ಲ ಸ್ಲೋಗನ್ಸ್ ಬಂದು, ನಮ್ಮ ರಾಷ್ಟ್ರಕ್ಕೆ ಅನೇಕ ರೀತಿಯ ಮಾಧ್ಯಮಗಳ ಮೂಲಕ ಎಲೆಕ್ಟ್ರಾನಿಕ್ ಉಪಕರಣಗಳ ಮೂಲಕ ಇವತ್ತು ಪ್ರತಿಯೊಬ್ಬ ವ್ಯಕ್ತಿಯ ಮನಸ್ಸು ಒಂದು ಕನ್ಸುಮರಿಸಂ ಎಂದು ಏನು ಕರೆಯುತ್ತೇವೆ, ಆದಷ್ಟು ಎಲ್ಲದರಲ್ಲೂ ಏನಾದರೂ ಪಡೆಯಬೇಕು ಎನ್ನುವ ಆಸೆ, ಮತ್ತು ಮೀಡಿಯ ಮೂಲಕ ಹಿಂಸೆ ಕ್ರೌರ್ಯ ಮತ್ತು ದುರಾಭಿಪ್ರಾಯಗಳು ಇವುಗಳ ಬಗ್ಗೆ ಯಾವುದೋ ಚಾನಲಗಳು ರಾತ್ರಿ 11 ಗಂಟೆಯ ನಂತರ ತೋರಿಸುತ್ತವೆ. ಇವುಗಳಿಂದ ಇವತ್ತು ಏನೋ ಅವರ ಮನಸ್ಸಿನ ಮೇಲೆ ಆಗತಕ್ಕಂಥ ಸಾಂಸ್ಕೃತಿಕ ಆಘಾತ, ಅದರಿಂದ ಮಕ್ಕಳಿಗೆ ನಾವು ಇವತ್ತು ಪ್ರೊಟೆಕ್ಟ್ ಮಾಡುವುದಕ್ಕೆ ಆಗುತ್ತಿಲ್ಲ. ಹಾಗೆಯೇ ನಿರುದ್ಯೋಗ ಮತ್ತು ಬಡತನ, ಎಲ್ಲಾ ಕ್ರೌರ್ಯ, ಅಹಿಂಸೆ, ದ್ವಂದ್ವ ಮತ್ತು ಘರ್ಷಣೆ ಇವುಗಳಿಗೆ ಮೂಲ ಕಾರಣ. ನಾನು ಮೊನ್ನೆ ಒಂದು ದಿವಸ ಪ್ರಸ್ತಾಪ ಮಾಡಿ ಹೇಳಿದ್ದೆ. ಕರ್ನಾಟಕದಲ್ಲಿ ಸ್ವಾಭಾವಿಕವಾಗಿ ಜನ ಬಹಳ ಸಹಿಷ್ಣರು, ಸಹನೆಯುಳ್ಳವರು, ತಕ್ಷಣ ಯಾರು ಕೂಡ ರಿವೋಲ್ಟ್ ಆಗುವುದಿಲ್ಲ. ಈಗ ಏನಾಗಿದೆ ಎಂದರೆ, ಆ ಬಾರ್ಡರ್ ಏರಿಯಾದಲ್ಲಿ - ಬೀದರ್‌ನಿಂದ ಹಿಡಿದು ಗುಲ್ಬರ್ಗಾ, ರಾಯಚೂರು ಬಳ್ಳಾರಿ, ಚಿತ್ರದುರ್ಗ ಕೋಲಾರ ಹಾಗೂ ಬೆಂಗಳೂರು ಇಲ್ಲಿ ಒಂದು ಕಮಿಟಿ ಮಾಡಿದ್ದೇವೆ. ಈ ಕಮಿಟಿಯೊಳಗೆ ಗೃಹ ಕಾರ್ಯದರ್ಶಿ ಮತ್ತು ಗೃಹಸಚಿವರು ಸೇರಿದ್ದಾರೆ. ಆ ಬಾರ್ಡರ್ ಏರಿಯಾಗಳಲ್ಲಿ ಸೋಶಿಯೋ ಎಕನಾಮಿಕ್ ಡೆವಲಪ್‌ಮೆಂಟ್ ಏನಾಗಿದೆ, ಏಕೆಂದರೆ ಅಲ್ಲಿ ಕೆಲವು ಕಡೆ ಶಾಲೆಗಳು ಇಲ್ಲ, ಕೆಲವು ಕಡೆ ರಸ್ತೆಗಳಿಲ್ಲ, ಕೆಲವು ಕಡೆ ಆಸ್ಪತ್ರೆಗಳು ಇಲ್ಲ, ಕನಿಷ್ಟ ಪೊಲೀಸ್ ಸ್ಟೇಷನ್ ಕೂಡ ಇಲ್ಲ. ಹಾಗಾಗಿ ಆ ಬಾರ್ಡರ್‌ಗಳಲ್ಲಿ ಸ್ವಲ್ಪ ಹೊರಗಡೆಯಿಂದ ದುಷ್ಟ ಶಕ್ತಿಗಳು ಪ್ರಭಾವ ಬೀರುತ್ತಿವೆ. ಹಾಗೆಯೇ ಕೋಲಾರ, ಗಡಿಯಲ್ಲಿ ಪಾವಗಡದಲ್ಲಿ ಕೂಡ ದುಷ್ಟಶಕ್ತಿಗಳು ಪ್ರಭಾವ ಬೀರುತ್ತಿವೆ. ಅದನ್ನು ತಪ್ಪಿಸುವುದಕ್ಕೋಸ್ಕರ ಇವತ್ತು ನಾವು ಪೊಲೀಸ್ ಇಕ್ವಿಪ್‌ಮೆಂಟ್ಸ್ ಏನು ಇವೆ, ಕೇವಲ ಸಂಖ್ಯೆಯಲ್ಲಿ ಅಲ್ಲ, ಈಗ ಆಧುನಿಕ ದರೋಡೆ ಕೋರರು, ಆಧುನಿಕ ಕಳ್ಳರು ಲೇಟೆಸ್ಟ್ ಇಕ್ವಿಪ್‌ಮೆಂಟ್‌ಗಳನ್ನು ಕಳ್ಳತನ ಮಾಡುವುದಕ್ಕೆ ಉಪಯೋಗಿಸು ತ್ತಾರೆ. ಆ ಕಳ್ಳತನ ಮಾಡುವವರನ್ನು ಡಿಟೆಕ್ಟ್ ಮಾಡುವುದಕ್ಕೆ ಅವರಿಗಿಂತ ಲೇಟೆಸ್ಟ್ ಇಲ್ಲದಿದ್ದರೆ, ಅವರು ಎಲ್ಲ ಕಳ್ಳತನ ಮಾಡಿ ಮುಗಿಸಿ ಹೋದಮೇಲೆ ಇವರಿಗೆ ಕಳ್ಳತನ ಆಗಿದೆ ಎನ್ನುವುದು ಗೊತ್ತಾಗುತ್ತದೆ. ಅದು ಆಗಬಾರದೆಂದು ಪೊಲೀಸ್ ವ್ಯವಸ್ಥೆಗೆ ಈ ಒಂದು ಹೊಸ ಆಯಾಮವನ್ನು ಕೊಡುತ್ತಿದ್ದೇವೆ. ಕೆಲವು ಹೊಸ ರೀತಿಯ ಟ್ರೈನಿಂಗ್‌ನ್ನು ಪೊಲೀಸ್ ಇಲಾಖೆಯವರಿಗೆ ಕೊಡುತ್ತಿದ್ದೇವೆ. ಎಲ್ಲಾದರು ಒಂದು ಕಡೆ ಕೊಲೆಯಾದರ ನ್ಯಾಯಾಂಗ ತನಿಖೆ ಮಾಡಿಸಿ ಎಂದು ಕೇಳುತ್ತಾರೆ. ನಿಜವಾಗಿ ಈ ಕ್ರೌರ್ಯ ಮತ್ತು ಸಮಾಜ ಘಾತುಕ ಶಕ್ತಿಗಳ ಬೆಳವಣಿಗೆಗೆ ಕಾರಣವೇನು ಎನ್ನುವುದನ್ನು ಇವತ್ತಿನ ದಿವಸ ಇಡೀ ರಾಷ್ಟ್ರ ಯೋಚನೆ ಮಾಡಬೇಕಾದಂಥ ಪರಿಸ್ಥಿತಿ ಬಂದಿದೆ. ಕಾಶ್ಮೀರದಲ್ಲಿದ್ದ ಟೆರರಿಸ್ಟ್‌ಗೆ ಪಾಕಿಸ್ತಾನ ಕಾರಣವೆಂದು ಹೇಳುತ್ತಿದ್ದೆವು. ಪಶ್ಚಿಮ ಬಂಗಾಳಕ್ಕೆ ಬರುತ್ತಿರುವವರನ್ನು ಬಂಗ್ಲಾದೇಶದಿಂದ ವಲಸೆ ಬರುತ್ತಾರೆಂದು ಹೇಳುತ್ತಿದ್ದೆವು. ನಾವು ನಮ್ಮ ನೆರೆಹೊರೆಯ ರಾಷ್ಟ್ರಗಳ ಜೊತೆಗೆ ಸ್ನೇಹ

ಸಂಪಾದನೆ ಮಾಡಿಕೊಳ್ಳುವುದು ಕೇಂದ್ರ ಸರ್ಕಾರದ ಜವಾಬ್ದಾರಿ. ಈಗ ನಮ್ಮ ಕರ್ನಾಟಕದಲ್ಲಿ ಏನಾಗಿದೆಯೆಂದರೆ, ನಮ್ಮ ಜನ 'ಸಂಪನ್ನರು' ಎಂದು ತಿಳಿದು ಈ ಪೀಪಲ್ಸ್ ವಾರ್ ಗ್ರೂಪ್‌ನಂಥವರು ಏನಾದರೂ ಮಾಡಿ ಇಲ್ಲಿಂದ ಕಿತ್ತುಕೊಂಡು ಹೋಗಬಹುದು ಎನ್ನುವಂಥ ಮನೋಭಾವದಲ್ಲಿದ್ದಾರೆ. ಎಲ್‌ಟಿಟಿಇ ಯಿಂದ ಅಂತಹ ಹೆಚ್ಚಿನ ಪರಿಣಾಮ ಇಲ್ಲವೆಂದು ಇಂಟಲಿಜೆನ್ಸ್ ರಿಪೋರ್ಟ್‌ನಿಂದ ತಿಳಿದುಬಂದಿದೆ. ಮೊದಲು ಎಲ್.ಟಿ.ಟಿ.ಇ. ಬೆಳೆಯಲಿ ಎಂದು ನಮ್ಮ ಈ ತಮಿಳುನಾಡಿನ ಜನರೇ ಆಶಿಸುತ್ತಿದ್ದರು. ಅದರಿಂದ ದುಷ್ಪರಿಣಾಮ ಆಗುತ್ತಿರುವುದರಿಂದ ಈಗ ಅದು ಹಾಗೆ ಆಗಲಿಲ್ಲ. ಆದರೆ ಪೀಪಲ್ಸ್ ವಾರ್ ಗ್ರೂಪ್‌ನವರದ್ದು ಡೈರೆಕ್ಟ್ ಆಗಿ ಇನ್‌ವಾಲ್ವ್‌ಮೆಂಟ್ ಇಲ್ಲ, ಆದರೆ ಅವರ ಫ್ರಂಟಲ್ ಆರ್ಗನೈಜೇಶನ್ಸ್‌ನ್ನು ಮುಂದುಬಿಟ್ಟು ಇವೆಲ್ಲ ಆಗುತ್ತಿವೆ. ಬಾರ್ಡರ್ ಏರಿಯಾಗಳಲ್ಲಿ ಇರತಕ್ಕ ಜನರಿಗೆ ಸೋಶಿಯೋ ಎಕನಾಮಿಕ್ ಡೆವಲಪ್‌ಮೆಂಟ್ ಆಗದಿದ್ದರೆ, ಅವರು ಸ್ವಾಭಾವಿಕವಾಗಿ ಪಕ್ಕದ ರಾಜ್ಯಗಳಿಂದ ಯಾರು ಬಂದರು ಸಹ ಅವರನ್ನು ವಿರೋಧಿಸತಕ್ಕಂಥ ಇಚ್ಛೆ ಬರುವುಲ್ಲ. ಬೇರೆಯವರು ಬಂದರೆ ಬರಲಿ, ನಮಗೆ ಒಳ್ಳೆಯದನ್ನು ಮಾಡುವುದಕ್ಕೆ ಬರುತ್ತಾರೆ ಎನ್ನುವ ರೀತಿಯಲ್ಲಿ ಅಲ್ಲಿನ ಜನರು ಸುಮ್ಮನಾಗುತ್ತಾರೋ ಆದ್ದರಿಂದ, ಇದನ್ನು ಸುಧಾರಣೆ ಮಾಡುವುದಕ್ಕೋಸ್ಕರ ಬಾರ್ಡರ್ ಏರಿಯಾದಲ್ಲಿ ನಾವು ವಿಶೇಷ ಗಮನ ಕೊಟ್ಟು ಸೋಶಿಯೋ ಎಕನಾಮಿಕ್ ಡೆವಲಪ್‌ಮೆಂಟ್‌ಗೆ ಪೋಲಿಸರು ಉಪಯೋಗಿಸುವಂಥ ಶಸ್ತ್ರಗಳ ತಂತ್ರಜ್ಞಾನವನ್ನು ಹೆಚ್ಚಿಸಿ, ಅಲ್ಲಿ ಸರಿಯಾಗಿ ಪೋಲಿಸ್ ಬಂದೋಬಸ್ತನ್ನು ಮಾಡುವ ಪ್ರಯತ್ನ ಮಾಡಿದ್ದೇವೆ. ಆದರೂ ಕೂಡ ನಾಡಿನ ಒಳಗಡೆ ಅಲ್ಲಲ್ಲಿ ಅಸಮಾಧಾನದ ಮತ್ತು ಕ್ರೌರ್ಯದ ಪ್ರಕ್ರಿಯೆ ಕಾಣುತ್ತಿದೆ. ನಮ್ಮ ಸರ್ಕಾರ ಬಂದ ಕೂಡಲೆ ಪ್ರಾರಂಭವಾದದ್ದು ಅಲ್ಲ. ಇದಕ್ಕೆ ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳಿವೆ. ಅವುಗಳನ್ನು ನಾವಿಲ್ಲಿ ಸಂಪೂರ್ಣವಾಗಿ ಗುರುತಿಸದೇ ಹೋದರೆ, ಮುಂದೆ ಕೆಟ್ಟ ಪರಿಣಾಮವನ್ನು ಎದುರಿಸಬೇಕಾಗಬಹುದು. ಈಗ ಮಹಿಳೆಯರ ಮೇಲೆ ಅತ್ಯಾಚಾರ, ಪಟ್ಟಣದ ಹೊರ ವಲಯದಲ್ಲಿ ದರೋಡೆಕೋರರ ಹಾವಳಿ, ಸಣ್ಣ ಮಕ್ಕಳ ಅಪರಾಧಗಳು ಹೀಗೆ ಇವುಗಳೆಲ್ಲ ಜಾಸ್ತಿಯಾಗಿವೆ. ಸಮಾಧಾನಕ್ಕೆ ನಮ್ಮ ಕಾಲದಲ್ಲಿ ಕ್ರೈಮ್ಸ್ ಕಡಿಮೆ ಇದೆಯೆಂದು ನಾನು ಅಂಕಿಅಂಶಗಳಿಂದ ಹೇಳಬಹುದು. ಟೋಟಲ್ ಆರ್ಗ್‌ನೈಸ್ಡ್ ಕ್ರೈಮ್ಸ್ : 1994ರಲ್ಲಿ 1.15.00; 1995ರಲ್ಲಿ 1.20,000; 1996ರಲ್ಲಿ 1.14.000; 1995 ಮತ್ತು 96ರಲ್ಲಿ ಹೆಚ್ಚು ಕಡಿಮೆ ಒಂದೇ ಲೆವೆಲ್‌ನಲ್ಲಿ ಇದೆ. ಕೆಲವು ಬಹಳ ಕಡಿಮೆಯಾಗಿವೆ. ಈ ಡಕಾಯಿತಿ ಪ್ರಕರಣ 380ರಿಂದ 250ಕ್ಕೆ ಇಳಿದಿದೆ. Communal riots-almost nil. Repe cases from 276, it has come down to 220. Crimes aganist women as a whole ಡೌರಿ ಡೆತ್ ಇರಬಹುದು, ಹೆರಾಸ್‌ಮೆಂಟ್ ಇರಬಹುದು, ಅಥವಾ ಗಂಡನೇ ಕೊಂದು ಹಾಕಿರಬಹುದು, ಈ ತರಹವು 1994ರಲ್ಲಿ 3,260, 1995ರಲ್ಲಿ 3900, 1996ರಲ್ಲಿ 3800 ಕೇಸಸ್ ಇವೆ. ಏತಕ್ಕೆ ಹೀಗಾಯಿತೆಂದು ಕೇಳಬಹುದು. ಕಾರಣವೇನೆಂದರೆ, ಅದಕ್ಕೆ ನಾನು ಮೊದಲೇ ಹೇಳಿದಂತೆ ಮೀಡಿಯಾಗಳ ಮೂಲಕ ಕನ್‌ಸ್ಯೂಮರಿಸಂ ನಿಂದ ಜನರ ಮನಸ್ಸಿನ ಮೇಲೆ ಹೊಸ ಹೊಸ ಪ್ರಭಾವಗಳೇನಾಗುತ್ತವೆ ಅದರಿಂದ ಸಮಾಜದಲ್ಲಿ ಒಂದು ರೀತಿಯ ವಿಷ ಬೆಳೆಯುತ್ತಿದೆ. ಇದು ಸಾಮಾನ್ಯವಾಗಿ ನಡೆಯತಕ್ಕದ್ದು ಗ್ಯಾಂಗ್ ವಾರ್ ಆಗಲೀ, ಮತ್ತೊಂದು ಆಗಲಿ ಗಂಡಸರ ಶಕ್ತಿಮೇಲೆ ಅವರವರ ಬಲವಿರುತ್ತದೆ. ಆದರೆ, ಸಾಮಾನ್ಯವಾಗಿ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಮಾಡುವುದು, ಅವರ ಮೇಲೆ ಕ್ರೈಮ್ಸ್ ಮಾಡುವುದಿದೆಯಲ್ಲ ಇದು ಇಡೀ

ಸಮಾಜದಲ್ಲಿರತಕ್ಕಂಥ ಒಂದು ದೊಡ್ಡ ದೋಷದ ಗುಣ. ಇದು ರಾಷ್ಟ್ರವ್ಯಾಪ್ತಿಯಾಗಿದೆ. ಇಲ್ಲಿ ನಮ್ಮ ರಾಜ್ಯಕ್ಕೆ ಹೋಲಿಸಿದರೆ, ಕೆಲವು ಉತ್ತರದ ರಾಜ್ಯಗಳಲ್ಲಿ ಇದು ನರಕ. ಆದರೆ, ಇದು ಹಿಂದೆ ಕಡಿಮೆ ಇತ್ತು. ಏಕೆ ಕಡಿಮೆಯಿತ್ತೆಂದರೆ, ಅದನ್ನು ಯಾರೂ ಡಿಟೆಕ್ಟ್ ಮಾಡುತ್ತಿರಲಿಲ್ಲ, ಅನುಭವಿಸಿ ಸಾಯುತ್ತಿದ್ದರು. ಈಗ ಅವರಲ್ಲಿ ಸ್ವಲ್ಪ ಸಾಮಾಜಿಕ ಧೈರ್ಯಬಂದಿದೆ ಮತ್ತು ಏನು ಹೇಳಬೇಕು, ಹೇಗೆ ಪ್ರತಿಭಟಿಸಬೇಕು ಎಂಬುದು ಗೊತ್ತಾಗಿರಬಹುದರಿಂದ ಅದರ ಸಂಖ್ಯೆ ಸ್ವಲ್ಪ ಕಡಿಮೆಯಾಗಿದೆ. ಆದರೂ ಈ ಸಂಖ್ಯೆ ಒಂದು ನಾಗರೀಕ ಸಮಾಜದ ಒಳ್ಳೆಯ ಲಕ್ಷಣವಲ್ಲ. ಇದಕ್ಕೆ ನಾನು ಕೇವಲ ಸರ್ಕಾರವೇ ಇದನ್ನೆಲ್ಲಾ ಸರಿಪಡಿಸುತ್ತದೆ ಎಂದು ಹೇಳುವುದಿಲ್ಲ. ಸಾಮಾಜಿಕ ಆರ್ಥಿಕ ಶಕ್ತಿಗಳು ತಮ್ಮ ಪ್ರಭಾವವನ್ನು ಪ್ರಯೋಗ ಮಾಡುತ್ತವೆ. ಈಗ ಇಂಗ್ಲೆಂಡ್‌ನಲ್ಲಿ, ಅಮೆರಿಕಾದಲ್ಲಿ ಕೆಲವು ಏರಿಯಾಗಳಿವೆ, ನ್ಯೂಯಾರ್ಕ್‌ನಲ್ಲಿ ಒಂದು ರೆಡ್‌ಲೈಟ್ ಏರಿಯಾ ಇದೆ. ಆ ಏರಿಯಾದಲ್ಲಿ ಯಾರು ಕೇಳುವುದಕ್ಕೆ ಹೋಗುವುದಿಲ್ಲ. ಕೊಲೆಯಾಗುತ್ತದೋ, ಸುಲಿಗೆಯಾಗುತ್ತದೋ ರೇಪ್ ಆಗುತ್ತದೋ ಎಂದು ಯಾರು ಕೇಳುವುದಿಲ್ಲ. ಬೇರೆ ಭಾಗದಲ್ಲಿ ಒಳ್ಳೆಯ ರಕ್ಷಣೆ ಇದೆ ಶಿಸ್ತಿದೆ. ಆ ದೇಶಗಳಲ್ಲೂ ಕೊಳಚೆ ಇದೆ. ಇಲ್ಲ ಎಂದಲ್ಲ ಆದರೆ ಅದನ್ನು ಎಲ್ಲಿಗೆ ಸೀಮಿತಗೊಳಿಸಬೇಕು,ಹೇಗೆ ಹತೋಟಿಯಲ್ಲಿಡಬೇಕು ಎಂದು ವಿಚಾರ ಮಾಡಿ ಅದನ್ನು ಬೆಳೆಯಲಿಕ್ಕೆ ಬಿಟ್ಟಿಲ್ಲ ಇವತ್ತು ನಮ್ಮ ಇಡೀ ದೇಶದಲ್ಲಿ ಎಲ್ಲಾ ರೋಗಗಳು ಇವೆ. ಸಾಮಾಜಿಕ ರೋಗಗಳು ಆರ್ಥಿಕ ರೋಗಗಳು ಎಲ್ಲಾ ಕಡೆ ಪಸರಿಸುತ್ತವೆ. ಅದು ಒಳ್ಳೆಯ ಲಕ್ಷಣ ಅಲ್ಲ. ಹೇಗೆ ಇದನ್ನು ಸರಿಪಡಿಸಬೇಕು? ಈಗ ಗಾಂಧೀಜಿಯವರು ಇಲ್ಲ. ನಮ್ಮ ಇಡೀ ದೇಶಕ್ಕೆ ಮಾರ್ಗದರ್ಶನ ಮಾಡುವಂತಹ ಅತ್ಯಂತ ಎತ್ತರದ ನೈತಿಕ, ವ್ಯಕ್ತಿತ್ವ ಅಥವಾ ನಾಯಕತ್ವ ಹೊಂದಿದವರು ಒಬ್ಬರೂ ಇಲ್ಲ. ಅಂತಹವರು ಇಲ್ಲದಿದ್ದಾಗ ನಾವು ಪ್ರತಿಯೊಬ್ಬರೂ ಏನು ಮಾಡಬಹುದು? ಈ ಪಿಡುಗಗಳನ್ನು ಹತೋಟಿಯಲ್ಲಿಡುವುದಕ್ಕೆ ಈ ದೇಶದಲ್ಲಿ ಹಬ್ಬಿರತಕ್ಕಂಥ ವಿಷ ಏನಿದೆ ಅದನ್ನು ತಪ್ಪಿಸುವುದಕ್ಕೆ ಏನು ನೋಡಬಹುದೆಂದು ನಾವು ಇವತ್ತು ಎಲ್ಲರೂ ಜವಾಬ್ದಾರಿಯಿಂದ ಅಲೋಚನೆ ಮಾಡಬೇಕಾಗಿದೆ. ಈ ದೇಶದಲ್ಲಿ ಈಗಿರಿತಕ್ಕಂತಹ ಪರಿಸ್ಥಿತಿ ನೋಡಿ ಒಂದು ಕಡೆ ಜಿ. ಎಸ್. ಶಿವರುದ್ರಪ್ಪನವರು ಹೇಳುತ್ತಾರೆ.

ಯಾವ ಹಾಡ ಹಾಡಲಿ,
ಯಾವ ಹಾಡ ಹಾಡಲಿ, ನಿಮಗೆ ನೆಮ್ಮದಿಯ ನೀಡಲಿ,
ಸುತ್ತಮುತ್ತ ಮನೆ-ಮಠಗಳು ಹೊತ್ತಿಕೊಂಡು ಉರಿಯುವಲ್ಲಿ,
ಸೋತು ಮೂಖವಾದ ಬದುಕು ನಿಟ್ಟುಸಿರು ನಿಲುವಿನಲ್ಲಿ,
ಯಾವ ಹಾಡ ಹಾಡಲಿ,
ನಿಟ್ಟುಸಿರು ತೇಲುವಲ್ಲಿ ಯಾವ ಹಾಡ ಹಾಡಲಿ,
ಬರೀ ಮಾತಿನ ಜಾಲದಲ್ಲಿ, ಶೋಷಣೆಗಳ
ಶೂಲದಲ್ಲಿ, ವಂಚನೆಗಳ ಸಂಚಿನಲ್ಲಿ, ಹಸಿದ ಹೊಟ್ಟೆಯಲ್ಲಿ,
ನರಳುವಲ್ಲಿ ಯಾವ ಹಾಡ ಹಾಡಲಿ.
ಉರಿವ ಕಣ್ಣು ಚಿತೆಗಳಲ್ಲಿ ಇರುವ ಕನಸು
ಸೀಯುವಲ್ಲಿ, ಜ್ವಾಲಾಮುಖಿ ಹೊರಗೆ ಚೆಂಕಿ

ಕಾರುವಲ್ಲಿ ಯಾವ ಹಾಡ ಹಾಡಲಿ,
ಬೆಳಕಿಲ್ಲದ ಹಾದಿಯಲ್ಲಿ, ಬಾಳುಗುಡಿ ಶಾಲಿನಲ್ಲಿ,
ಬಿರುಗಾಳಿ ಬೀಡಿನಲ್ಲಿ ಕುರಡು ಪ್ರಯಾಣ ಸಾಗುವಲ್ಲಿ
ಯಾವ ಹಾಡ ಹಾಡಲಿ.

ಇದನ್ನು ಓದಿದಾಗ, ಆ ಕವಿಗೆ ಈ ದೇಶದ ಇವತ್ತಿನ ಸಮಗ್ರ ಚಿತ್ರ ಹೇಗೆ ಕಂಡಿದೆ ಎಂಬು ಗೊತ್ತಾಗುತ್ತದೆ. ಇದು ಯಾವುದೋ ಸರ್ಕಾರವನ್ನು ಕುರಿತು ಹೇಳಿದ್ದಲ್ಲ. 50 ವರ್ಷಗಳಾಯಿತು; ಇ ವರ್ಷ ಜನರಿಗೆ ಏನು ಮಾಡುವುದಕ್ಕೆ ಸಾಧ್ಯವಾಯಿತು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮದು ಅದೇ ಪರಿಸ್ಥಿತಿ.

SRI J.H. PATEL : Iam not excluding myself.

ಅಧ್ಯಕ್ಷರು : ಆ ಕವಿಗಳು ನಿಮ್ಮೆಲ್ಲರನ್ನೂ ನೆನಪಿನಲ್ಲಿಟ್ಟುಕೊಂಡು ಬರೆದಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್ : ಅದಕ್ಕೆ ಈ ದಾರುಣ ಸ್ಥಿತಿ, ನಾವು ಗ್ಲೋಬಲೈಷನ್‌ನಿಂದ ಫಾರಿನ್ ಇನ್‌ವೆಸ್ಟರ್ಸ್‌ನಿಂದ, ಏನೋ ಒಂದು ಕೆಲವು ಉದ್ಯೋಗಗಳನ್ನು ಜಾಸ್ತಿ ಮಾಡುವುದರಿಂದ ಪರಿಹಾ ಮಾಡಿಬಿಡುತ್ತೇವೆಂದು ತಿಳಿದುಕೊಳ್ಳುವುದು ತಪ್ಪಾಗುತ್ತದೆ. ಈಗ ಗಾಂಧೀಜಿಯವರ ವಿಚಾರಗಳ ಮರೆತು ಹೋಗಿವೆ. ಗಾಂಧೀಜಿಯಿಸಂ ಎಂದು ಏನು ಕರೆಯುತ್ತಾರೆ, ಗಾಂಧೀಯನ್ ಏಕಾನಮಿ ಎಂದು ಏನು ಕರೆಯುತ್ತಾರೆ ಅದನ್ನು ನಾವು ಕೈಬಿಟ್ಟಿದ್ದೇವೆ. ಆದರೆ, ನಾವು ಯಾವ ಕಡೆ ಹೋಗುತ್ತಿದ್ದೇವೆ ನಮ್ಮ ಮಾಡೆಲ ಏನು? ಜಪಾನಾ, ಜರ್ಮನಿನಾ, ಅಮೆರಿಕಾನಾ, ರಷ್ಯಾನಾ, ಇಲ್ಲ ಇಲ್ಲ. ಅದೂ ಅ ಇದೂ ಅಲ್ಲ. ಅದಷ್ಟು ಇದಷ್ಟು ಅನ್ನುವ ಹಾಗೆ ಮಾಡಿ, ಇವತ್ತು ನಮ್ಮದೇ ಆದಂತಹ ಒಂದು ಐಡೆಂಟಿ ಉಳಿಸಿಕೊಂಡಿಲ್ಲ. ಗಾಂಧೀಜಿಯವರು ಮಾಡರ್ನೈಜೇಷನ್‌ಬಗ್ಗೆ, ಇಂಡಸ್ಟ್ರೀಯಲೇಷನ್ ಬಗ್ಗೆ ವಿರೋ ಮಾಡಲಿಲ್ಲ. ಅವರು ಸ್ಮಾಲ್ ಮೆಷಿನ್ ಟೆಕ್ನಾಲಜಿಯನ್ನು ಏಕೆ ಹೇಳಿದರು ಎಂದರೆ ಈ ದೇಶ ಪ್ರಜಾಸಂಖ್ಯೆ ಹೆಚ್ಚಾಗಿದೆ. ಅದು ಹಾಗೆ ಆಗುತ್ತಿದೆ, ಗ್ರಾಮಗಳ ಕೈಗಾರಿಕೆಗಳನ್ನು ತೆಗೆದರೆ, ಗ್ರಾಮಾಗ ಸ್ವರಾಜ್ಯ ತೆಗೆದರೆ, ಇಂಥ ಒಂದು ಸ್ಥಿತಿ ಬರುತ್ತದೆಂದು ಅವರು ಆಗಲೇ ಬರೆದಿಟ್ಟು ಹೋಗಿದ್ದಾರೆ ಅವರು ಆಗಲೇ ವಿಜುಯಲೈಸ್ ಮಾಡಿದ್ದಾರೆ. ಇದು ಎಂತಹ ಕಾರ್ಖಾನೆಯಾಗಬಹುದು? ಭಾರತ ಎಂದರೆ, ಈ ದಾರಿ ಹಿಡಿದರೆ ಇದು ಯಾವ ಸ್ಪೇರ್ ಪಾರ್ಟ್ಸ್ ಸರಿಯಿಲ್ಲದಿರುವ ಮಟ್ಟಿಗೆ ಹೋ ಬಹುದು ಎಂದು ಹೇಳಿದ್ದಾರೆ. ಆದರೆ ನಾವು ಈಗಾಗಲೇ ಆ ದಾರಿ ಹಿಡಿದೇ ಬಂದು ಬಿಟ್ಟಿದ್ದೇವೆ. 5(ವರ್ಷ ಬಂದಾಯಿತು. ವಾಪಸ್ ಹೋಗುವ ಹಾಗೆ ಇಲ್ಲ. ಗಾಂಧೀಯಿಸಂ ಬಗ್ಗೆ ಯಾರಾದರೂ ಹೇಳಿದರೆ ಅವನು ಪ್ರೋಗ್ರೇಸೀವ್ ಇಲ್ಲ ಅನ್ನುವ ಸ್ಥಿತಿ ಬಂದಿದೆ. ಏನು ಮಾಡುವುದು? ನಮ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಂ ಅಥವಾ ಇಂಡಸ್ಟ್ರಿಯಲೈಜೇಷನ್ ಹೀಗೆ 2-3 ವಿಷಯಗಳ ಬಗ್ಗ ನಿಮಗೆ ಇವತ್ತಿಗೂ ಇನ್ನೂ ಕನ್‌ಫ್ಯೂಷನ್ ಇದೆ. ಖಾಸಗೀಕರಣ ಅನ್ನುತ್ತಾರೆ, ನಮ್ಮಲ್ಲಿ ಇವತ್ತು ಖಾಸಗೀ ಬಂಡವಾಳವಿಲ್ಲ. ಖಾಸಗಿ ಬಂಡವಾಳವನ್ನು ನಾವು ಇವತ್ತು ನಿರೀಕ್ಷೆ ಮಾಡುತ್ತೇವೆ. ನಾವ ರಸ್ತೆ ರಿಪೇರಿಗೂ ಕೂಡ ಖಾಸಗಿ ಬಂಡವಾಳವನ್ನು ತೊಡಗಿಸಿಕೊಳ್ಳುವಂತಹ ಸ್ಥಿತಿ ಬಂದಿದ್ದೇವೆ.

ಏಕೆಂದರೆ, ಸಮಾಜವಾದ ಎಂದರೆ ಆಗ ಸ್ಟೇಟಿಸ್ಂ ಎಂದಿತ್ತು. ಇವತ್ತು ಸ್ಟೇಟ್ ಅಲ್ಲಿ ಆಸ್ತುವ ಸ್ಥಿತಿ ಇದೆ. ಉದ್ಯೋಗವನ್ನೂ ಅವರೇ ನಡೆಸಲಿ, ಅಗ್ರಿಕಲ್ಚರ್‌ನ್ನೂ ಅವರೇ ನಡೆಸಲಿ ಎಲ್ಲಾ ಅವರೇ ಮಾಡಲಿ ಜೀವನಕ್ಕೆ ಬೇಕಾಗುವ ರೇಷನ್ ಕೂಡ ಅವರೇ ಕೊಡಲಿ ಎಂದು ಇತ್ತು. ಯೂರೋಪ್‌ನಲ್ಲಿ ಮೊದಲು ಅದಕ್ಕೆ ವಿರೋಧ ಬಂತು. ಅನಂತರ ಸ್ವಯಂ ಸೋವಿಯತ್-ಯೂನಿಯನ್‌ನಲ್ಲೇ ವಿರೋಧ ಬಂತು. ಆ ರೀತಿಯ ಸ್ಟೇಟಿಸಂ ಹೋಯಿತು. ಈ ಕ್ಯಾಪಿಟಾಲಿಸ್ಂ ಏನಿದೆ, ಅದರಲ್ಲಿ ಕೆಲವು ಒಳ್ಳೆಯ ಗುಣಗಳಿವೆ. ಅದನ್ನು ನಾವು ಏಕೆ ವಿರೋಧ ಮಾಡಬೇಕು? ಕಾಂಪಿಟೇಟಿವ್ ವರ್ಲ್ಡ್, ಓಪನ್ ಮಾರ್ಕೆಟ್ ಇವೆ ಹೊಸ ಹೊಸ ಕಾನ್‌ಸೆಪ್ಟ್‌ಗಳು ಏನಿವೆ, ಇವತ್ತು ನಾವು ಫ್ರೀ ಮಾರ್ಕೆಟ್ ಎಕಾನಮಿ ಎಂದು ಏನು ಕರೆಯುತ್ತೇವೆ, ಅದನ್ನು ಮಾಡಿಕೊಂಡು, ಇವತ್ತು ಎಲ್ಲಾ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕುಸಿಯುತ್ತಾ ಹೋಗುತ್ತಿದೆ. ನಮ್ಮ ಪ್ರೊಜೆಕ್ಷನ್ ಏನಿದೆ, ಸರ್ಕಾರದ ಸ್ವಾಮಿತ್ವದಿಂದ ಆಗಬೇಕೆಂದು ಹೇಳುವುದು; ಸರ್ಕಾರದ ಸ್ವಾಮಿತ್ವದ ಕಾರ್ಖಾನೆಗಳು ಹಲವಾರು In built defects, Management defects, non-answerability. ಉತ್ತರದಾಯಕ ಇಲ್ಲ ಆಸ್ತುವ ರೀತಿಯಲ್ಲಿ ಆಗಿವೆ. ಇವತ್ತ ಇಷ್ಟು ವರ್ಷ ನಾವು ಹಾಕಿರತಕ್ಕಂಥ ಬಂಡವಾಳಕ್ಕೆ ಲಾಭ ಬೇಡ, ಲಕ್ಸಾನ್‌ನ್ನು ನಾವು ಅನುಭವಿಸುತ್ತಿದ್ದೇವೆ. ಆದ್ದರಿಂದ ಈಗ ಪ್ರೈವೇಟೈಸೇಷನ್ ಬೇಕು, ಪ್ರೈವೇಟ್ ಕ್ಯಾಪಿಟಲ್ ಇನವೆಸ್ಟರ್ಸ್ ಎಲ್ಲಾ ಹರಿಶ್ಚಂದ್ರರು ಎಂದು ನಾನು ಹೇಳುವುದಿಲ್ಲ. ಪ್ರೈವೇಟ್ ಇನ್‌ವೆಸ್ಟರ್ಸ್ ಹಣ ಸಾಕಷ್ಟು ಪಬ್ಲಿಕ್ ಮನಿಯನ್ನು ಇನ್‌ವೆಸ್ಟ್ ಮಾಡುವುದು. 10-15 ಪರ್ಸೆಂಟ್ ಅವನದು ಹಾಕಿರುತ್ತಾನೆ, ಇನ್ನೊಂದು 85 ಪರ್ಸೆಂಟ್ ಬ್ಯಾಂಕಿನಿಂದ ತೆಗೆದುಕೊಳ್ಳುತ್ತಾನೆ. ಬ್ಯಾಂಕಿನಿಂದ ತೆಗೆದುಕೊಳ್ಳುವುದು ಪ್ರೈವೇಟ್ ಕ್ಯಾಪೀಟಲ್ ಅಲ್ಲ. ಅದು ಪಬ್ಲಿಕ್ ಕ್ಯಾಪಿಟಲ್. ಆದರೆ, ಬ್ಯಾಂಕಿನಿಂದ ಹಣ ತೆಗೆದುಕೊಳ್ಳುವವರೆಗೆ, ಅವನು ಬಹಳ ಹುಷಾರಾಗಿರುತ್ತಾನೆ. ಆಮೇಲೆ ಕೆಲವರು ಸಕ್ಸಸ್‌ಫುಲ್ ಆಗಿದ್ದಾರೆ, ಕೆಲವರು ಬ್ಯಾಂಕೂ ಇಲ್ಲ, ಕಾರ್ಖಾನೆಯೂ ಇಲ್ಲ, ಅವರೂ ಇಲ್ಲ, ಹಾಗೂ ಆಗಿದೆ. ಆದ್ದರಿಂದ ಸರ್ಕಾರಿ ಸ್ವಾಮ್ಯದ ಕಾರ್ಖಾನೆಗಳಾಗಲೀ, ಖಾಸಗೀಕರಣ ವಗಾಲೀ ಆಬ್ಸಲ್ಯೂಟಿಲಿ ಅದೇ ಉತ್ತರವಲ್ಲ. ನಾವು ಎರಡರ ಮಧ್ಯೆ ಇದ್ದೇವೆ.

1.30 ಪಿ.ಎಂ.

ಮಾನ್ಯ ಅಧ್ಯಕ್ಷರೆ, ಕ್ಯಾಪಿಟಲಿಸಂ ಅದರ ಫಾರಂ ಏನಿತ್ತು ಅದು ಛೇಂಜ್ ಆಗುತ್ತಿದೆ. In the century old, capitalism was somewhat harsh, crude. ಜನರನ್ನು ಕುದುರೆ ಕಟ್ಟಿದಹಾಗೆ ಕಟ್ಟಿ ಎಳೆಸುತ್ತಿದ್ದರು. ಈಗ ಅದು ಇಂಪ್ರೂವೈಸ್ ಆಗಿದೆ. ಸ್ವಲ್ಪ ಸಾಫ್ಟ್ ಆಗಿದೆ. ಮೇಲಾಗಿ ಆ ಕ್ಯಾಪಿಟಲಿಸ್ಟ್ ಸಿಸ್ಟಂನಲ್ಲಿ ಮನುಷ್ಯನಿಗೆ ಕೆಲವು ಸವಲತ್ತುಗಳು ಏನು ಸಿಗುತ್ತವೆ, ಆ ಸವಲತ್ತುಗಳನ್ನು ಕೇಳಿದರೇನೆ ಆಕರ್ಷಣೀಯ. ನಾನು ನ್ಯೂಯಾರ್ಕ್ ಹತ್ತಿರ ನನ್ನ ಸ್ನೇಹಿತರ ಮನೆಯಲ್ಲಿದ್ದೆ. ಅವರ ಮನೆಗೆ ಹುಲ್ಲು ಕೆತ್ತುವವನು ಬಂದು. ಅವನು ಬಂದ ಒಂದು ಗಂಟೆ ಕೆಲಸ ಮಾಡಿ ಕಾರಿನಲ್ಲಿ ಹೋಗುತ್ತಿದ್ದ. ಅವನಿಗೆ ಒಂದು ಗಂಟೆಗೆ 50 ಡಾಲರ್. ಹಾಗ ಅವನು ನಾಲ್ಕು ಕಡೆ ಹೀಗೆ ಹುಲ್ಲನ್ನು ಕೆತ್ತಿ ಮನಗ ಹೋಗಿಬಿಟ್ಟರೆ ಸಾಕು. ಇನ್ನೊಂದು ದಿವಸ ನಮಗ ಪ್ರೈವೇಟ್ ಕಾರ್‌ಗೆ ಡ್ರೈವರ್ ಬೇಕಾಗಿತ್ತು. We had to pay 150 dollars a day. ಅಂದರೆ 5 ಸಾವಿರ ರೂಪಾಯಿ. ಆ ಸವಲತ್ತುಗಳಿರುವುದರಿಂದ ಅಮೆರಿಕನ್ ಪ್ರೆಸಿಡೆಂಟ್‌ಗೆ ಇರುವ ಸವಲತ್ತು ಮತ್ತು ಅಮೆರಿಕಾದಲ್ಲಿ ಕಡಿಮೆ ಕೂಲಿ ಇರುವವನು ಇವರ ಅನಂತರ

ಏನಿವೆ ಅದಕ್ಕಿಂತ ದೊಡ್ಡ ಅಂತರ ಇದೆ ನಮ್ಮ ದೇಶದಲ್ಲಿ. ನಮ್ಮದು ಶ್ರೀಮಂತ ರಾಷ್ಟ್ರ ಅಲ್ಲದಿದ್ದರೂ, ಈ ಗ್ಯಾಪ್ ಮಾತ್ರ ಭಾರಿ ಇದೆ. ಅಮೆರಿಕಾನೂ ಇದೆ ನಮ್ಮ ದೇಶದಲ್ಲಿ, ಜಪಾನೂ ಇದೆ. ಇವತ್ತು ಎಲ್ಲೋ ಒಂದು ಕಡೆ ಫೋಟೋ ಬಂದಿತ್ತು ಸೌತ ಆಫ್ರಿಕಾ ದೇಶದ ಹಸಿದ ಮಕ್ಕಳ ಫೋಟೊ. ಆ ಸೌತ್ ಆಫ್ರಿಕನ್ ಬ್ಯಾಕ್‌ವರ್ಡ್ ಸ್ಟೇಟ್ಸ್‌ಗೆ, ಎಲ್ಲಾ ಸಂಗ್ರಹ ಮಾಡಿ ಇಟ್ಟುಕೊಂಡಿದ್ದೇವೆ ನಮ್ಮ ಇಂಡಿಯನ್ ಮ್ಯೂಸಿಯಂನಲ್ಲಿ. ಅಮೆರಿಕ, ಜಪಾನ್, ಆಫ್ರಿಕಾ. ಆದ್ದರಿಂದ ನಾವು ಸ್ವಲ್ಪ ಆಳವಾಗಿ ಆಲೋಚನೆ ಮಾಡಿ ಏನಾದರೂ ಇವುಗಳಿಗೆ ಸೂಕ್ತವಾದ ಪರಿಹಾರವನ್ನು ಕಂಡುಹಿಡಿಯದೇ ಇದ್ದರೆ ಪರಿಸ್ಥಿತಿ ಹತೋಟಿಗೆ ಬರಲಾರದು. ಇವತ್ತು ರೈಲ್ವೆ ಬಜೆಟ್ ಬಂದಿದೆ. ರೈಲ್ವೆ ಬಜೆಟ್ ಬಗ್ಗೆ ಕರ್ನಾಟಕದ ಪರಿಯಿಂದ ಹೇಳುವುದಾದರೆ ಬಹಳ ಒಳ್ಳೆಯ ಕೆಲಸವಾಗಿದೆ. ಬಹಳ ಹೆಚ್ಚಿನ ಇನ್‌ವೆಸ್ಟ್‌ಮೆಂಟ್ ಆಗಿದೆ. ಹಿಂದೆ ಇದ್ದ ಜಾಫರ್ ಷರೀಫ್‌ಅವರೂ ಕೂಡ ಮಾಡಿದ್ದರು. ಇಲ್ಲಿ ಎಂದು ಹೇಳುವುದಿಲ್ಲ. ಆದರೆ ಈ ಎಲ್ಲಾ ಹಿನ್ನೆಲೆಯಲ್ಲಿ ನಾವು ಇವತ್ತು ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಬಗ್ಗೆ. ಮತ್ತೊಮ್ಮೆ ಆಲೋಚನೆ ಮಾಡಬೇಕು. ನಾನು ನನ್ನ ಸಹೋದ್ಯೋಗಿಗಳಿಗೆ ಹೇಳಿದ್ದೇನೆ. ಯಾವುದು ಯಾವುದು ರಿಪೇರಿ ಮಾಡುವುದಕ್ಕೆ ಆಗುವುದಿಲ್ಲವೋ, ಅವನ್ನು ಹರಾಜು ಹಾಕೋಣ ಎಂದು. ಏಕೆಂದರೆ ಸುಮ್ಮನೆ ಅದಕ್ಕೆ ದುಡ್ಡು ಹಾಕಿಕೊಳ್ಳುತ್ತಾ ಹೋಗುವುದರಿಂದ ಉಪಯೋಗವಾಗುವುದಿಲ್ಲ. ಲೇಬರ್ ಸಮಸ್ಯೆ ಬರುತ್ತದೆ. ಆ ಲೇಬರ್ ಸಮಸ್ಯೆಯನ್ನು ಹೇಗೆ ಪರಿಹರಿಸಬೇಕು ಅದರ ಬಗ್ಗೆ ಆಲೋಚನೆ ಮಾಡಬೇಕೇ ಹೊರತು ಬರೀ ಶಾಸ್ತ್ರಕ್ಕೋಸ್ಕರ ಇಟ್ಟುಕೊಂಡರೆ ಏನೂ ಪ್ರಯೋಜನ ಇಲ್ಲ. ಈ ಸಿಕ್ ಇಂಡಸ್ಟ್ರೀಸ್ ಏನಿವೆ ಅದನ್ನು we want to dispose them off ಹಣವನ್ನು ನಾವು ಬೇರೆಯದಕ್ಕಾದರೂ ಉಪಯೋಗ ಮಾಡಿಕೊಳ್ಳಬೇಕು. ಆದ್ದರಿಂದ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ಲಾ ಅಂಡ ಆರ್ಡರ ಬಗ್ಗೆ ಹೇಳಬೇಕಾದರೆ ಒಟ್ಟಾಗಿ ಅದು ಸಮಾಧಾನಕರವಾದ ಸ್ಥಿತಿಯಲ್ಲಿದೆ. ತೀರಾ ಕಳವಳ ಪಡುವಂಥ ಸ್ಥಿತಿಯಲ್ಲಿಲ್ಲ. ಆಮೇಲೆ ಎರಡು ಮೂರು ಜ್ಯುಡಿಷಿಯಲ್ ಎನ್‌ಕ್ವೈರಿಗಳು ಏನು ಮಾಡಿದ್ದೆವು, ಮೊನ್ನೆ ಹೆಜ್ಜಾಲದಲ್ಲಿ ನಡೆದ ಘಟನೆ ಬಗ್ಗೆಯಾಗಲೀ ಕೋಲಾರ ಜಿಲ್ಲೆಯಲ್ಲಿ ನಡೆದ ಘಟನೆ ಬಗ್ಗೆಯಾಗಲೀ, ಏತಕ್ಕೆ ಜ್ಯುಡಿಷಿಯಲ್ ಎನ್‌ಕ್ವೈರಿಯನ್ನು ತಕ್ಷಣ ಆರ್ಡರ್ ಮಾಡಿದೆವು ಅಂದರೆ, ಅಲ್ಲಿ ಪ್ರೈಮಾಫೇಸಿ ಏನೋ ತಪ್ಪಿರಬಹುದೇನೋ ಎನ್ನುವಹಾಗೆ. ರಿಪೋರ್ಟ್ ಬಂದಿದ್ದರಿಂದ. ಸರ್ಕಾರದವರು ಅದನ್ನು ಪ್ರೆಸ್ಟೀಜ್ ಎಂದು ತಿಳಿದುಕೊಂಡು ಮಾಡದೇ ಇರಬಹುದಾಗಿತ್ತು. ಮಾಡದೇ ಇದ್ದರೆ ಯಥಾಪ್ರಕಾರ ತಾವು ಒತ್ತಾಯ ಮಾಡುತ್ತಿದ್ದಿರಿ. ಅದು ಸರಿ ಎಂದು ಕಂಡರೆ ಒಪ್ಪಿಕೊಳ್ಳಬೇಕಾಗಿತ್ತು. ಅದಕ್ಕೋಸ್ಕರ ನಾವೆ ಮೊದಲು ಅದನ್ನು ನೀವು ಕೇಳುವುದಕ್ಕಂತ ಮುಂಚೆಯೇ ಮಾಡಿದ್ದೇವೆ. ಆದಷ್ಟು ಬೇಗ ವರದಿ ವರದಿಯನ್ನು ತರಿಸಿಕೊಳ್ಳುತ್ತೇವೆ. ಸಾಮಾನ್ಯವಾಗಿ ಎಲ್ಲರ ಕ್ರಿಟಿಸಿಸಂ ಅಂದರೆ ಒಂದು ಪೋಲೀಸ್, ಒಂದು ಕೆ.ಇ.ಬಿ. ಒಂದು ಕೆ.ಎಸ್.ಆರ್.ಟಿ.ಸಿ., ಕೆ.ಇ.ಬಿ. ಬಗ್ಗೆ ಹೇಳಬೇಕೆಂದರೆ ವಾಸ್ತವಿಕವಾಗಿ ನಮ್ಮ ರಾಜ್ಯಕ್ಕೆ ಎಷ್ಟು ವಿದ್ಯುತ್ ಕೊರತೆ ಇದೆ ಎಂಬುದು ಎಲ್ಲರಿಗೂ ಗೊತ್ತಿದೆ. ನಮ್ಮ ರಾಜ್ಯಕ್ಕೆ ಇವತ್ತು ಸುಮಾರು ಆರೂವರೆ ಸಾವಿರ ಮೆಗಾವ್ಯಾಟ್ ವಿದ್ಯುಚ್ಛಕ್ತಿ ಕೊರತೆ ಇದೆ. ಆರೂವರೆ ಸಾವಿರ ಮೆಗಾವ್ಯಾಟ್ ಕೊರತೆ ಇದ್ದರೂ ಆ ಕಡೆಗೆ ಕಳೆದ ಐದು ವರ್ಷದಿಂದ ಏನೂ ಪ್ರಯತ್ನ ಮಾಡದೇ ಇದ್ದುದ್ದರಿಂದ ಇಂಥ ಪರಿಸ್ಥಿತಿ ಉಲ್ಬಣವಾಗಿದೆ.

ಇನ್ನು ಕೆ.ಇ.ಬಿ. ಬಗ್ಗೆ ಒಂದು ಸಣ್ಣ ಚಿತ್ರವನ್ನು ಕೊಟ್ಟು ಬಿಡುತ್ತೇನೆ. ನಮ್ಮ ಒಟ್ಟು ಗ್ರಾಹಕರು ಸುಮಾರು 75 ಲಕ್ಷ ಜನ. ವರ್ಷಕ್ಕೆ 3 ಲಕ್ಷ ನಮಗೆ ಜಾಸ್ತಿ ಕನೆಕ್ಷನ್ ಕೇಳುತ್ತಾರೆ. ನಾನು ಮೊದಲು ನಮ್ಮ ಸರ್ಕಾರದ ಬಂದಮೇಲೆ ಯಾವ ಯಾವ ಪ್ರಾಜೆಕ್ಟ್‌ಗಳನ್ನು ಕ್ಲಿಯರ್ ಮಾಡಿದ್ದೇವೆ ಎಂಬ ಬಗ್ಗೆ ಹೆಸರುಗಳನ್ನು ಹೇಳಿಬಿಡುತ್ತೇನೆ. No. of projects which we have cleared- Barge-mounted- Smith & Co- Generation 2 projects near Mangalore. M/s.Euro captain. one project near Mangalore. Universal Water and Power Corporation. one project near Kumta. ಇನ್ನೊಂದು ಇನ್ನೂ ಕ್ಲೀಯರ್ ಆಗಿಲ್ಲ. ಈ ಮೂರು ಕ್ಲಿಯರ್ ಆಗಿವೆ. ಈ ಬಾರ್ಜಮೌಂಟೆಡ್‌ಪ್ರಾಜೆಕ್ಟ್ ಏನಿದೆ ಇದು ಮೊದಲನೇಯ ಬಾರಿಗೆ ನಮ್ಮ ರಾಷ್ಟ್ರದಲ್ಲಿ ಪ್ರಯೋಗ ಆಗುತ್ತಿರುವುದು. ಆದಷ್ಟು ಬೇಗ ಇಂಧನ ಸಿಗಲಿ ಎಂದು ಒಟ್ಟು 600 ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಕೊಡುತ್ತವೆ ಈ ಮೂರು ಪ್ರಾಜೆಕ್ಟ್‌ಗಳಿಂದ ಅವರಿಗೆ ಪ್ರಾಜೆಕ್ಟ್ ಕ್ಲಿಯರ್ ಆಗಿದೆ. ಫ್ಯುಯಲಿ ಲಿಂಕೇಜ್ ಎಸ್ಟಾಬ್ಲಿಷ್ ಆಗಿದೆ. ಕೇಂದ್ರ ಸರ್ಕಾರ ಕ್ಲಿಯರ್ ಮಾಡಿದೆ. ಪವರ್ ಪರ್ಚೇಸ್ ಅಗ್ರಿಮೆಂಟ್ ಆಗಿದೆ. ಇನ್ನು ಎನ್‌ವಿರಾನ್‌ಮೆಂಟಲ್ ಕ್ಲಿಯರೆನ್ಸ್‌ಗೋಸ್ಕರ ಅವರು ಪ್ರಯತ್ನ ಮಾಡುತ್ತಿದ್ದಾರೆ. ಅದೂ ಸಿಗುತ್ತದೆ. ಕಂಪ್ಯಾರಿಟಿವಿಲಿ ಕೋಲ್ ಬೇಸ್ಡ ಪವರ್‌ಸ್ಟೇಷನ್‌ಗಿಂತ ಈ ನ್ಯಾಫ್ತಾಬೇಸ್ಡ್ ಪವರ್‌ಸ್ಟೇಷನ್ ಇದು........ಆದ್ದರಿಂದ ನಮ್ಮದೇ ಆದಂಥ ಕೆ.ಪಿ.ಸಿ. ಪ್ರಾಜೆಕ್ಟಗಳಲ್ಲಿ ಮುಂದಿನ ತಿಂಗಳು ಮೊದಲನೇ ಬಾರಿಗೆ 40 ಮೆಗಾವ್ಯಾಟ್ ಹೈಡಲ್ ಪವರ್ ಜನರೇಷನ್ ಆಗುತ್ತಾ ಇದೆ. ಮೊದಲನೇ ಬಾರಿಗೆ ನಮ್ಮ ರಾಜ್ಯದಲ್ಲಿ ಮುಂದಿನ ತಿಂಗಳು 50 ಮೆಗಾವ್ಯಾಟ್ ನಮ್ಮದೇ ಜನರೇಷನ್ ಆಗುತ್ತಾ ಇದೆ. ಕಪ್ಪದಗುಡ ದಲ್ಲಿ ಎರಡು ಮೆಗಾವ್ಯಾಟ್ ವಿಂಡ್ ಮಿಲ್‌ನಿಂದ ಮಾಡುತ್ತಾ ಇದ್ದೇವೆ. ಡಿಸೆಂಬರೊಳಗಾಗಿ ಇನ್ನು 50 ಮೆಗಾವ್ಯಾಟನದು ಸೆಕೆಂಡ್ ಸ್ಟೇಷನ್ನನ್ನು ಕಮಿಷನ್ ಮಾಡುತ್ತೇವೆ. This is the first addition. ಆದ್ದರಿಂದ ಮಾನ್ಯ ಅಧ್ಯಕ್ಷರೆ ಕೆ.ಇ.ಬಿ. ಕಾರ್ಯ ಅಲ್ಲಲ್ಲಿ ಅಷ್ಟೊಂದು ಸಮಾಧಾನಕರವಾಗಿ ಇಲ್ಲದೇ ಇರಬಹುದು. ಆದರೂ ಇದ್ದುದರಲ್ಲಿ ಈಗಿರತಕ್ಕ ನಮ್ಮ ವಿದ್ಯುಚ್ಛಕ್ತಿ ವಿತರಣೆಗೆ ನಾವು ಏನು ಸಿಸ್ಟಂ ಇಂಪ್ರೂವ್‌ಮೆಂಟ್‌ಮಾಡಿದ್ದೇವೆ ಅದರ ಬಗ್ಗೆ ತಮ್ಮ ಗಮನವನ್ನು ಸೆಳೆದುಬಿಡುತ್ತೇನೆ. ಆಮೇಲೆ ಜನರೇಷನ್ ಬಗ್ಗೆ ಹೇಳುವಾಗ ಅತ್ಯಂತ ಹೆಮ್ಮೆಪಟ್ಟುಕೊಳ್ಳುವಂಥ ಒಂದ ಅಚೀವ್‌ಮೆಂಟ್ ಅಂದರೆ ರಾಯಚೂರು ಥರ್ಮಲ್ ಪವರ್ ಸ್ಟೇಷನ್‌ನಲ್ಲಿ, ನಾವು ಬಂದಮೇಲೆ 210 ಮೆಗಾವ್ಯಾಟ್ ಅಡಿಷನ್ ಮಾಡಿದದು, ಈಗ 210+210 ಒಟ್ಟು 420 ಮೆಗಾವ್ಯಾಟ್‌ನ ಎರಡು ಪ್ರಾಜೆಕ್ಟ್ ಕೆಲಸ 1350 ಕೋಟಿ ಸಾಲ ಪಡೆದು ಕೆಲಸ ಪ್ರಾರಂಭ ಮಾಡಿದ್ದೇವೆ. ಇಷ್ಟು ವೇಗವಾಗಿ ಕೆಲಸ ಹಿಂದೆಂದೂ ಆಗಿರಲಿಲ್ಲ. ಇನ್ನೂ ಎರಡು ಅಡಿಷನಲ್ ಪವರ್ ಜನರೇಟಿಂಗ್ ಸ್ಟೇಷನ್ಸ್ ಅವು ಒಂದು 18 ತಿಂಗಳಲ್ಲಿ ಆಗಬಹುದು, ಇನ್ನೊಂದು 24 ತಿಂಗಳಲ್ಲಿ ಆಗಬಹುದು. ಮುಂದಿನ ವರ್ಷ ಮಳೆಗಾಲ ಚೆನ್ನಾಗಿ ಆದರೆ ಜೂನ್ ಜುಲೈನಲ್ಲಿ, ನಮಗೆ ಏನು ಈ ವರ್ಷ ಕೊರತೆ ಆಯಿತು, ಜಲಾಶಯಗಳಿಗೆ ನೀರು ಬರಲಿಲ್ಲ, ನಮಗೆ ಏನು ಈ ವರ್ಷ ಕೊರತೆ ಆಯಿತು, ಜಲಾಶಯಗಳಿಗ ನೀರು ಬರಲಿಲ್ಲ, ಅದಕ್ಕೋಸ್ಕರ ನಾವು ಅನಿವಾರ್ಯವಾಗಿ ಈ ಪವರ್ ಕಟ್ಟನ್ನು ಲೋಡ್ ಶೆಡ್ಡಿಂಗ್‌ನ್ನು ಜನರ ಮೇಲೆ ಹಾಕಬೇಕಾಯಿತು. ಇಂಥ ಕಠಿಣ ಪರಿಸ್ಥಿತಿ ಮುಂದಿನ ಮಳೆಗಾಲದ ನಂತರ ಇರುವುದಿಲ್ಲ. ಮೇಲಾಗಿ ನಮ್ಮ ಸಿಸ್ಟಂ

ಇಂಪ್ರೂವ್‌ಮೆಂಟಿಗೂ ಸಾಕಷ್ಟು ಹೊಸ ಸಬ್‌ಸ್ಟೇಷನ್ನ ಕಮಿಷನ್ ಮಾಡಿದೆ. 1993-94ರಲ್ಲಿ 32 ಆಗಿದೆ. ಅವರು ಸ್ಯಾಂಕ್ಷನ್ ಮಾಡಿರುವುದು 23 , ಆದರೆ ಸ್ಯಾಂಕ್ಷನ್‌ಗಿಂತ ಜಾಸ್ತಿ ಮಾಡಿದೆ. 1994-95ರಲ್ಲೂ 39 ಸ್ಯಾಂಕ್ಷನ್ ಮಾಡಿ 44 ಕಮಿಷನ ಮಾಡಿದೆ. 1995-96ರಲ್ಲಿ 60ನ್ನು ಸೇರಿಸಿದೆ. 1996-97ನೇ ಈಗಾಗಲೇ 18 ಕಂಪ್ಲೀಟ್‌ಆಗಿದೆ. ಆದ್ದರಿಂದ ಈ ಸಿಸ್ಟಂ ಇಂಪ್ರೂಮೆಂಟ್, ಟ್ರಾನ್ಸಮಿಷನ್ ಸಿಸ್ಟಂ, ಡಿಸ್ಟ್ರಿಬ್ಯೂಷನ್ ಸಿಸ್ಟಂ ಇವುಗಳನ್ನು ಬಹಳ ವ್ಯವಸ್ಥಿತವಾಗಿ ಈಗ ಶುರು ಮಾಡಿದ್ದೇವೆ. ಎನರ್ಜಿ ಆಡಿಟನ್ನು ಶುರು ಮಾಡಿದೆ. ವಾಸ್ತವವಾಗಿ ರೈತರ ಮೇಲೆ ಹೇಳಿ 43 ಪರ್ಸೆಂಟ್ ರೈತರಿಗೆ ಫ್ರೀಯಾಗಿ ಹೋಗುತ್ತದೆ ಎನ್ನುತ್ತಿದ್ದೇವೆ. ಅದು ಅಷ್ಟು ವೈಜ್ಞಾನಿಕವಾಗಿ ಅಲ್ಲ ಎಂದ ನನಗೂ ಗೊತ್ತಾಗಿದೆ. ಕೃಷಿಗೋಸ್ಕರ ಎಷ್ಟು ವಿದ್ಯುತ್‌ನ್ನು ನಾವು ಕೊಡುತ್ತೇವೆ, ನಾವು ಏನೇ ಸಬ್ಸಿಡೈಸ್ ಮಾಡಲಿ, ಎಷ್ಟು ಕೊಡುತ್ತೇವೆ ಎಂಬುದು ನಮಗೆ ಇವತ್ತು ಖಚಿತ ಆಗಬೇಕು. ಅದಕ್ಕೋಸ್ಕರ ಇವತ್ತು 10 ಲಕ್ಷ ಕನ್‌ಸ್ಯೂಮರ್ಸ್ ಇದ್ದಾರೆ; 10 ಲಕ್ಷ ಮೀಟರ್ ಹಾಕಬೇಕಾಗುತ್ತದೆ. ಅದಕ್ಕೆ ಸುಮಾರು 100 ಕೋಟಿ ರೂಪಾಯಿ ಬೇಕಾಗುತ್ತದೆ. ಆದರೂ ಚಿಂತೆ ಇಲ್ಲ. ಇದಕ್ಕೆ ರೈತರು ಸಹಕರಿಸಬೇಕು. ಏಕೆಂದರೆ ನಾವು ಮೀಟರ್ ಹಾಕದೆ ಏನಾಗಿದೆ? ಒಟ್ಟು 35% of the total consumed electricity is billed. Nearly 65% is not billed. ಹಣ ಬರಲಿಲ್ಲ. ಹಾಗಾಗಿ ವಿದ್ಯುಚ್ಛಕ್ತಿ ಮಂಡಳಿ ವರ್ಷೇ ವರ್ಷೇ ಕರಗಿಹೋಗುವ ಸ್ಥಿತಿಗೆ ಬಂದು ಇವತ್ತು ಈ ದುಃಸ್ಥಿತಿಯಲ್ಲಿದ್ದೇವೆ. ಅದಕ್ಕೇ ಈ ಸಂದರ್ಭದಲ್ಲಿ ನಾವು ಬೇರೆ ಕಡೆಯಿಂದ ಸಾಲ ತೆಗೆದುಕೊಂಡುಬಂದು ಇಂಪ್ರೂವ್‌ಮೆಂಟ್ ಮಾಡುವುದು, ಈಗ ಏಶಿಯನ್ ಡೆವಲಪ್‌ಮೆಂಟ್‌ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡಿದ್ದೇವೆ, ಪವರ್ ಫೈನಾನ್ಸ್ ಕಾರ್ಪೊರೇಷನ್‌ನಿಂದ ತಂದಿದ್ದೇವೆ. ವರ್ಲ್ಡ್ ಬ್ಯಾಂಕಿನಿಂದ ತಂದಿದ್ದೇವೆ. ಈಗ ಅವುಗಳನ್ನೆಲ್ಲ ರೀಪೆ ಮಾಡಬೇಕಾಗಿದೆ. ಹೀಗೆ ರೀಪೇ ಮಾಡಬೇಕಾದರೆ ಇದು ಯಾವುದೋ ಒಂದು ಸೆಕ್ಟರ್, ಅವರೇ ಎಲ್ಲವನ್ನೂ ಕೊಡಬೇಕು, ಅವರದ್ದೇ ಟ್ಯಾಕ್ಸ್ ಜಾಸ್ತಿ ಮಾಡಬೇಕು ಎಂದರೆ ಅದು ಆಗುವುದಿಲ್ಲ. ಹಾಗೆ ಮಾಡಿದರೆ ಅದು ಇನ್ನೊಂದು ತರಹ ಆಗುತ್ತದೆ. ಇಲ್ಲಿ ಪವರ್ ರೇಟ್ ಜಾಸ್ತಿ ಅಂತ ಆಂಧ್ರಕ್ಕೋ, ತಮಿಳುನಾಡಿಗೋ ಇಂಡಸ್ಟ್ರಿಗಳು ಹೋಗುವ ಸಂಭವ ಇದೆ. ಆದ್ದರಿಂದ ನಾವು ಇಂಡಸ್ಟ್ರಿಯಲ್ ಗ್ರೋತ್ ಅದರ ಕಡೆಗೂ ಗಮನ ಇಟ್ಟುಕೊಳ್ಳಬೇಕು. ನಾನು ಈ ಸಂಸ್ಥೆಗಳು, ಅಟಾನಮಸ್ ಬಾಡೀಸ್ ಏನಿವೆ, ಕೆ.ಇ.ಬಿ. ಕೆ.ಪಿ.ಸಿ. ಇವುಗಳು ಕೂಡ ತಮ್ಮ ಸ್ವಂತ ಕಾಲಮೇಲೆ ನಿಲ್ಲುವಹಾಗೆ ಆಗಬೇಕು. ಅದುಮಿಟ್ಟು ಪ್ರತಿಸಲ ತಿಂಗಳಿಗೆ ಹತ್ತುಕೋಟಿ, ಇಪ್ಪತ್ತು ಕೋಟಿ ಅಂತ ಹೀಗೆ ಮಾಡುವುದಕ್ಕೆ ಆಗುವುದಿಲ್ಲ. ಹೀಗೆ ಮಾಡಿದಿರೆ ಆ ಸಂಸ್ಥೆಗಳೂ ಉಳಿಯುವುದಿಲ್ಲ, ಸರ್ಕಾರವನ್ನೂ ನಡೆಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇವತ್ತು ನಾವು ಜನರಿಗೇ ಇದ್ದ ಸ್ಥಿತಿಯನ್ನು ಹೇಳಬೇಕು. ಹೀಗಿದೆ, ಇಷ್ಟು ಖರ್ಚಾಗಿದೆ, ಎಂದು ಹೇಳಬೇಕು. ನಾವು ಬೇರೆಕಡೆಯಿಂದ 2.20 ರೂಪಾಯಿಗೆ ಪವರ್ ತೆಗೆದುಕೊಂಡು ಬಂದು, ಇಲ್ಲಿ 1.80 ರೂಪಾಯಿಗೆ ಮಾರಿದರೆ ಹೇಗೆ? ಅದು ಯಾವ ವ್ಯವಹಾರ ಆಗುತ್ತದೆ? 1.50 ರೂಪಾಯಿಗೆ ತಂದು 1.60ಕ್ಕೆ ಮಾರಿದರೆ ಅದು ಬೇರೆ. ನಾವು ಜಾಸ್ತಿ ದುಡ್ಡು ಕೊಟ್ಟು ತೆಗೆದುಕೊಂಡುಬಂದು ಫ್ರೀಯಾಗಿ ಕೊಡುತ್ತೇವೆ ಎಂದರೆ, ಈ ವ್ಯವಹಾರ we must run these bodies commercially. ಬೇಕಾದರೆ ಆಮೇಲೆ ಸಬ್ಸಿಡೈಸ್ಡ್ ಆಗಿ ಹೆಚ್ಚಿಗೆ ಬಂದಿದ್ದನ್ನು ರೈತರ ಪರವಾಗಿ ಯಾವುದಕ್ಕಾದರೂ ಖರ್ಚು

ಮಾಡಬಹುದು. ಅವರ ಇವನ್ನು charity organisations ಆಗಿ ದಾನ ಧರ್ಮದ ಸಂಸ್ಥೆಗಳಿಗಾಗಿ ನಡೆಸುವುದಕ್ಕೆ ಆಗುವುದಿಲ್ಲ. ಅವನ್ನೆಲ್ಲಾ ಬಂದ್ ಮಾಡಬೇಕಾಗುತ್ತದೆ. ಇಲ್ಲ, ಅವೇ ಬಂದ್ ಆಗುತ್ತವೆ. ನಾವೇನೂ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಒಂದು ಪ್ರಶ್ನೆ ಇದೆ. ಹಿಂದೆ ಈ ಪ್ರೈವೇಟ್ ಕಂಪನಿಗಳು ಇದ್ದವು. ತಮಗೆ ನೆನಪು ಇರಬಹುದು, ಕೆಲವು ಸಿಟಿಗಳಲ್ಲಿ coal-based ಪವರ್ ಕಂಪನಿಗಳು ಇದ್ದವು. ಗದಗ್‌ನಲ್ಲಿತ್ತು, ಹಾವೇರಿನಲ್ಲಿತ್ತು. ಆವಾಗ, ಅವರು ಯಾವ ರೇಟ್ ಹೇಳಿದರೂ ಕೊಡುತ್ತಿದ್ದರು. ಈಗಲೂ ಯಾರಾದರೂ ಪ್ರೈವೇಟ ಕಂಪನಿಯವರು ಬಂದು, ಮಾನ್ಯ ನಂಜೇಗೌಡರು ನಂಬುತ್ತೀರೋ ಬಿಡುತ್ತೀರೋ. ನಾಲ್ಕು ರೂಪಾಯಿ ಒಂದು ಯೂನಿಟ್‌ಗೆ ಕೊಡುವುದಕ್ಕೆ ತಯಾರಿದ್ದಾರೆ. ಈಗಾಗಲೇ ಕೆಲವು ಸೋಗುಗಳಿವೆ ನಾವು ಮಾಡುತ್ತೇವೆಲ್ಲ ಎಲೆಕ್ಟ್ರಿಸಿಟಿಯಲ್ಲಿ. ನಾಲ್ಕು -ನಾಲ್ಕೂವರೆ ರೂಪಾಯಿಗೆ ವಸೂಲಿ ಮಾಡುತ್ತೇವಲ್ಲ. ಹಾಗೆ ನಮ್ಮಲ್ಲಿ ಏನಾದರೂ ಒಂದು balanced. practical. scientific approach ಇಲ್ಲದಿದ್ದರೆ ರೈತರಿಗೂ ಹಾನಿ. ಅದಕ್ಕಾಗಿ ಅವರಿಗೆ ಹೇಳಬೇಕು. ಮೊದಲನೆಯದಾಗಿ ಮೀಟರ್. ಎರಡನೇಯದಾಗಿ ನಿಮ್ಮ contribution to maintain the system - ಪ್ರಾಫಿಟ್ ಬೇಡ. ಮೇಲಾಗಿ ಅವರಿಗೆ ಶುದ್ಧವಾದಂಥ, ಸಮಯಕಾಲಿಕ ವಿದ್ಯುಚ್ಛಕ್ತಿಯನ್ನು ಕೊಟ್ಟರೆ, ರೈತರು ದುಡ್ಡು ಕೊಡುವುದಕ್ಕೆ ಇಲ್ಲ ಎನ್ನುವುದಿಲ್ಲ. ನಾವೆಲ್ಲರೂ ರೈತರ ಮಕ್ಕಳೇ, ನಾವು ಸಹ ಪಂಪುಸೆಟ್ಟು ಓಡಿಸುವವರೇ. ಅವರು ಹೇಳಿದರು, ನೀವು ದಿವಸಕ್ಕೆ ಎಂಟು-ಹತ್ತು ಗಂಟೆ ಸರಿಯಾಗಿ ಓಲ್ಟೇಜ್ ಮೇಯಂಟೇನ್ ಮಾಡಿದರೆ, ಪವರ ಕೊಟ್ಟರೆ ನಾವು ದುಡ್ಡು ಕೊಡುತ್ತೇವೆ ಅಂತ ಅವರು ಹೇಳುತ್ತಾರೆ. ನಾವು ಇಲ್ಲಿ ವಿನಾಕಾರಣವಾಗಿ ರೈತರ ಪರವಾಗಿ ಧರಣೆ ಮಾಡುತ್ತೇವೆ; ರೈತರ ಪರವಾಗಿ ವಾಕ್‌ಔಟ್ ಮಾಡುತ್ತೇವೆ. ನೀವು ಧರಣೆ ಮಾಡುವುದರಿಂದ, ಅದರಿಂದ ವಿದ್ಯುಚ್ಛಕ್ತಿ ಉತ್ಪಾದನೆ ಆಗುವುದಿದ್ದರೆ, ಅದರಿಂದ ನಮಗೇನಾದರೂ ದುಡ್ಡು ಹೆಚ್ಚಾಗುವುದಾದರೆ ದಯವಿಟ್ಟು ಮಾಡಿ. ನಾವು ಧರಣೆ ಮಾಡುವುದು ಬೇಡ ಎನ್ನುವುದಿಲ್ಲ. ಇಲ್ಲಿ ಮಾತಿನ ಶಾಖದಿಂದ ವಿದ್ಯುಚ್ಛಕ್ತಿ ಉತ್ಪನ್ನ ಆಗುವುದಿಲ್ಲ ಮಾನ್ಯ ಶಿವಪ್ಪನವರೇ...

ಶ್ರೀ ಎಚ್. ಎನ್. ಸಂಜೇಗೌಡ : ಧರಣೆ ಮಾಡಿ ವಿದ್ಯುಚ್ಛಕ್ತಿ ಉತ್ಪನ್ನ ಮಾಡುವ ಮೆಥಡ್, ಫಾರ್ಮುಲಾ ನಿಮ್ಮಲ್ಲಿ ಇದ್ದರೆ ಅದನ್ನು ಹೇಳಿಕೊಡಿ, ನಾವು ಅದನ್ನು ಮಾಡುತ್ತೇವೆ.

ಶ್ರೀ ಜೆ. ಎಚ್. ಪಟೇಲ್ : ನಾನು ಹೇಳುವುದು, ಇದರಲ್ಲಿ ಪ್ರಾಕ್ಟಿಕಲ್ ಆಗಿ ನಮಗೆ ಇರತಕ್ಕಂಥ ನಮ್ಮ ಕಷ್ಟ ಏನು? ನಮ್ಮ ಕಷ್ಟ ಎಂದರೆ ಅದು ಬರೀ ಸರ್ಕಾರದ್ದು ಅಲ್ಲ. ರೈತರ ಕಷ್ಟ ಏನು? ಉದ್ಯಮಿಗಳ ಕಷ್ಟ ಏನು? ಇದನ್ನು ನಾವು ಹೇಗೆ ಬಗೆಹರಿಸುವುದು? ಸರ್ಕಾರ ನಾವು ನಡೆಸುತ್ತೇವೆ ಎಂದರೆ, ಎಲ್ಲ ಅವರೇ ಮಾಡಿದ್ದಾರೆ ಅಂತ ಅಲ್ಲ. ಇಲ್ಲ ನೀವು ಮಾಡಲಿಲ್ಲ, ಎಲ್ಲದಕ್ಕೂ ನೀವು ಕಾರಣ, ಅಂತ ಹಾಗೆ ನಾವು ಹೇಳುವುದಿಲ್ಲ. ನೀವು ಮಾಡುವಷ್ಟು ಆಗಿನ ಫೈನಾನ್ಸ್ ಏನು ಪರ್ಮಿಟ್ ಮಾಡಿವೆ ಅಷ್ಟು ಮಾಡಿದ್ದೀರಿ. ಆದ್ದರಿಂದ, ಇಲ್ಲಿ ಕೆ.ಇ.ಬಿ. ಬಗ್ಗೆ ಬಂದಾಗ ಭಾವೋದ್ರೇಕದಿಂದ ನಾವೇನೂ ರೈತರ ಪರ ಅಲ್ಲವೇ ಅಲ್ಲ, ನಮಗೆ ಗೊತ್ತೇ ಇಲ್ಲ ಎನ್ನುವಹಾಗೆ, ಹೇಳಬಾರದು. ಈಗ ಇರತಕ್ಕಂಥ ಕಾರ್ಯಕ್ರಮಗಳನ್ನು ಕೈಗೊಂಡರೂ ಕೂಡ ಒಟ್ಟು 650 ಮೆಗಾವ್ಯಾಟ್ ಪ್ರಾಜೆಕ್ಟ್ ಏನಿದ್ದಾವೆ, next year they will come to our relief. ಸಣ್ಣ ಪ್ರಾಜೆಕ್ಟ್ ಬಗ್ಗೆ ನಾನು ಹೇಳುತ್ತಿದ್ದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಥೆ ಮುಗಿದಿದ ಬಿಡಿ.

ಶ್ರೀ ಜೆ.ಹೆಚ್. ಪಟೇಲ್ : ಏನು ಹೇಳಿದರು ?

ಅಧ್ಯಕ್ಷರು : ಕಥೆ ಮುಗಿದಿದೆ. ಇಷ್ಟೇ ಬಿಡಿರಿ ಅಂದರು.

ಶ್ರೀ ಜೆ. ಎಚ್. ಪಟೇಲ್ : ಇನ್ನೂ ಪ್ರಾರಂಭವಾಗಿದೆ. ನಿಮ್ಮ ಕಥೆ ಮುಗಿಸುವುದಕ್ಕೆ ಇನ್ನೂ ಸ್ವಲ್ಪ ಸಮಯ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕತೆ ಮುಗಿದಿದೆ, ಹೇಳುವುದಕ್ಕೆ ಏನೂ ಇಲ್ಲ ಅಂತ ನಾನು ಹೇಳಿದೆ. ನೀವು ಹುಡುಕಿಯೇ ಹುಡುಕುತ್ತಿದ್ದೀರಿ. ಇದ್ದರೆ ಸಿಗಬೇಕಲ್ಲ? ಹುಡುಕುವುದಕ್ಕೇ ಇಷ್ಟು ಹೊತ್ತು ಆದರೆ, ಅದರ ಗತಿ ಏನಾಗಿರಬೇಕು. ಎಲ್ಲಿಯಾದರೂ ಒಂದು ಚೀಟಿ ಇರಬೇಕು. ಆಮೇಲೆ ಹುಡುಕಿ ಹೇಳಿ.

ಶ್ರೀ ಜೆ. ಎಚ್. ಪಟೇಲ್ : ಕೆಲಸ ಮಾಡುವುದರಲ್ಲಿ ಜಾಗ್ರತೆ ವಹಿಸುತ್ತೇವೆ. ಇಂಥಾದ್ದು ಹುಡುಕುವುದರಲ್ಲಿ ಅಲ್ಲ. ಈಗ ತುಮಕೂರಿನಲ್ಲಿ, ಡಿ.ಎಲ್.ಎಫ್. ಪವರ್ ಲಿಮಿಟಡ್ 32.5 ಮೆಗಾವ್ಯಾಟ್, ವೈಟ್‌ಫೀಲ್ಡ್‌ನಲ್ಲಿ ಸಿಂಥಿಲಾ ಪವರ್ ಲಿಮಿಟೆಡ್ 82.7 ಮೆಗಾವ್ಯಾಟ್. ಬೆಳಗಾಮಿನಲ್ಲಿ ಟಾಟಾ ಎಲೆಕ್ಟ್ರಿಕ್ ಕಂಪನಿ 76.8 ಮೆಗಾವ್ಯಾಟ್ ಇವೆಲ್ಲ ಪಿ.ಪಿ. ಆಗಿರುವುದು ನಾನು ಹೇಳುತ್ತಿರುವುದು. ಧಾರವಾಡದಲ್ಲಿ ಐನಾಕ್ಸ್ ಪವರ್ ಲಿಮಿಟಡ್ 42.3 ಮೆಗಾವ್ಯಾಟ್, ಪಾಡಿಯಲ್ಲಿ ಬರೂಕಾ ಪವರ್ ಕಾರ್ಪೊರೇಷನ್ 52.8 ಮೆಗಾವ್ಯಾಟ್, ಬಳ್ಳಾರಿಯಲ್ಲಿ ಭಾರತ್ ಫೋರ್ಜ್ಡ್ ಲಿಮಿಟೆಡ್ 50. ಮೆಗಾವ್ಯಾಟ್ ಹರಿಹರದಲ್ಲಿ ಅಟ್ರಿಯಾ ಪವರ್ ಕಾರ್ಪೋರೇಷನ್ 103 ಮೆಗಾವ್ಯಾಟ್ ಇನ್ನೊಂದು ನ್ಯೂಲೋ ಇಂಡಿಯಾ ಪವರ್‌ಲಿಮಿಟೆಡ್ 124 ಮೆಗಾವ್ಯಾಟ್ ; ಇದು ದೊಡ್ಡಬಳ್ಳಾಪುರದಲ್ಲಿ. ಇಷ್ಟು ಇವು fuel linkage ಕ್ಲಿಯರ್ ಆಗಿ, PPA initiate ಆಗಿ, ಕೆಲಸ ಪ್ರಾರಂಭ ಮಾಡತಕ್ಕಂಥಾದ್ದು, ಇವೇನೂ ಬಹಳ ವರ್ಷಗಟ್ಟಲೆ ತೆಗೆದುಕೊಳ್ಳುವುದಿಲ್ಲ. ಇವು ಬಹಳ ಎಂದರೆ 12 ರಿಂದ 18 ತಿಂಗಳು. ನಮ್ಮ ಮುಂದೆ ಅಪ್ಲಿಕೇಶನ್ನ ಬಂದದ್ದು 50-60 ಇದ್ದವು. ಆದರೆ ಕ್ಲಿಯರ ಆಗಿರುವುದು ಮಾತ್ರ ಎಂಟು. ಮೂರು ಬಾರ್ಜ್ಡ ಮೌಂಟೆಡ್ ಪ್ರಾಜೆಕ್ಟ್ ಕ್ಲಿಯರ್ ಆಗಿವೆ. ಕೊಜೆಂಟ್ರಿಕ್ಸ್ ಫೈನಲ್ ಸ್ಟೇಜ್‌ನಲ್ಲಿದೆ. ಫೈನಲ್ ಸ್ಟೇಜ್ ಎಂದರೆ ಅದು ಎನ್‌ವಿರಾನ್‌ಮೆಂಟ್ ಬಗ್ಗೆ. ಇನ್ನು ಉಳಿದಿದ್ದು ಎಲ್ಲ ಅದರ contractual conditions ಏನಿವೆ, ಅದೆಲ್ಲ ಕ್ಲಿಯರ್ ಆಗಿದೆ. Central Finance Ministry has also cleared it. ಹಾಗೆ ನಾಗಾರ್ಜುನದ್ದು ಕ್ಲಿಯರ್ ಆಗಿದೆ. ಇದು ಕ್ಲಿಯರ್ ಆಗಿ ಕೆಲಸ ಕೈಗೆ ತೆಗೆದುಕೊಂಡಿರುವುದು ಮಾತ್ರ ನಾನು ಸದನದ ಮುಂದೆ ಇಟ್ಟಿದ್ದೇನೆ. ಆದ್ದರಿಂದ ಈ ಎಲ್ಲ ಪ್ರಯತ್ನದಿಂದ ಇವಿಷ್ಟು ಬೇಗ ಎಲ್ಲ ಬಗೆಹರಿಯುವುದಕ್ಕೆ ಮೂಲಕಾರಣ ನಮ್ಮ ಪ್ರಧಾನಿ. ಇವೆಲ್ಲ ಪ್ರಾಜೆಕ್ಟ್ ಮೊನ್ನೆ ಮೊನ್ನೆ ಹೋದವು. ಅಲ್ಲ. ಇವರು ಹತ್ತುತಿಂಗಳಲ್ಲಿ ಹತ್ತು ವರ್ಷಗಳಿಂದ ಆಗದೇ ಇರತಕ್ಕಂಥ ಪ್ರಾಜೆಕ್ಟ್‌ಗಳು ಕ್ಲಿಯರ್ ಆಗಿವೆ. ಇದನ್ನು ನಾನು ಉತ್ಪ್ರೇಕ್ಷೆಯಾಗಿ ಹೇಳುವ ಮಾತಲ್ಲ. ನಮ್ಮ ಪ್ರಧಾನಿ ಎಂದರೆ ಅವರು ಸಪೋರ್ಟ್ ಮಾಡಿದ್ದಾರೆ. ನಾವು ಸಪೋರ್ಟ್ ಮಾಡಿಲ್ಲವೇ ಅಂತ ಅವರು ಕೇಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಏನು ಮಾಡಿದರೂ ನಿಮ್ಮ ಸ್ವಭಾವ ಏನಿದೆ ಎಂದರೆ ನಿಮ್ಮದು. ಆದ್ದರಿಂದ ನಾವು ಏನು ಮಾಡೋಣ?

ಶ್ರೀ ಜೆ. ಎಚ್.ಪಟೇಲ್ : ಅಯ್ಯಪ್ಪ, ನೀವು ಹಾಗೇ ತಿಳಿದುಕೊಂಡು ಸಹಾಯ ಮಾಡುತ್ತಾ ಅಲ್ಲೇ ಇರಿ. ಸಹಾಯ ತೆಗೆದುಕೊಂಡು ನಾವು ಇಲ್ಲಿ ಇರುತ್ತೇವೆ. ಇದು ನಿಮಗೆ ಸಮಾಧಾನ ಆಗುವುದಾದರೆ ಯಾರು ಬೇಡವೆನ್ನುತ್ತಾರೆ? ಆದ್ದರಿಂದ ಮಾನ್ಯ ಅಧ್ಯಕ್ಷರೇ, ಆರೋಗ್ಯ ಇಲಾಖೆ ಬಗ್ಗೆ ಮಾನ್ಯ ಖರ್ಗೆಯವರು ಹೇಳಿದರು, ಬೇರೆಯವರೂ ಹೇಳಿದರು ಆಸ್ಪತ್ರೆಗಳು ಇಲ್ಲ, ಡಾಕ್ಟರುಗಳು ಇಲ್ಲ ಎಂದು ಹೇಳಿದರು. ಸರಿ; ಕೆಲವು ಅಂಶಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೆಲವು ಕಡೆ ಡಾಕ್ಟರುಗಳು ಇಲ್ಲ. ಎಷ್ಟು ಕಡೆ ಇಲ್ಲ? ಈಗ ಕೆ.ಪಿ.ಎಸ್.ಸಿ.ಯವರು ಪ್ರಾವಿಜನಲ್ ಲಿಸ್ಟ್‌ನಲ್ಲಿ ನಾಲ್ಕುನೂರು ಡಾಕ್ಟರಗಳನ್ನು ಸೆಲೆಕ್ಟ್ ಮಾಡಿದ್ದಾರೆ. ಅಡಿಶನಲ್ ಲಿಸ್ಟ್‌ನಲ್ಲಿ 200 ಡಾಕ್ಟರ್‌ಗಳು ಇದ್ದು Credentials are being verified. ಒಟ್ಟು 760 ಡಾಕ್ಟರ್‌ಗಳು ಕೊರತೆ ಇದ್ದದ್ದು, ಅದರಲ್ಲಿ ಈಗ ಆರುನೂರು ಡಾಕ್ಟರಗಳು ಇನ್ನು ಒಂದು ತಿಂಗಳಲ್ಲಿ, ಏಕೆಂದರೆ ಇಲ್ಲಿ ಒಂದು ಕಾನೂನಿನ ತೊಡಕು ಬಂದಿದೆ. ಕೆ.ಪಿ.ಎಸ್.ಸಿ.ಯವರು ಸೆಲೆಕ್ ಮಾಡಿಬಿಟ್ಟಿದ್ದಾರೆ. ಸೆಲೆಕ್ಟ್ ಮಾಡಿ ಈ ಕ್ಯಾಸ್ಟ್ ಸರ್ಟಿಫಿಕೇಟ್ ಇವುಗಳ ಬಗ್ಗೆ ಕೆಲವು ಕ್ವೆರೀಸ್ ಬಂದವು. ಏಕೆಂದರೆ ಇವರ ಪೋಸ್ಟಿಂಗ್ಸ್ ಆದಮೇಲೆ, ಅವರು ಲಿಸ್ಟ್ ಮಾಡಿದಮೇಲೆ, ಏನಾದರೂ ಅನ್ಯಾಯ ಆಗಿದೆ ಅಂತ ಕಂಡುಬಂದರೆ, ಮತ್ತೆ ಅದನ್ನು ತಡೆಹಿಡಿಯ ಬೇಕಾಗುತ್ತದೆ. ಆದ್ದರಿಂದ ಈ ಕೆಲವು ಸುಮಾರು 20 ಕೇಸ್‌ಗಳ ಬಗ್ಗೆ ಲೀಗಲ್ ಹರ್ಡಲ್ಸ್ ಬಂದಿವೆ. ಆ ಕಾರಣದಿಂದ ಈ ಆರುನೂರು ಡಾಕ್ಟರುಗಳನ್ನು ಪೋಸ್ಟಿಂಗ್ ಮಾಡುವುದು ಟೆಕ್ನಿಕಲಿ ಕಷ್ಟವಾಗಿದೆ. ಅದಕ್ಕೆ ಕೆ.ಪಿ.ಎಸ್.ಸಿ. ಅಧ್ಯಕ್ಷರೊಡನೆ ಮಾತನಾಡಿ ಲೀಗಲ್ ಅಡ್ವೈಸ್ ತೆಗೆದುಕೊಂಡು, ಆದಷ್ಟು ಬೇಗ ಅವರನ್ನು ಹಳ್ಳಿಗಳಿಗೆ, ಏಕೆಂದರೆ ಐದುವರ್ಷಕಾಲ ಡಾಕ್ಟರಗಳು ಕಡ್ಡಾಯವಾಗಿ ಹಳ್ಳಿಗಳಲ್ಲಿ ಕೆಲಸ ಮಾಡಬೇಕಾಗುತ್ತದೆ. ಈಗ ಕೊರತೆ ಇರುವುದು ಬಹುತೇಕ ರಾಯಚೂರು, ಗುಲ್ಬರ್ಗಾ, ಬೀದರ್ ಮತ್ತು ಬಳ್ಳಾರಿ, ಈ ಭಾಗದಲ್ಲಿ ಹೆಚ್ಚಿನ ಕೊರತೆ ಇರುವುದು.

ಆ ಭಾಗಕ್ಕೆ ನಾವು ಯಾರನ್ನು ಮೊದಲು ಪೋಸ್ಟ್ ಮಾಡುತ್ತೇವೆ, ಕಡ್ಡಾಯವಾಗಿ ಅವರು ಹೋಗಲೇ ಬೇಕು. ಶಿವಮೊಗ್ಗದಲ್ಲಿಯೂ ಖಾಲಿ ಇರಬಹುದು. ಅನಾರೋಗ್ಯ ಎಲ್ಲಾ ಕಡೆ ಇದೆಯೆಂದು ನಾನು ಹೇಳಿದ್ದು ಇನ್ನೊಂದು ಈ ಸದನಕ್ಕೆ ಅವಶ್ಯಕವಾಗಿ ತಿಳಿಸಬೇಕಾಗಿರುವುದೇನೆಂದರೆ, ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ವಿಶ್ವಬ್ಯಾಂಕಿನ ಸಹಾಯ ಧನ 540 ಕೋಟಿ, ಜರ್ಮನಿಯಿಂದ ನೆರವು ಸುಮಾರು 60 ಕೋಟಿ. ಜರ್ಮನಿಯ ನೆರವಿನಿಂದ ಕೇವಲ ಒಂದು ಪ್ರದೇಶದ ಆಸ್ಪತ್ರೆಗಳ ಸುಧಾರಣೆ, ಕಟ್ಟಡಗಳ ಸುಧಾರಣೆಯಾಗಬಹುದು ಅಥವಾ ಯಂತ್ರೋಪಕರಣಗಳ ಸುಧಾರಣೆಯಾಗಬಹುದು. ಅದು ಜರ್ಮನಿಯ ಕೊಡುಗೆ. ಇನ್ನೊಂದು ವಿಶ್ವಬ್ಯಾಂಕಿನದು, ಅದು ಸಮಗ್ರ. ಸರ್ವಾಂಗೀಣ ಸುಧಾರಣೆ. ಕಟ್ಟಡ, ಉಪಕರಣಗಳು, ಮೆಡಿಸಿನ್ ಕೊಂಡುಕೊಳ್ಳುವುದಕ್ಕೆ ಬಿಟ್ಟು ಉಳಿದ ಎಲ್ಲದಕ್ಕೂ ವಿಶ್ವಬ್ಯಾಂಕಿನ ಲೋನ್ ತೆಗೆದುಕೊಂಡಿದ್ದೇವೆ. ಹಾಗೆಯೇ ಇನ್ನೊಂದು ಒಪೆಕ್. ಅರಬ್ಬೀ ರಾಷ್ಟ್ರಗಳು ನಮಗೆ ಉಚಿತವಾಗಿ ಕೊಟ್ಟಿವೆ. 23 ಕೋಟಿ ಅತ್ಯಂತ ಆಧುನಿಕ ಉಪಕರಣಗಳನ್ನು, ಅತ್ಯಂತ ಹೆಚ್ಚಿನ ಮಟ್ಟದ ತಂತ್ರಜ್ಞತೆಯನ್ನುಳ್ಳ ಒಂದು ಆಸ್ಪತ್ರೆಯನ್ನು ಈಗ

ರಾಯಚೂರಿನಲ್ಲಿ ಮಾಡುತ್ತಿದ್ದೇವೆ. ನಾವು ಕೈಗೊಂಡಿರತಕ್ಕ ಕಾರ್ಯಕ್ರಮಗಳು ಅಂದರೆ ಪ್ರಾರಂಭ ಮಾಡುವುದು. ಆದರೆ, ಆರೋಗ್ಯ ಇಲಾಖೆ ಹಳ್ಳಿಗಾಡಿನಲ್ಲಿ ತೊಂದರೆ ಇದೆ, ಡಾಕ್ಟರುಗಳು ಹೋಗುವುದಿಲ್ಲ, ಅನೇಕರೀತಿಯಿಂದ ಹಳ್ಳಿಗಾಡಿನ ಜನರಿಗೆ ರೋಗಗಳೂ ಹೆಚ್ಚಾಗಿವೆ. ಹಲವಾರು ಕಾರಣಗಳಿಂದ, ಅದು ಪೊಲ್ಯೂಷನ್ ಕಾರಣವೋ ಏನೋ. ಕೆಲವು ವಿಚಿತ್ರ ಹೊಸ ಖಾಯಿಲೆಗಳು ಬಂದಿವೆ. ಮೊನ್ನೆ ನಾನು ಯಾವುದೋ ಊರಿಗೆ ಹೋಗಿದ್ದೆ. ಅಲ್ಲಿ ಚರ್ಮದ ಖಾಯಿಲೆ. ಮಾನ್ಯ ಎಸ್.ಎಸ್. ಪಾಟೀಲ್‌ರ ಊರಿನ ಹತ್ತಿರ. ಅಲ್ಲಿ ನೀರೇ ಆ ರೀತಿ ಇದೆಯಂತೆ. ಆ ನೀರು ಕುಡಿದರೇ ಹಾಗೆ. ಅಂತಹ ರೋಗಗಳನ್ನು ನಾವು ವೈಜ್ಞಾನಿಕವಾಗಿ ಏತಕ್ಕಾಗಿ ಬರುತ್ತವೆ ಎಂಬುದನ್ನು ಸಂಶೋಧನೆ ಮಾಡದೇ ಇದ್ದರೆ, ಬರೀ ಔಷಧಿ ಕೊಟ್ಟು ಮಾಡುವುದಕ್ಕಾಗುವುದಿಲ್ಲ.ಅಲ್ಲಿ ಒಂದು ಇಂಡೋ ಫ್ರೆಂಚ್ ಸಂಸ್ಥೆಯವರು ಒಂದು ಹೊಸ ಆಸ್ಪತ್ರೆಯನ್ನು ಅವರದೇ ದುಡ್ಡಿನಲ್ಲಿ ಪ್ರಾರಂಭ ಮಾಡಿದ್ದಾರೆ. ಅದೊಂದು ಸ್ವಾಗತಾರ್ಹವಾದಂತಾದ್ದು ಅದಕ್ಕೆ, ಕೆಲವು ಕಡೆ ಏನು ವಿಶಿಷ್ಟವಾದಂಥ ಕಾರಣಗಳು ಇವೆ, ಅವುಗಳನ್ನು ನಾವು ಗುರುತಿಸಬೇಕು. ನಂತರ, ಕೆಲವು ಪರಿಹಾರ ಕಂಡುಹಿಡಿಯಬೇಕು. ಇವು, ನಾನು ಆರೋಗ್ಯ ಇಲಖೆಯಲ್ಲಿ ಕೈಗೊಂಡಿರತಕ್ಕ ಕ್ರಮಗಳು. ಇನ್ನು ಕಂದಾಯ ಇಲಾಖೆಯ ಬಗ್ಗೆ ಬಹಳ ಹೇಳಿದರು. ಲ್ಯಾಂಡ್ ರಿಫಾರಮ್ಸ್ ತಂದು ಇವತ್ತು ಬಡವರಿಗೆಲ್ಲಾ ಊರು ಬಿಡಿಸುತ್ತಿದ್ದೀರಿ, ಗುಳೆ ಎಬ್ಬಿಸಿದ್ದೀರಿ. ಈ ಲ್ಯಾಂಡ್ ರಿಫಾರಮ್ಸ್ ಯಾರು ತಂದರು? ಯಾವಾಗ ತಂದರು? It is the Congress party Government which brought amendment to S.109 the Land Reforms Act. during 1992. ಅವರೇನು ಮಾಡಿದರು. ಅದಕ್ಕೂ ಮುಂಚೆ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡ, ಬೆಳಗಾಂ ಸುತ್ತಮುತ್ತ ಇರತಕ್ಕಂಥ ಸಣ್ಣ ಸಣ್ಣ ಹಿಡುವಳಿ ಒಂದು ಎಕರೆ, ಎರಡು ಎಕರೆ ಇರತಕ್ಕವರು ಇವರದನ್ನೆಲ್ಲಾ ಏನು ಮಾಡುತ್ತಿದ್ದರು. ಜನರಲ್ ಪವರ್ ಆಫ್ ಆಟಾರ್ನಿ ಎಂದು ತೆಗೆದುಕೊಂಡುಬಿಡುವುದು, ಬಹಳ ಕಡಿಮೆ ಖರೀದಿಗೆ ಕೊಂಡುಕೊಳ್ಳುವುದು. 10 ಸಾವಿರ, 20 ಸಾವಿರ ಎಕರೆ ಕೊಳ್ಳುವುದು. ಆಮೇಲೆ ಬಿಲ್ಡರ್ಸ್ ಸಿಂಗಪುರದಿಂದ, ಮಲೇಷಿಯಾದಿಂದ ಬರತಕ್ಕ ಬಿಲ್ಡರ್ಸ್‌ಗೆಲ್ಲಾ 25-30 ಲಕ್ಷ ಒಂದು ಎಕರೆಗೆ ಕೊಡುವುದು. 10 ಸಾವಿರಕ್ಕೆ ತೆಗೆದುಕೊಂಡು, 25-30 ಲಕ್ಷ ಒಂದು ಎಕೆರೆಗೆ ಕೊಡುವುದು.10 ಸಾವಿರಕ್ಕೆ ತೆಗೆದುಕೊಂಡು, 25-30 ಲಕ್ಷಕ್ಕೆ ಮಾರುವುದು. ತಮಗೂ ಎಲ್ಲಾ ಗೊತ್ತಿದೆ. ಅದನ್ನು ನಿಲ್ಲಿಸಬೇಕು. ನೇರವಾಗಿ ಆ ರೈತ, ಈ ಜನರಲ್ ಪವಾರ ಆಫ ಅಟಾರ್ನಿ ಹೋಲ್ಡರ್ಸ್‌ಗಿಂತ ನೇರವಾಗಿ ಅವನೇ ಮಾಡಿಕೊಂಡರೆ, ಅವನಿಗಾದರೂ ದುಡ್ಡು ಸಿಗುತ್ತದೆ. ಆ ಒಂದು ಕೊರತೆಯನ್ನು ನೀಗಿಸುವುದಕ್ಕೋಸ್ಕರ ನಾವು ಅದನ್ನು ಎಕ್ಸ್‌ಪ್ಯಾಂಡ್ ಮಾಡಿದೆವು. ಇಂಡಸ್ಟ್ರಿ, ಹಾರ್ಟಿಕಲ್ಚರ್ ಮತ್ತು ಅಗ್ರಿಕಲ್ಚರ್ ಇಷ್ಟಕ್ಕೆ ನಾವು ಎಕ್ಸ್‌ಟೆಂಡ್ ಮಾಡಿದೆವೇ ಹೊರತು, ನಾವು ಲ್ಯಾಂಡ್ ಕನ್‌ವರ್ಷನ್ ಬಗ್ಗೆ ಬಹಳ ಬಿಗಿಯಾಗಿ ಮೆಸರ್ಸ್ ಹಾಕಿದ್ದೇವೆ. ಆಮೇಲೆ ಲ್ಯಾಂಡ್ ಓನರ್ಸ್‌ಗಳು, ಸಣ್ಣ ಹಿಡುವಳಿದಾರರು ಈ ರೀತಿ ಅವರಾಗಿಯೇ ಇಂಡಸ್ಟ್ರೀಗಳನ್ನು ಮಾಡಿಕೊಳ್ಳಬಹುದು. ಅಥವಾ ಅವರು ಯಾರಿಗಾದರೂ ಮಾರಿಕೊಳ್ಳಲೂಬಹುದು. ಆದರೆ, ಈಗೇನಾಗಿದೆ, ಫ್ಲೋರಿಕಲ್ಚರ್ ಅರೌಂಡ್ ಬೆಂಗಳೂರು, ತರಕಾರಿ, ಹಣ್ಣು, ಹೂವು ಇವುಗಳಿಗೆ ಬಹಳಷ್ಟು ಪ್ರೋತ್ಸಾಹ ಸಿಕ್ಕುತ್ತಾ ಇದೆ. ಅದನ್ನು ಬೆಳೆಸುವುದ್ದಕೋಸ್ಕರ ನಾವು ಅವರಿಗೇ ಪ್ರೋತ್ಸಾಹ

ಕೊಡೋಣ. ಅವರು ಬೇರೆಯವರಿಗೆ ಮಾರಿಕೊಳ್ಳುವ ಬದಲು, ಅವರಿಗೇ ಪ್ರೋತ್ಸಾಹ ಕೊಡೋಣ. ಮೇಲಾಗಿ ಅವರ ಪ್ರಾಡಕ್ಟ್ ಏನಿವೆ, ಒಂದು ಹೊಸ ಯೋಜನೆಯನ್ನು ನಮ್ಮ ಕೃಷಿ ಸಚಿವರು ಮೊನ್ನೆ ಸಲಹೆ ಮಾಡಿದರು. ಬೆಂಗಳೂರಿನಿಂದ ನೇರವಾಗಿ, ಕೋಲಾರದಿಂದ ನೇರವಾಗಿ, ಬಿಜಾಪುರದಿಂದ ನೇರವಾಗಿ ಎಕ್ಸ್‌ಪೋರ್ಟ್ ಫಸಿಲಿಟಿ ನಾವು ಕ್ರಿಯೇಟ್ ಮಾಡಬೇಕು. ಪ್ಯಾಸೆಂಜರ್ಸ್ ಇಲ್ಲದಿದ್ದರೂ ಕೂಡ, ಈ ಗೂಡ್ಸ್ ಕಳುಹಿಸುವುದಕ್ಕೆ ಕಾರ್ಗೋ ಸಿಸ್ಟಂ. ಏಕೆಂದರೆ ಕೋಲಾರದಲ್ಲಿ ಒಂದು ಒಳ್ಳೆಯ ಏರ್‌ಪೋರ್ಟ್ ಇದೆ. ಅದು ಎರಡನೇ ಮಹಾಯುದ್ಧದಲ್ಲಿ ಕಟ್ಟಿದ್ದು ಎಂದು ಹೇಳುತ್ತಾರೆ. ಇದನ್ನು ಸರಿಪಡಿಸಿದರೆ, ಕಾರ್ಗೋ ಫ್ಲೈಟ್ ಇದರ ಬಗ್ಗೆ ಕೇಂದ್ರದ ವಿಮಾನಯಾನ ಇಲಾಖೆಗೂ ಬರೆದಿದ್ದೇವೆ. ಮೇಲಾಗಿ ಬೇರೆ ಬೇರೆ ರಾಷ್ಟ್ರಗಳೂ ಸಹ ಇದರೊಡನೆ ಸಂಪರ್ಕ ಇಟ್ಟುಕೊಂಡು, ನಮ್ಮ ರೈತ ಬೆಳೆದಂಥಾದ್ದು ಯಾವುದೇ ಇರಲಿ ತೋಟಗಾರಿಕೆಯಿಂದ, ಫ್ಲೋರಿಕಲ್ಚರ್‌ನಿಂದ, ಸೀಗಡಿ ಕೃಷಿಯಿಂದ ಇವುಗಳನ್ನು ನೇರವಾಗಿ ಎಕ್ಸಪೋರ್ಟ ಮಾಡಿದರೆ, ಅವನಿಗೆ ಬೆನಿಫಿಟ್. ನಾನು ಮೊನ್ನೆ ದೆಹಲಿಯಿಂದ ಬರುವಾಗ ನನ್ನ ಮಗ್ಗುಲಲ್ಲಿ ಒಬ್ಬರು ಇಂಡಿಯನ್ ಕುಳಿತಿದ್ದರು. ಅವರು ಬೆಂಗಳೂರಿನವರೇ, ಅವರು ನನ್ನನ್ನು ಮಾತನಾಡಿಸಿದರು. ನಾನು ಅವರು ಈಗ ಎಲ್ಲಿದ್ದೀರಿ ಎಂದು ಕೇಳಿದ್ದಕ್ಕೆ, ಅವರು ಜರ್ಮನಿಯಲ್ಲಿ ನೆಲೆಸಿದ್ದೇವೆಂದು ಹೇಳಿದರು. ಅಲ್ಲೇನು ಮಾಡುತ್ತೀರಿ ಎಂದು ಕೇಳಿದೆ. ನಾನೊಂದು ಸಣ್ಣ ಎಲೆಕ್ಟ್ರಾನಿಕ್ ಇಂಡಸ್ಟ್ರಿ ಇಟ್ಟುಕೊಂಡಿದ್ದೆ. ಅದು ಬಿಟ್ಟು ಈಗ ತರಕಾರಿ, ಹೂವು ಮತ್ತು ಹಣ್ಣು ಇವುಗಳನ್ನು ಕೋಲಾರ ಮತ್ತು ಬೆಂಗಳೂರು ರೂರಲ್ ಭಾಗಗಳಿಗೆ ಬಂದು, ನೇರವಾಗಿ ಹೊಲಕ್ಕೆ ಹೋಗಿ ನಾವೇ ಖರೀದಿ ಮಾಡುತ್ತೇವೆ. ಎಂದು ಹೇಳಿದರು. ಅವರು ಆಂಧ್ರದ ಗಡಿಯಲ್ಲಿ ಒಂದು ಕೋಲ್ಡ್ ಸ್ಟೋರೇಜ್ ಇಟ್ಟುಕೊಂಡಿದ್ದಾರೆ. ಅಲ್ಲಿಂದ ಸಿಂಗಪೂರಗೆ ತೆಗೆದುಕೊಂಡು ಹೋಗುತ್ತಾರೆ. ಸಿಂಗಾಪುರ್‌ನಲ್ಲಿ ಪ್ರೋಸೆಸ್‌ಆಗಿ, ಅದು ಫ್ರೂಟ್ ಜ್ಯೂಸ್ ಇರಬಹುದು, ಏನೇ ಇರಲಿ. ಅದು ಎಲ್ಲಾ ಕಡೆಗೂ ಹೋಗುತ್ತದೆ. ಅಲ್ಲಿಯ ಎಕಾನಮಿ ಯಾವರೀತಿ ವರ್ಕ್‌ಔಟ್ ಆಗುತ್ತದೆಂದರೆ, ಒಂದು ಮೆಕ್ಕೆಜೋಳದ ತೆನೆಯನ್ನು ಅವನು ನೇರವಾಗಿ 3 ರೂಪಾಯಿಯಿಂದ 5 ರೂಪಾಯಿಗೆ ಕೊಳ್ಳುತ್ತಾನೆ. He sells it for two and half dollors, that is, nearly eightly five rupees. ಕನ್‌ವರ್ಷನ್ ಕಾಸ್ಟ್ ಏನೇ ಇರಲಿ 20-30. ಇದನ್ನು ನಮ್ಮ ದೇಶದ ಬೆಳೆಗಾರರ, ರೈತನ ಶ್ರಮವನ್ನು ಬಳಸಿಕೊಂಡು, ಬೇರೆ ಬೇರೆ ದೇಶದವರೆಲ್ಲಾ ಚೆನ್ನಾಗಿ ದುಡಿದುಕೊಳ್ಳುವಾಗ ನಾವೇಕೆ ಇದನ್ನು ಮಾಡಬಾರದು.? ನಮ್ಮಲ್ಲಿ ಬರೀ ಓಬಿರಾಯನ ಪದ್ಧತಿ. ಎಲ್ಲಾದರೂ ಸ್ವಲ್ಪ ಕಬ್ಬಿಗೆ ಬೆಲೆ ಬಂತು ಎಂದರೆ, ಕಬ್ಬು ಕಬ್ಬು ಎಂದು ಬೆಳೆಯುವುದು. ಕ್ರಾಪ್ ಪ್ಯಾಟ್ರನ್‌ನಲ್ಲಿ ಒಂದು ಮಾಡ್ರನ್ ವ್ಯೂ ಇಲ್ಲ. ಕ್ರಾಪ್‌ಪ್ಯಾಟ್ರನ್ ಏನ್‌ಫೋರ್ಸ್ ಮಾಡುವುದೇ ಇಲ್ಲ. ಒಂದುಸಾರಿ ಹೀಗಾಗಿ ಬಿಡುವುದು. ಎಲ್ಲಾದರೂ ಬೆಳೆ ಸುಟ್ಟು ಹೋದರೆ, ಎಲ್ಲದಕ್ಕೂ ಸರ್ಕಾರವೇ ಕಾರಣ. ಉರುಳಿಗೆಡ್ಡೆ ಕೊಳೆತರೂ ಸರ್ಕಾರವೇ ಕಾರಣ, ತೆಂಗಿನಕಾಯಿ ರೇಟ್ ಬಿದ್ದರೂ ಸರ್ಕಾರವೇ ಕಾರಣ, ಎಲ್ಲಾದರೂ ಭೂಕಂಪವಾದರೂ ಸರ್ಕಾರವೇ ಕಾರಣ ಎಂದು ವಿರೋಧಪಕ್ಷದ ನಾಯಕರು ಹೇಳುತ್ತಾರೆ. ಈ ರೀತಿ ಎಲ್ಲದಕ್ಕೂ ಸರ್ಕಾರ ಕಾರಣ ಎಂದು ಹೇಳುತ್ತಾರೆ. ಆಸ್ಪತ್ರೆಯಲ್ಲಿ ನ್ಯಾಚುರಲ್ ಡೆತ್ ಆದರೂ ಸರ್ಕಾರವೇ ಕಾರಣ. ಹೆರಿಗೆ ಆಸ್ಪತ್ರೆಯಲ್ಲಿ 5 ಮಕ್ಕಳು ಜಾಸ್ತಿ ಹುಟ್ಟಿದರೂ ಸರ್ಕಾರ ಕಾರಣ.

2.00 ಪಿ.ಎಂ

ಶ್ರೀ ಎಚ್.ಎನ್. ನಂಜೇಗೌಡ : ಸರ್ಕಾರ ಕಾರಣಅಂತ ಹೇಳುವುದಿಲ್ಲ, ಜೆ.ಎಚ್. ಪಟೇಲರು ಕಾರಣ ಅಂತ ಹೇಳುತ್ತಾರೆ.

ಶ್ರೀ ಜೆ.ಎಚ್. ಪಟೇಲ್ : ನಿಮ್ಮ ಅನುಭವ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಇಬ್ಬರ ಅನುಭವ ಸಧ್ಯಕ್ಕೆ ಈ ಸದನಕ್ಕೆ ಏನೂ ಬೇಕಾಗಿಲ್ಲ.

ಶ್ರೀ ಜೆ. ಎಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಆಮೇಲೆ ಗ್ರಾಮೀಣ ಅಭಿವೃದ್ಧಿ ಬಗ್ಗೆ ಸಾಕಷ್ಟು ಪ್ರಸ್ತಾಪ ಮಾಡಿದ್ದಾರೆ. ಕೆಲವು ಒಳ್ಳೆಯ ಸಲಹೆ ಕೊಟ್ಟಿದ್ದೀರಿ. ಆಮೇಲೆ ಈ ಬ್ಯಾಕ್‌ಲಾಗ್ ಹುದ್ದೆಗಳ ಬಗ್ಗೆ ಮಾನ್ಯ ಖರ್ಗೆಯವರು ಮೊದಲಿನಿಂದಲೂ ಪ್ರಸ್ತಾಪ ಮಾಡುತ್ತಿದ್ದಾರೆ. ಅದೂ ಕಾನೂನಿನ ಪ್ರಕಾರ, ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಬಂದ ಮೇಲೆ ಅದು 24-1-1997ರಲ್ಲಿ ನಾನು ಏನು ಯೋಚನೆ ಮಾಡಿದ್ದೆ ಅಂದರೆ ಬ್ಯಾಕ್‌ಲಾಗ್ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಇದ್ದಾಗ ಬೇರೆಯವರಿಗೆ ಏಕೆ ಕೊಡಬೇಕು? ಅದು ಅವರಿಗೆ ಕೊಡಬೇಕು. ಖಾಲಿ ಬಿತ್ತು ಮತ್ತೂ ಅವರಿಗೆ ಕೊಡಿ. ಅದನ್ನು ಬೇರೆಯವರಿಂದ ತುಂಬಬೇಡಿ ಅಂತ. ಇಲ್ಲಾ ಹಾಗೆ ಮಾಡುವುದಕ್ಕೆ ಬರುವುದಿಲ್ಲ ಈಗ ಬ್ಯಾಕ್‌ಲಾಗ್ ಈ ವರ್ಷ ಎಷ್ಟು ಬರುತ್ತದೆ ಅಷ್ಟನ್ನು ಏನಾದರೂ ಅವೈಲಿಬಿಲಿಟಿ ಇದ್ದರೆ, ಅಷ್ಟು ಹುದ್ದೆಗಳು ಖಾಲಿ ಇದ್ದು ಅಷ್ಟು ಕ್ಯಾಂಡಿಡೇಟ್ಸ್ ಅವೈಲಿಬಿಲಿಟಿ ಇದ್ದರೆ, ಮೊದಲು ಅವರಿಗೆ ಕೊಡಿ, ಅದಕ್ಕೆ ಬೇಕಾದಂತಹ ರೂಲ್ಸ ಮಾಡಿ. ಈಗ 10 ಖಾಲಿ ಇದ್ದರೆ ಆ10 ಹುದ್ದೆಗಳನ್ನೂ ಮೀಸಲಾತಿಯವರಿಗೆ ಕೊಡಿ ಅಂತ ಅಲ್ಲ. ಈಗ 15 ಪರ್ಸೆಂಟ್ ಮೀಸಲಾತಿ ಇದೆ. 10 ಪರ್ಸೆಂಟ್ ತುಂಬಿರುತ್ತಾರೆ. ಇನ್ನು 5 ಪರ್ಸೆಂಟ್ ಉಳಿದಿರುತ್ತದೆ. ಅದನ್ನು ಮುಂದಕ್ಕೆ ಹಾಕುತ್ತೀರಿ. ಆಗ 15 ಪ್ಲಸ್ 5 ಒಟ್ಟು 20 ಆಗುತ್ತದೆ. ಆ 20ರಲ್ಲಿ ಎಷ್ಟು ಅವೇಲಿಬಿಲಿಟಿ ಇರುತ್ತದೆಯೋ, ಅಂದರೆ 15 ಪರ್ಸೆಂಟ್ ಖೋಟಾ ಈ ಪರಿಶಿಷ್ಟ ಜಾತಿ ಮತ್ತು ಪಂಗಡದ ಮನುಷ್ಯ ತೆಗೆದುಕೊಳ್ಳಲಿ. ಅಲ್ಲಿ ಅವರಿಗೆ ಎಲ್ಲಿ ಅಪಚಾರ ಆಗಲು ಕಾರಣ? ಅಂದರೆ ಇದೆಲ್ಲದಕ್ಕೂ ಕೂಡ ಬ್ಯಾಕ್‌ಲಾಗ್ ಎನ್ನುವ ಹೆಸರಿನಲ್ಲಿ ಅವೈಲಿಬಿಲಿಟಿ ಇರುವ ಎಲ್ಲಾ ಹುದ್ದೆಗಳನ್ನು ಕೊಟ್ಟರೆ, ಅದು 50 ಪರ್ಸೆಂಟ್ ಮೀಸಲಾತಿಯನ್ನು ಮೀರುತ್ತದೆ. ಆಗ ಅದು ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್‌ಗೆ ವಿರುದ್ಧವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್‌ನಲ್ಲಿ ಓವರ್‌ಆಲ್ 51 ಪರ್ಸೆಂಟ್ ಮೀಸಲಾತಿಯನ್ನು ಇಟ್ಟುಕೊಂಡರೂ ಕೂಡ ಅದರಲ್ಲಿ ಇವರಿಗೆ ಕಡಿಮೆ ಮಾಡಿ ಕೊಡಿ ಎಂದು ಎಲ್ಲೂ ಹೇಳಿಲ್ಲ ಅವರು. ರಾಜ್ಯಾಂಗದ ಗ್ಯಾರೆಂಟಿ ಇದ್ದುದ್ದರ ಕಾರಣ in proportionate to their population ಇದ್ದು ಎಲ್ಲಿ ಕಡಿಮೆ ಮಾಡಬೇಕೋ ಅದು ನಿಮ್ಮ ಜವಾಬ್ದಾರಿ. ಇವತ್ತು ಉದಾಹರಣೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ 18 ಪರ್ಸೆಂಟ್ ಮೀಸಲಾತಿ ಏನು ಫಿಕ್ಸ್ ಇತ್ತು ಅದರಲ್ಲಿ 15 ಪರ್ಸೆಂಟ್ ಪರಿಶಿಷ್ಟ ಜಾತಿಯವರಿಗೆ 3 ಪರ್ಸೆಂಟ್ ಪರಿಶಿಷ್ಟ ಪಂಗಡವರಿಗೆ, ಇವತ್ತಿನ ಜನಸಂಖ್ಯೆಯ ಪ್ರಕಾರ ಈಗಾಗಲೇ ಜಿಲ್ಲಾ 50 ಪರ್ಸೆಂಟ್‌ನಲ್ಲಿ ಯಾವುದು ಕಡಿತ ಮಾಡಬೇಕು ಎನ್ನುವುದು ನಿಮ್ಮ ಜವಾಬ್ದಾರಿ. ಅನೇಕ ಸಾರಿ ಇಲ್ಲ

ಏನು ಮಾಡುತ್ತಿದ್ದಾರೆ. ಈ 18 ಪರ್ಸೆಂಟ್ ಇದೆಯಲ್ಲಾ ಈ 18 ಪರ್ಸೆಂಟ ಇಟ್ಟುಕೊಂಡಿದ್ದೇವೆ. ನಾವು 5 ಪರ್ಸೆಂಟ್ ಎಲ್ಲಿಂದ ತರೋಣ. ಏಕೆಂದರೆ ಸುಪ್ರೀಂ ಕೋರ್ಟ್ ಇದಕ್ಕೆ ಒಂದು ಲಿಮಿಟ್ ಹಾಕಿದೆ ಎಂದು ತಿಳಿದುಕೊಂಡು ಈ ಪಾಪವನ್ನು ಡಿ ಪಿ ಎ ಆರ್‌ನವರು ಪದೇ ಪದೇ ಮಾಡುತ್ತಿದ್ದಾರೆ ಏಕೆಂದರೆ ಇವರ ಹಕ್ಕನ್ನು ಮೊಟಕುಗೊಳಿಸಲು. ಮೊದಲ ಅಬ್ಲಿಗೇಷನ್ ಯಾವ ರೀತಿಯಾಗಿ ಯಾವುದಾದರೂ ಒಂದು ಮನೆಯನ್ನು ಆಕ್ಷನ್ ಮಾಡಬೇಕಾದರೆ, ಮೊದಲು ಚಾರ್ಜ್ ಯಾವುದು ಇರುತ್ತವೆ. ಸರ್ಕಾರದ ಬಾಕಿ ಯಾವುದು ಇರುತ್ತದೆಯೋ ಅದನ್ನು ಕಟ್ಟು. ಆಮೇಲೆ ಬೇರೆಯವರ ಸಾಲ ಎಂದು ಹೇಳುತ್ತಾರೆ ಹಾಗೆಯೇ ಇಲ್ಲಿ ಸಂವಿಧಾನಾತ್ಮಕವಾಗಿ ಇದರಲ್ಲಿ ಮೊದಲನೇ ಖೋಟಾ ಕೊಡತಕ್ಕಂಥಾದ್ದು ಜನಸಂಖ್ಯೆ ಆಧಾರದ ಮೇಲೆ ಇವರಿಗೆ ಬರುತ್ತದೆ. ಉಳಿದಂಥಾದ್ದನ್ನು ಒಂದು ಪರ್ಸೆಂಟ್ ಎರಡು ಪರ್ಸೆಂಟ್ ಕಟಮಾಡತಕ್ಕಂಥಾದ್ದು, ಎರಡನೆಯದು ಬ್ಯಾಕ್‌ಲಾಗ್ ಎಲ್ಲಿ ತುಂಬಲು ಬರುತ್ತದೆ ಅಂದರೆ ಅದೂ ಬರುತ್ತದೆ. ಅದನ್ನೇ ವಿಶೇಷ ನೇಮಕಾತಿ ಅಂತ ಕರೆಯುತ್ತಾರೆ. ಈಗ ನಾನು ಒಂದು ಉದಾಹರಣೆ ಹೇಳುತ್ತೇನೆ ಒಂದು ಲಕ್ಷ ಶಿಕ್ಷಕರು ಇದ್ದಾರೆ. ಶಿಕ್ಷಣ ಇಲಾಖೆಯಲ್ಲಿ. ಅಲ್ಲಿ ಇವತ್ತು ಮೀಸಲಾತಿಯ ಪ್ರಕಾರ 18 ಸಾವಿರ ಇರಬೇಕು. ಆದರೆ 10 ಸಾವಿರ ಇದ್ದಾರೆ ಅಂತ ತಿಳಿದುಕೊಳ್ಳಿ. ಇನ್ನೂ 8 ಸಾವಿರ ಹುದ್ದೆಗಳನ್ನು ನೀವು ತುಂಬಬೇಕು. ಈಗ ನೀವು ಏನು ಹೇಳುತ್ತೀರಿ ಬ್ಯಾಕ್‌ಲಾಗ್ 8 ಸಾವಿರ ಇದೆ ಅದರಲ್ಲಿ ಈ ವರ್ಷ 6 ಸಾವಿರ ಹುದ್ದೆಗಳು ಇವೆ. ಆ 6 ಸಾವಿರ ಹುದ್ದೆಗಳನ್ನು ಇವರಿಗೆ ಕೊಡಬೇಕೇನು? ಅದರಲ್ಲಿ 18 ಪರ್ಸೆಂಟ್ ಮಾತ್ರ ಕೊಡಬೇಕು ಎನ್ನುವುದು ನಿಮ್ಮ ವಾದ. ನಮ್ಮ ವಾದ ಅದು ಅಲ್ಲ. ಏಕೆಂದರೆ 8 ಸಾವಿರ ಹುದ್ದೆಗಳನ್ನು ನೀವು ಈಗಾಗಲೇ ಕೊಡಬೇಕಾಗಿತ್ತು ನೀವು ಕೊಟ್ಟಿಲ್ಲ. ಈಗ ನೀವು ಹೊಸದಾಗಿ ಕ್ರಿಯೇಟ್ ಮಾಡಿದ್ದು ಅಥವಾ ವೇಕೆನ್ಸಿ ಖಾಲಿ ಬಿದ್ದಿದ್ದು 10 ಸಾವಿರ ಆ ಇಲಾಖೆಯಲ್ಲಿ ಇವೆ. ಅದಕ್ಕೆ ನೀವು ಸ್ಪೆಷಲ್ ರಿಕ್ರೂಟ್‌ಮೆಂಟ್ ಅಂತ ಹೇಳಿ ಬ್ಯಾಕ್‌ಲಾಗ್ ಇರುವ ಹುದ್ದೆಗಳು 6 ಸಾವಿರ ಮೊದಲು ಇವರಿಗೆ ತುಂಬಿ 4 ಸಾವಿರದಲ್ಲಿ ಬೇರೆಯವರಿಗೆ ನ್ಯಾಯ ಮಾಡಿ ಏಕೆಂದರೆ ಮೊದಲು ಇವರಿಗೆ ಅನ್ಯಾಯ ಆಗಿದೆಯಲ್ಲ. ಈಗ ಹೊಸದಾಗಿ ನಾವೇನು ಈ ಥಿಯರಿ ತಂದಿಲ್ಲ. ನಮ್ಮ ಕಾಲದಲ್ಲಿ 1976ರಲ್ಲಿ ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡಿ ಮೂರು ತಿಂಗಳಲ್ಲಿ 12 ಸಾವಿರ ಜನರಿಗೆ ಉದ್ಯೋಗಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಏಕಕಾಲದಲ್ಲಿ ಕೊಟ್ಟಿದ್ದೇವೆ. ಅದು ಹೈಕೋರ್ಟ್‌ಗೆ ಹೋದಾಗ ಕೂಡ ಅಪ್‌ಹೆಲ್ಡ್ ಆಯಿತು ಯಾರೂ ಕೂಡ ಅಬ್ಜೆಕ್ಷನ್ ಮಾಡಲಿಲ್ಲ. 18 ಸಾವಿರ ಶಿಕ್ಷಕರಲ್ಲಿ ನಾವು 12 ಸಾವಿರ ಶಿಕ್ಷಕರನ್ನು ತುಂಬಿದ್ದೇವೆ. ಮುನ್ಸಿಫ್‌ನಲ್ಲಿ ನಾವು ತುಂಬಿದ್ದೇವೆ. ಅದಕ್ಕೆ ಅವರು ಸುಮ್ಮನೇ ಮಿಸ್‌ಗೈಡ್ ಮಾಡುತ್ತಾರೆ. DPAR ಅಂದರೆ Department for miss guiding particularly in the case of Roster System of SC/ST.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ ಮಿಸ್‌ಗೈಡ್ ಮಾಡಿದ್ದಾರೋ ಅಥವಾ ರೈಟ್‌ಫುಲ್ ಗೈಡೆನ್ಸ್ ಕೊಟ್ಟಿದ್ದಾರೋ, ಆದರೆ ಕಾನೂನು ಪ್ರಕಾರ ಹೋಗಬೇಕಲ್ಲ. ಈಗ ಸುಪ್ರೀಂ ಕೋರ್ಟ್ ಆಜ್ಞೆಯನ್ನು ತಿರುಚಿ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ. ಅಥವಾ ನೀವು ಹೇಳಿದಂತೆ ಜನಸಂಖ್ಯೆ ಜಾಸ್ತಿ ಆಗಿದೆ ಅದಕ್ಕೆ ಮೀಸಲಾತಿ ಜಾಸ್ತಿ ಮಾಡಬೇಕು ಎಂದು. ಅದನ್ನು ನಾವು ಇಲ್ಲಿ ಮಾಡುವುದಕ್ಕೂ ಬರುವುದಿಲ್ಲ. ಅದು ನಮ್ಮ ವ್ಯಾಪ್ತಿಯೂ ಅಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ ಪ್ರತಿ ರಾಜ್ಯ ಸರ್ಕಾರಗಳಲ್ಲಿ ಬೇರೆ ಬೇರೆ ಇದೆ. ನಮ್ಮ ರಾಜ್ಯದಲ್ಲಿ ಇರುವ ಜನಸಂಖ್ಯೆ 7 ಪರ್ಸೆಂಟ್ ಇದ್ದರೆ 7 ಪರ್ಸೆಂಟ್ ಕೊಡಿ. ಈಗ ಉದಾಹರಣೆಗೆ ಗುಜರಾತ್‌ನಲ್ಲಿ 27 ಪರ್ಸೆಂಟ್ ಮೀಸಲಾತಿ ಇದೆ. ಒರಿಸ್ಸಾದಲ್ಲಿ ಸುಮಾರು 30 ಪರ್ಸೆಂಟ್ ಇದೆ. ಅದು ಜನಸಂಖ್ಯೆ ಮೇಲೆ ಆಧರಿಸಿದೆ. ಎಲ್ಲೆಲ್ಲಿ ಜನಸಂಖ್ಯೆ ಜಾಸ್ತಿ ಇದೆ ಅಲ್ಲಿ 33 ಪರ್ಸೆಂಟ್‌ವರೆಗೂ ಹೋಗಿದೆ. ಮೇಘಾಲಯದಲ್ಲಿ ಎಲ್ಲಾ ಟ್ರೈಬಲ್ ಏರಿಯಾ ಅಂತ ಡಿಕ್ಲೇರ್ ಮಾಡಿದ್ದಾರೆ ಅಲ್ಲಿ 90 ಪರ್ಸೆಂಟ್ ಮೀಸಲಾತಿ ಇದೆ. ನಾನು ಇನ್ನೂ ಕೂಡ ಹೇಳುತ್ತೇನೆ. ನೀವು ನಿಮ್ಮ ಮೈಂಡ್ ಅಪ್ಲೈ ಮಾಡಿ. ಕಾನೂನು ಇಲಾಖೆ, ನೀವು ಡಿ.ಪಿ.ಎ.ಆರ್. ಕುಳಿತುಕೊಂಡು ಯೋಚನೆ ಮಾಡಿ. 51 ಪರ್ಸೆಂಟ್ ಓವರ್‌ಆಲ್ ಮೀಸಲಾತಿ ಇದೆ. ಬ್ಯಾಕ್‌ಲಾಗ್ ತುಂಬಲು ಅದು ಅಡ್ಡ ಬರುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ ಈಗ ನಿಮ್ಮನ್ನು ಕರೆಯುತ್ತೇನೆ. ಇಲಾಖಾ ಮುಖ್ಯಾಧಿಕಾರಿಗಳನ್ನು ಕರೆಯುತ್ತೇನೆ. ಕಾನೂನಿನ ವಿರುದ್ಧ ಹೋಗದಂತೆ ನಾವು ಏನು ಇವತ್ತು ಅವರಿಗೆ ಮನಃಪೂರ್ವಕವಾಗಿ ಸಹಾಯ ಮಾಡಬೇಕೆಂದು ಇದ್ದೇವೆ. ಆ ಉದ್ದೇಶ ಸಫಲವಾಗುವುದಕ್ಕೆ ಸಾಧ್ಯವಿದ್ದರೆ ನೋಡೋಣ. ನಾನು ಈ ದಾರಿಗೆ ಅಡ್ಡ ಬರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಮಾಡಿದ್ದೇವೆ. ನೀವು ಅದನ್ನು ಕಂಡು ಹಿಡಿಯಿರಿ. You can find out from the 1976 Order.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ ಆಮೇಲೆ ಅತ್ಯಂತ ಹೆಮ್ಮೆಯಿಂದ ಹೇಳಿಕೊಳ್ಳಲು ಎರಡು ಯೋಜನೆಗಳನ್ನು ಮಾಡಿದ್ದೇವೆ. ಒಂದು ಗೃಹ ಇಲಾಖೆ. ಇನ್ನೊಂದು ಗ್ರಾಮೀಣಾ ಅಭಿವೃದ್ಧಿಯಲ್ಲಿ "ನಿರ್ಮಲ ಕರ್ನಾಟಕ ಯೋಜನೆ". ಮನೆಗಳು ಆಶ್ರಯ ಯೋಜನೆಯಲ್ಲಿ 1993-94ರಲ್ಲಿ 37.000 ಮನೆಗಳು, ಇಂದಿರಾ ಆವಾಸ್ ಯೋಜನೆಯಲ್ಲಿ 11,000. ಡಾಕ್ಟರ್ ಅಂಬೇಡ್ಕರ್ ಯೋಜನೆಯಲ್ಲಿ 21000. 1994-95 ಸಾಲಿನಲ್ಲಿ ಆಶ್ರಯ ಯೋಜನೆಯಲ್ಲಿ 40,000, ಇಂದಿರಾ ಆವಾಸ್ ಯೋಜನೆಯಲ್ಲಿ 15 ಸಾವಿರ. ಡಾಕ್ಟರ್ ಅಂಬೇಡ್ಕರ್ ಯೋಜನೆಯಲ್ಲಿ 8,000. ಮೂರು ವರ್ಷಗಳಲ್ಲಿ 1,34.420 ಮನೆಗಳನ್ನು ಕಟ್ಟಿಸಿದ್ದೇವೆ. 1995-96ನೇ ಸಾಲಿನಲ್ಲಿ 1,18,800 ಮನೆಗಳು. 1996-97ನೇ ಸಾಲಿನಲ್ಲಿ 1,19.129 ಮನೆಗಳು ಅಂದರೆ ಒಟ್ಟು 2,37,975 ಮನೆಗಳನ್ನು ಕಟ್ಟಿ ಸಾಧಿಸಲಾಗಿದೆ. 1996-97ನೇ ಸಾಲಿನಲ್ಲಿ ವಿವಿಧ ಹಂತದಲ್ಲಿರತಕ್ಕಂಥಾ ಮನೆಗಳು ಇನ್ನೂ 2 ಲಕ್ಷ ಇವೆ. 1.18.000, ಪ್ರಗತಿ ಸಾಧಿಸಿದ್ದೇವೆ. 2.37,000 ಮನೆಗಳು ಕಂಪ್ಲೀಶನನಲ್ಲಿವೆ. ಇನ್ನು ನಿವೇಶನಗಳನ್ನು ಹಂಚಿಕೆ ಮಾಡಿರುವುದು 1993-94ರಲ್ಲಿ 1.2,000. 1994-95ರಲ್ಲಿ 1.29.000 1995-96ರಲ್ಲಿ 50.824. 1996-97ರಲ್ಲಿ 80.693 ಒಟ್ಟು ಎರಡು ವರ್ಷಗಳಲ್ಲಿ 1.34.000, ನಿವೇಶನವನ್ನು ಹಂಚಿದ್ದೇವೆ. ಅವರ ಅಚೀವ್‌ಮೆಂಟ್ ಜಾಸ್ತಿ ನಮ್ಮ ಅಚೀವ್‌ಮೆಂಟ್ ಕಮ್ಮಿ ಅಂತ ಅಲ್ಲ. ವಸತಿ ಇಲಾಖೆಯ ಟಾರ್ಗೆಟ್ ಏನಿತ್ತು? ಅದನ್ನು ರೀಚ ಮಾಡಲಾಗಿದೆ. ನಾವು ಏನು ಹೇಳಿದ್ದೆವೊ? ಅಷ್ಟು ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ.

ಶ್ರೀ ಯು. ಆರ್ ಸಭಾಪತಿ : 1991-92, 93-94ನೇ ಇಸವಿಯಲ್ಲಿ ಎಷ್ಟು ಮನೆಗಳನ್ನು ಕಟ್ಟಲಾಗಿದೆ ಎಂದು ಹೇಳಲೇ ಇಲ್ಲ.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ 1991-92ರಲ್ಲಿ ಪತ್ತು ಮನೆಗಳನ್ನೂ ಕಟ್ಟಿಲ್ಲ. ಅದಕ್ಕೆ ನಾನು ಹೇಳಬಾರದು ಅಂತ ಸುಮ್ಮನೆ ಇದ್ದೆ. ನೀವು ಕೇಳಿದ್ದರಿಂದ ಹೇಳಿದ್ದೇನೆ. ರೂರಲ್ ಡೆವಲಪ್‌ಮೆಂಟ್ ಮತ್ತ ಪಂಚಾಯತ್ ರಾಜ್ ಸಿಸ್ಟಮ್ ಪ್ರಕಾರ ಜಿಲ್ಲಾ ಪಂಚಾಯತ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಎಲೆಕ್ಷನ್ ಅನ್ನು ಇನ್ನು ಎರಡು ವಾರಗಳಲ್ಲಿ ಮಾಡುತ್ತೇವೆ. ಆಮೇಲೆ ಜಿಲ್ಲಾ ಪಂಚಾಯತ್‌ಗೆ ಮತ್ತು ತಾಲ್ಲೂಕು ಪಂಚಾಯಿತಿಗೆ ಅವಶ್ಯವಿರುವ ಅಕೌಂಟೆಂಟ್ಸ್, ಕ್ಲಾರ್ಕ್ಸ್, ಸ್ಟೆನೋಗ್ರಾಫರ್ಸ್ ಇತ್ಯಾದಿ 1237 ಹುದ್ದೆಗಳನ್ನು ಭರ್ತಿ ಮಾಡುತ್ತೇವೆ. 93.58 ಕೋಟಿ ರೂಪಾಯಿ ವೆಚ್ಚದಲ್ಲಿ ಜನವರಿ 97ರ ಹೊತ್ತಿಗೆ 507 ಪೈಪ್ಡ ವಾಟರ್ ಸ್ಕೀಮನ್ನು ಕಂಪ್ಲೀಟ್ ಮಾಡಲಾಗಿದೆ. 507 ಮಿನಿ ವಾಟರ್ ಸ್ಕೀಮನ್ನು ಕಂಪ್ಲೀಟ್ ಮಾಡಲಾಗಿದೆ, 4,123 ಹೊಸ ಬೋರ್‌ವೆಲ್‌ಗಳನ್ನು ಹಾಕಲಾಗಿದೆ, 12 ಜಿಲ್ಲೆಗಳ 200 ಹಳ್ಳಿಗಳಲ್ಲಿ ಕುಡಿಯುವ ನೀರು ಸರಬರಾಜು ಮಾಡುವ ಕೆಲಸ ಮುಕ್ತಾಯದ ಹಂತದಲ್ಲಿದೆ. ಇನ್ನೂ 1200 ಹಳ್ಳಿಗಳಲ್ಲಿ 1997ನೇ ಇಸವಿಯೊಳಗೆ ಕುಡಿಯುವ ನೀರನ್ನು ಒದಗಿಸಲಾಗುವುದು. ಆಮೇಲೆ "ನಿರ್ಮಲ ಗ್ರಾಮ ಯೋಜನೆ" ನಮ್ಮ ದೇಶದಲ್ಲಿ ಸರಿಯಾದ ಶೌಚಾಲಯದ ಅನುಕೂಲವಿಲ್ಲದೆ ಬಹಳ ಕಷ್ಟವಾಗಿದೆ. ಹಳ್ಳಿಗಾಡಿನ ಹೆಣ್ಣುಮಕ್ಕಳು ಶೌಚಾಲಯಕ್ಕೆ ಹೋಗಬೇಕಾದರೆ ಎಷ್ಟು ಕಷ್ಟ ಮತ್ತು ಹಿಂಸೆಯಾಗುತ್ತದೆಂದು ಮಾನ್ಯ ವಾಟಾಳ್‌ನಾಗರಾಜರವರು ಹೇಳುತ್ತಿದ್ದರು. ಈ ಕಷ್ಟವನ್ನು ನಿವಾರಣೆ ಮಾಡುವ ದೃಷ್ಟಿಯಿಂದ ಮೊದಲನೆಯ ಹೆಜ್ಜೆ ಇಟ್ಟಿರತಕ್ಕಂಥ ರಾಜ್ಯ ನಮ್ಮದು. 10 ವರ್ಷಗಳಲ್ಲಿ ಆಗದೇ ಇರತಕ್ಕಂಥ ಕೆಲಸವನ್ನು ನಾವು ಒಂದು ವರ್ಷದಲ್ಲಿ ಮಾಡಿ ಮುಗಿಸಿದ್ದೇವೆ. ಹಿಂದಿನ 10 ವರ್ಷಗಳಲ್ಲಿ 1,07,000 ಲೆಟ್ರಿನ್‌ಗಳನ್ನು ಕಟ್ಟಿಸಿಕೊಡಲಾಗಿತ್ತು. ಈಗ ಒಂದು ವರ್ಷದಲ್ಲೇ 2,70,000 ಸ್ಯಾನಿಟರಿ ಲೆಟ್ರಿನ್‌ಗಳನ್ನು ಕಟ್ಟಿಸಿಕೊಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಯಾವ ಮಾಡಲ್‌ನಲ್ಲಿ ಕಟ್ಟಿಸಲಾಗಿದ? ಅಲ್ಲಿ ನೀರಿನ ವ್ಯವಸ್ಥೆ ಇಲ್ಲದಿದ್ದರೆ ಅದು ಕೆಟ್ಟು ಹೋಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್ : ಇಂಡುವಿಜುಯಲ್ ಆಗಿ ಮನೆಗಳನ್ನು ಕಟ್ಟಿಸಿಕೊಡಲಾಗಿದೆ. ಯಾವ ರೀತಿ ಕ್ಲೀನ್ ಆಗಿ ಇಟ್ಟುಕೊಳ್ಳಬೇಕೆಂದು ಅವರಿಗೆ ಗೊತ್ತಿರುತ್ತದೆ. ಮೊದಲು ಈ ವ್ಯವಸ್ಥೆ ಕೂಡ ಇರಲಿಲ್ಲವಲ್ಲಾ? ಆವಾಗ ಹೆಣ್ಣು ಮಕ್ಕಳು ಹೊತ್ತು ಮುಳುಗಿದ ಮೇಲೆ ಅಥವಾ ಹೊತ್ತು ಹುಟ್ಟುವ ಮೊದಲೇ ಶೌಚಕ್ಕೆ ಹೋಗಬೇಕಾದಂಥ ಪರಿಸ್ಥಿತಿ ಇತ್ತು. ಇಂಥಾ ನರಕ ಯಾತನೆ ನಮ್ಮ ದೇಶದಲ್ಲಿ ಇತ್ತು. ಆವತ್ತಿನಿಂದ ಇಲ್ಲಿಯವರೆಗೆ ಆ ಹಿಂಸೆಯನ್ನು ಮಹಿಳೆಯರು ಹೇಗೆ ಸಹಿಸಿಕೊಂಡರೋ ಗೊತ್ತಿಲ್ಲ. ಅದರ ಬಗ್ಗೆ ಗಂಡಸರಿಗೆ ಏನೂ ಚಿಂತೆ ಇಲ್ಲ, ಅವರು ಎಲ್ಲೂ ಬೇಕಾದರೂ ಹೇಗೆ ಬೇಕಾದರೂ ಹೋಗುತ್ತಾರೆ.

ಶ್ರೀ ಹೆಚ್.ಎನ್. ನಂಜೇಗೌಡ : ಇನ್ನೂ ಒಂದುವರೆ ಗಂಟೆ ಕಾಲ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡಬಹುದು, ಈಗ ಊಟಕ್ಕೆ ಏನು ಮಾಡುವುದು? ಹೊಟ್ಟೆ ತಾಳ ಹಾಕುತ್ತಿದೆಯಲ್ಲಾ? ಊಟ ಆದ ಮೇಲೆ ಅವರ ಉತ್ತರವನ್ನು ಸಮಾಧಾನವಾಗಿ ಕೇಳಬಹುದು.

ಶ್ರೀ ಜೆ. ಹೆಚ್. ಪಟೇಲ್ : ಸರ್ಕಾರ ಸಾಧಿಸಿರುವ ವರದಿಯನ್ನು ನಾನು ಕೊಡುತ್ತಿದ್ದೇನೆ. ಅವರು ಏನೂ ಹೇಳಲೇ ಇಲ್ಲ, ಬರೀ ಕತೆ ಹೇಳಿಬಿಟ್ಟರು, ಇವರು ಫಿಲಾಸಫಿ ಮಾತನಾಡಿಬಿಟ್ಟರೆಂದು ಆಮೇಲೆ ನೀವು ಹೇಳುವುದ ಬೇಡ. ಆಮೇಲೆ, ಭಾರತೀಯ ಸಂಸ್ಕೃತಿ ಎಂದು ಏನು ಕರೆಯುತ್ತೇವೆ? ಅದಕ್ಕೆ ಅತ್ಯಂತ ಕಳಂಕ ತರತಕ್ಕಂಥ ಪದ್ಧತಿ ಇದಾಗಿತ್ತು. ಇನ್ನೂ ಬಡ ದೇಶಗಳು ಇವೆ, ಆದರೆ ಇಷ್ಟು ಹಿಂಸೆ ಆ ದೇಶದ ಹೆಣ್ಣು ಮಕ್ಕಳಿಗೆ ಆಗುವುದಿಲ್ಲ. ' ಒಂದು ಸಾರಿ ರಷ್ಯಾ ದೇಶದ ಅಧ್ಯಕ್ಷರಾದ ಕ್ರುಶ್ಚೇವ್ ಬಂದಾಗ ಅವರನ್ನು ನೆಹರೂವರು ಬೆಂಗಳೂರಿನಿಂದ ಮೈಸೂರಿಗೆ ಕರೆದುಕೊಂಡು ಹೊರಟ್ಟಿದ್ದರು, ಬೆಂಗಳೂರು ಸಿಟಿ ತಕ್ಷಣ ಹೆಂಗಸರು, ಗಂಡಸರು ಎಲ್ಲಾ ಎದ್ದೆದ್ದು ನಿಂತಕೊಳ್ಳುತ್ತಿದ್ದರು, ಆಗ ಇವರು ಏಕೆ ಹೀಗೆ ಮಾಡುತ್ತಿದ್ದಾರೆಂದು ಕೇಳಿದಾಗ I am ashamed to talk about it. After so many years, after 15 years we have not been able to achieve this. I am sorry. ಆಮೇಲೆ ನೆಹರೂರವರು ರಷ್ಯಾಗೆ ಹೋಗಿದ್ದಾಗ ತಾಷ್ಕೆಂಟನಿಂದ ಮಾಸ್ಕೋ ಹತ್ತಿರ ಬರುತ್ತಿದ್ದಾಗ ಅಲ್ಲಿ ಒಬ್ಬ ಕುಳಿತಿದ್ದ. ಆಗ ಕ್ರುಶ್ಚೇವ್‌ಗೆ ಸಿಟ್ಟು ಬಂದು go and shot him, ಎಂದು ಹೇಳಿದ. ಆಫೀಸರ್‌ಗಳು ಅಲ್ಲಿಗೆ ಹೋಗಿ ವಾಪಸ್ ಬಂದರು. Sir, we cannot shot him. He is from Indian Embassy. ಎಂದು ಹಾಗೇ ಇದರಿಂದ ದೇಶಕ್ಕೆ ಒಂದು ಅಪಕೀರ್ತಿ ಇದೆ. ಇದನ್ನು ತೊಲಗಿಸುವ ಪ್ರಯತ್ನ ಮಾಡಿರುವುದನ್ನು ನಮ್ಮ ರಾಜ್ಯವೇ ಮೊದಲು. ಈಗ ನಮ್ಮ ಸರ್ಕಾರ ಮಾಡಿರುವ ಸಾಧನೆಯ ಅಂಕಿಅಂಶ ಮಾತ್ರ ಕೊಡುತ್ತಿದ್ದೇನೆ. ಶಿಕ್ಷಣ ಇಲಾಖೆ ಬಗ್ಗೆ I must admire my Education Minister. 18 ಸಾವಿರ ಟೀಚರ್ಸ್‌ನ್ನು ಅಪಾಯಿಂಟ್ ಮಾಡಿದ್ದೇವೆ ಅದರಲ್ಲಿ 50 ಪರ್ಸೆಂಟ್ ಲೇಡೀಸ್ ಇದ್ದಾರೆ. 68 ಕೋಟಿ ರೂಪಾಯಿಗಳನ್ನು ಶೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಶೆಡ್ಯೂಲ್ಡ್ ಟ್ರೈಬ್ ಇನ್ಸಿಟ್ಯೂಷನ್‌ಗೆ ಕೊಟ್ಟಿದ್ದೇವೆ. 482 crores to meet grant-in-aids of the aided educational institutions like primary school, high school, Pre-University, First Grade College, Polytechnics and Engineering. ಅನ ಎಡೆಡ ಇನ್ಸಿಟ್ಯೂಷನಗಳನ್ನು ಎಡೆಡ ಲಿಸ್ಟಗೆ ಸೇರಿಸಬೇಕೆಂದು ಮಾನ್ಯ ಸದಸ್ಯರುಗಳು ಕೇಳುತ್ತಲೇ ಇರುತ್ತಾರೆ. ಆ ಎಲ್ಲಾ ಅನ ಎಡೆಡ ಸ್ಕೂಲುಗಳನ್ನು ಲಿಸ್ಟ್‌ಗೆ ಸೇರಿಸಿದರೆ ವರ್ಷಕ್ಕೆ 488 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಸರ್ಕಾರ ಖರ್ಚು ಮಾಡಬೇಕಾಗುತ್ತದೆ. ಯಾರು ಯಾರೋ ಸಿಕ್ಕ ಸಿಕ್ಕ ಹಾಗೆ ಸ್ಕೂಲುಗಳನ್ನು ಮಾಡಿಕೊಂಡು ಬಿಟ್ಟರು, ಟೀಚರ್ಸ್‌ನ್ನು ಅಪಾಯಿಂಟ್ ಮಾಡಿಕೊಂಡು ಬಿಟ್ಟರು, ಹಿಂದೆ ಜಿಲ್ಲಾ ಪರಿಷತ್ತು ಇದ್ದಾಗಲು ಹಾಗೆ ಆಗಿವೆ. ಇದರ ಬಗ್ಗೆ ಸೈನ್ ಟಿಫಿಕ್ ಆಗಿ ಯೋಚನೆ ಮಾಡಿ ಕ್ರಮ ಪರಿಷತ್ತು ತೆಗೆದುಕೊಳ್ಳಿ ಎಂದು ಮಾನ್ಯ ಗೋವಿಂದೇಗೌಡರಿಗೆ ಹೇಳಿದ್ದೇನೆ. ಪ್ರತಿ ಜಿಲ್ಲೆಗೆ ಹೋದಾಗಲೂ ನಮ್ಮದೊಂದು ಶಾಲೆಯನ್ನು ಎಡೆಡ್‌ಗೆ ಸೇರಿಸಿ, ನಮ್ಮದು 80ನೇ ಇಸವಿಯಲ್ಲಿ ಪ್ರಾರಂಭ ಮಾಡಿದ್ದು, ನಮ್ಮದು 72ನೇ ಇಸವಿಯಲ್ಲಿ ಪ್ರಾರಂಭ ಮಾಡಿದ್ದು ಎಂದು ಹೇಳುತ್ತಾರೆ. ಅದಕ್ಕಾಗಿ ಇದಕ್ಕೆ ಒಂದು ಅಂತಿಮ ಪರಿಹಾರವನ್ನು ಕಂಡುಕೊಳ್ಳಬೇಕು, ಇಲ್ಲದೆ ಹೋದರೆ ಅದರ ಮೇಲೆ 488 ಕೋಟಿ ರೂಪಾಯಿಗಳನ್ನು ಸರ್ಕಾರ ಖರ್ಚು ಮಾಡುವುದಕ್ಕಾಗುವುದಿಲ್ಲ. ಶೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಶೆಡ್ಯೂಲ್ಡ್ ಟ್ರೈಬ್‌ನವರಿಗೆ ಪ್ರಸ್ತುತ ಅನುದಾನ ರಹಿತ ಇರುವ ಶಾಲಾ ಕಾಲೇಜುಗಳ ವಿವರ ಈ ಕೆಳಕಂಡಂತೆ ಇವೆ. ಪ್ರಾಥಮಿಕ ಶಾಲೆಗಳು

315, ಪ್ರೌಢ ಶಾಲೆಗಳು 844, ಸ್ವತಂತ್ರ ಪದವಿ ಪೂರ್ವ ಕಾಲೇಜುಗಳು 94, ಸಂಯುಕ್ತ ಪದವಿ ಪೂರ್ವ ಕಾಲೇಜುಗಳು 89, ಇವನ್ನೂ ಮತ್ತು ಜನರಲ್‌ನಲ್ಲಿ ಇರುವುದನ್ನು ಸೇರಿಸಿದರ ರಾಜ್ಯ ಸರ್ಕಾರಕ್ಕೆ ಹೊರಲಾರದ ಕೊರತೆಯಾಗುತ್ತದೆ. ಅದಕ್ಕೆ ನಾವೀಗ ಏನಾದರೂ ಒಂದು ನಿಶ್ಚಿತವಾದ ತೀರ್ಮಾನವನ್ನು ತೆಗೆದುಕೊಂಡು ಎಸ್‌ಸಿ/ಎಸ್‌ಟಿ ಯವರಿಗೆ ಮಾತ್ರ ಎಡೆಡ್ ಲಿಸ್ಟಗೆ ಸೇರಿಸಿ ಬಿಟ್ಟರ ದೊಡ್ಡ ಸೋಶಿಯಲ್ ಪ್ರಾಬ್ಲಮ್ ಆಗುತ್ತದೆ. ಅದಕ್ಕೆ ಈಗ ಸರಕಾರದವರು ಆಲೋಚನೆ ಮಾಡುತ್ತಾ ಇದ್ದೇವೆ. ಆದಷ್ಟು ಬೇಗ ಒಂದು ತೀರ್ಮಾನವನ್ನು ಕೂಡ ತೆಗೆದುಕೊಳ್ಳುತ್ತೇವೆ. ರಸ್ತೆಗಳ ಬಗ್ಗ ತಾವುಗಳು ಸಕಾರಣವಾಗಿ ಟೀಕೆ ಮಾಡಿದ್ದೀರಿ. ರಸ್ತೆಗಳು ಟೀಕೆಗಳಿಗೆ ಅರ್ಹವಾಗಿದ್ದಾವೆ ಎಂಬುದನ್ನು ನಾನೂ ಕೂಡ ಒಪ್ಪುತ್ತೇನೆ. ಅದಕ್ಕೆ ಹಲವಾರು ಕಾರಣಗಳೂ ಇವೆ. ಒಂದನೇಯದಾಗಿ ಅವುಗಳ ಸ್ಟ್ಯಾಂಡರ್ಡ್‌ನ್ನು ಯಾವ ರೀತಿಯಲ್ಲಿ ಮೆಂಟೇನ್ ಮಾಡಬೇಕಾಗಿತ್ತೋ ಅದನ್ನು ಮಾಡಲಿಲ್ಲ. ಎರಡನೇದಾಗಿ ನಾವು ರೋಡ್ ಮೈಂಟೇನೆನ್ಸ್ ಕಾಸ್ಟ್‌ನ್ನು ಏನು ಫಿಕ್ಸ್ ಮಾಡಿದ್ದೇವೆ ಅದು ಯಾವುದೋ ಕಾಲದ್ದು. ಅದು ಒಂದು ಕಿ.ಮೀ.ಗೆ 10 ಸಾವಿರ, 7ಸಾವಿರ ಎಂದು ಫಿಕ್ಸ್ ಮಾಡಿರುವುದು. ಆ ಹಣದಲ್ಲಿ ಇವೊತ್ತು ಮಣ್ಣು ಕೂಡ ಹಾಕಲು ಆಗುವುದಿಲ್ಲ. ಹೀಗೆ ಮಾಡಿ ಜನರ ಕಣ್ಣಿಗೆ ಮಣ್ಣು ಹಾಕಿರುವುದು ಆಗಿದೆಯೇ ಹೊರತು, ರಸ್ತೆಗಳ ರಿಪೇರಿ ಆಗಲಿಲ್ಲ. ನಮ್ಮ ಅದೃಷ್ಟಕ್ಕೆ ಹೋದ ವರ್ಷದಲ್ಲಿ ಚೆನ್ನಾಗಿ ಮಳೆಯೂ ಆಯಿತು. ದುರಾದೃಷ್ಟಕ್ಕೆ ರೋಡ್‌ಗಳು ಮಾತ್ರ ಹಾಳಾಗಿ ಹೋದವು. ಮಳೆ ಬಂದುದಕ್ಕೆ ಸಂತೋಷಪಡಬೇಕೆ? ಅಥವಾ ರೋಡ್ ಕೆಟ್ಟಿದ್ದಕ್ಕೆ ಅಳುವುದೇ? ಆದ್ದರಿಂದ ಈ ವರ್ಷ 35 ಕೋಟಿ ಬಜೆಟ್ ಅಮೌಂಟ್‌ಗಿಂತ ಜಾಸ್ತಿ ಹಣವನ್ನು ಜನವರಿ, ಫೆಬ್ರವರಿ, ಮಾರ್ಚ್ ಏಪ್ರಿಲ್, ಒಳಗಾಗಿ ಖರ್ಚು ಮಾಡಲಾಗುವುದು. ಏಕೆಂದರೆ ಜೂನ್‌ನಲ್ಲಿ ಮಳೆ ಶುರುವಾದರೆ ರಸ್ತೆ ಕೆಲಸವನ್ನು ಮಾಡಿಸುವುದಕ್ಕೆ ಸರಿ ಹೋಗುವುದಿಲ್ಲವೆಂದು ನಿಶ್ಚಯಿಸಿ ಬಜೆಟ್ ಅಮೌಂಟ್‌ಗಿಂತ 35 ಕೋಟಿ ಹೆಚ್ಚಿನ ಅಮೌಂಟನ್ನು ಈ ರಸ್ತೆ ರಿಪೇರಿಗಾಗಿ ಲೋಕೋಪಯೋಗಿ ಇಲಾಖೆಗೆ ಬಿಡುಗಡೆ ಮಾಡುತ್ತೇವೆ. ಹಾಗೆಯೇ ನಬಾರ್ಡ್‌ನದ್ದು 140 ಕೋಟಿ ರೂ.ಗಳು ವಿಲೇಜ್ ಕಮ್ಯುನಿಕೇಶನ್ಸ್ ರಸ್ತೆಗಳಿಗೆ. ಅಂತೆಯೇ ಸಣ್ಣ ನೀರಾವರಿ ಮತ್ತು ಮಧ್ಯಮ ನೀರಾವರಿಗಾಗಿ ಅವರು 120 ಕೋಟಿಗಳನ್ನು ಕೊಡಲು ಆಗದೇ ಒಪ್ಪಿದ್ದಾರೆ. ಈ ವರ್ಷಕ್ಕೆ ಮತ್ತೆ ಅಡಿಶನಲ್ ಆಗಿ 140 ಕೋಟಿ ರೂ.ಗಳನ್ನು ನಬಾರ್ಡ್‌ನಿಂದ ಪಡೆಯಬೇಕೆಂದಿದ್ದೇವೆ. ಕೃಷಿ ಇಲಾಖೆಯಲ್ಲಿ, ಮತ್ತು ಕೊನೆಯದಾಗಿ... ಮೀನುಗಾರಿಕೆ ಇಲಾಖೆ ಒಂದು ಇದೆ. ಅನಂತರ ನಾನು ಸಂಜೀಗೌಡರ ವಿಷಯಕ್ಕೆ ಬರಲಿದ್ದೇನೆ.

Additional Rs.140 crores we are going to bring from them this year.

As far as production in Agriculture and Horticulture Departments are concerned there is neither depletion nor a big rise in the production. We have maintained the same rae.

84 ಕೋಟಿ ಟನ್‌ಗಳಷ್ಟು ಇದ್ದುದ್ದು 87 ಕೋಟಿ ಟನ್‌ಗಳಷ್ಟಾಗಿವೆ. ಆಮೇಲೆ ಕೃಷಿ ಇಲಾಖೆಯಲ್ಲಿ ಕೆಲವು ಹೊಸ ಪ್ರಯೋಗಗಳನ್ನು ಮಾಡುತ್ತಾ ಇದ್ದಾರೆ. ಅದಕ್ಕೆ ಸೈನ್‌ಟಿಫಿಕ್ ಅಪ್ರೋಚ್‌ನ್ನು ಕೊಡಲು

ಮಾನ್ಯ ಸಚಿವರು ಶ್ರಮಿಸುತ್ತಿದ್ದಾರೆ. ಕೃಷಿಯನ್ನು ಒಂದು ಇಂಡಸ್ಟ್ರೀಯನ್ನಾಗಿ ನೋಡುವ ಹಾಗೆ ಒಂದು ಹೊಸ ಕೃಷಿ ನೀತಿಯನ್ನು ತಂದಿದ್ದಾರೆ. ಅದೇ ಮಾಡೆಲ್‌ನ ಮೇಲೆ ಇವೊತ್ತು ರಾಷ್ಟ್ರದಲ್ಲಿ ಇಂಡಸ್ಟ್ರೀಗೆ ಇದ್ದ ಹಾಗೆಯೇ ಅಗ್ರಿಕಲ್ಚರ್‌ಗೂ ಒಂದು ಪಾಲಿಸಿಯನ್ನು ಮಾಡಲು ವಿಚಾರ ಮಾಡುತ್ತಾ ಇದ್ದಾರೆ. ಮೀನುಗಾರಿಕೆ ಇಲಾಖೆಗೆ ಈಗ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಬಂದು ನಾವು ಬಹಳ ತೊಂದರೆಯಲ್ಲಿದ್ದೇವೆ ಎಂದು ಅವರೆಲ್ಲಾ, 2150 families engaged in shrimp farming in coastal line have been affected due to this judgement of the Supreme Court. ಇದಕ್ಕಾಗಿ ನಾವು ಸುಪ್ರೀಂಕೋರ್ಟ್‌ಗೆ ರಿವ್ಯೂ ಪಿಟಿಶನ್ ಹಾಕಿದ್ದೇವೆ. ಮತ್ತು ಅವರಿಗೆ ಸಾಕಷ್ಟು ಕಾಂಪನ್‌ಸೇಟರಿ ಹಣವನ್ನು ಕೊಡಿಸಿದ್ದೇವೆ. ಮುಂದೆ ರಿವ್ಯೂ ಪಿಟಿಶನ್ ಕೋರ್ಟ್‌ನಲ್ಲಿ ಆದರೆ ಅವರಿಗೆ ಅನುಕೂಲವಾಗುತ್ತದೋ ನೋಡೋಣ. ಸಹಕಾರ ಇಲಾಖೆಯಲ್ಲಿ ಕೊರತೆಯೂ ಇಲ್ಲ, ಹೆಚ್ಚಳವೂ ಇಲ್ಲ. ಆದರೆ ಇಲಾಖೆ ಬಹಳ ಚುರುಕಾಗಿ ಎಷ್ಟು ಕ್ರೆಡಿಟ್ ಡಿಸ್ಟ್ರಿಬ್ಯೂಷನ್ ಮಾಡುವುದು, ರಿಕವರಿ ಏನು ಇದೆ ಅದು 1995ರಲ್ಲಿ 303.3 ಕೋಟಿಗಳು ರಿಕವರಿ ಅಚೀವ್‌ಮೆಂಟ್ ಆದರೆ 1996-7ರಲ್ಲಿ 408 ಕೋಟಿಗಳಿಗೆ ಬಂದಿದೆ. ಇದು ಸಹಕಾರ ಇಲಾಖೆಯಲ್ಲಾದ ಇಂಪ್ರೂವ್‌ಮೆಂಟ್. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವಿಚಾರ ಈಗಾಗಲೇ ಹೇಳಿದ್ದೇನೆ. ಅಂಗನವಾಡಿಯವರ ದೂರುಗಳು ಏನಿವೆ ಅವುಗಳನ್ನು ಸರಿಪಡಿಸಬೇಕು ಮತ್ತು ಮಹಿಳೆಯರಿಗೆ ರಾಜಕೀಯವಾಗಿ ಮತ್ತು ಇತರ ಸವಲತ್ತುಗಳನ್ನು ನಾವೇನು ಕೊಡಬೇಕೆಂದಿದ್ದೇವೆ ಮತ್ತು ಕೊಟ್ಟಿದ್ದೇವೆ ಅವುಗಳ ಬಗ್ಗೆ ದೆಹಲಿಯಲ್ಲಿ ಬಹಳ ತೀವ್ರವಾಗಿ ಚರ್ಚೆ ನಡೆಯುತ್ತಾ ಇದೆ, ಅದು ಕೂಡ ಆಗಬಹುದೆನ್ನುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾ ಲೋಕಸಭೆಯಲ್ಲಿಯೂ Representation of people Act. ಬಗ್ಗೆ ಚರ್ಚೆ ನಡೆಯುತ್ತಿದೆ. ಅಮೆಂಡ್‌ಮೆಂಟ್ ಆಗಿ ಶೇಕಡಾ 20ರಷ್ಟು ಒಪ್ಪುತ್ತಾರೆ ಎಂದು ಕೇಳಿದ್ದೇನೆ. ಶೇಕಡಾ 20ರಷ್ಟು ಮಹಿಳೆಯರಿಗೆ ರಿಸರ್ವೇಶನ್ ವಿಧಾನಸಭೆ ಮತ್ತು ಲೋಕಸಭೆಯಲ್ಲಿ ಆದರೆ ಒಂದು ಸಭ್ಯತೆಯ ಒಂದು ಕಲ್ಚರ್ ಅಲ್ಲಿ ಬರಬಹುದು.

ಶ್ರೀ ಪಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇಲ್ಲಿ ಆರು ಜನರು ಇದ್ದೇ ನಮಗೆ ಕಷ್ಟವಾಗಿದೆ. ನಿಮ್ಮ ಶೇಕಡಾ 20ರಷ್ಟು ಅಂದರೆ 224ಜನರ ನಮ್ಮ ಮನೆಯಲ್ಲಿ 70ಜನರು ಮಹಿಳೆಯರು ಬರುತ್ತಾರೆ. ಆಗ ನಮ್ಮ ಪರಿಸ್ಥಿತಿ ಏನು? ಅವರು ಬರಲು ನನ್ನ ವಿರೋಧವಿಲ್ಲ.

ಶ್ರೀ ಜೆ. ಹೆಚ್. ಪಟೇಲ್ : ಮಹಿಳೆಯರು ಧರಣಿ ಕೂಡುವುದಿಲ್ಲ. ಸದನದಲ್ಲಿ ಅಧ್ಯಕ್ಷರಿಗೆ ಸಿಟ್ಟು ಬರುವ ಹಾಗೆ ಮಾಡುವುದಿಲ್ಲ...... ಈಗ ನಾನು ಸರಕಾರದ ಇಲಾಖಾವಾರು ಸಾಧನೆಗಳನ್ನು ಮುಂದಿಸಿದ್ದೇನೆ. ಈಗ ಮಾನ್ಯ ನಂಜೇಗೌಡರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಹೆಚ್. ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ತಮ್ಮ ಸಾಧನೆಗಳನ್ನು ಹೇಳಿದ್ದಾರೆ. ನಮಗೆ ಕೊಡುವ ಉತ್ತರವನ್ನು ಅವರು ನಾನು ಊಟ ಮಾಡಿದ ಮೇಲೆ ಕೊಡಲಿ. ನಾವು ಊಟ ಮಾಡಿಕೊಂಡು ಬಂದು ಕುಳಿತುಕೊಂಡು ಮಾನ್ಯ ಮುಖ್ಯಮಂತ್ರಿಯವರು ಹೇಳುವುದನ್ನು ಕೇಳಬೇಕು. ಅವರಿಗೆ ಇನ್ನೂ ಒಂದು ಗಂಟೆಯ ಕಾಲಾವಕಾಶ ಬೇಕು. ಆದ್ದರಿಂದ

ದಯಮಾಡಿ ಅರ್ಧಗಂಟೆ ಕಾಲ ಸಭೆಯನ್ನು ಮುಂದೂಡಿ ಊಟ ಮಾಡಲು ಸಮಯಾವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಸಭೆಯು ಕಲಾಪಗಳನ್ನು ಸ್ಥಗಿತಗೊಂಡು ಭೋಜನ ವಿರಾಮದ ನಂತರ 3-30 ಗಂಟೆಗೆ ಪುನಃ ಸಮಾವೇಶಗೊಳ್ಳಲಿದೆ.

(ಸಭೆಯು ಕಲಾಪಗಳನ್ನು ಸ್ಥಗಿತಗೊಳಿಸಿ ಭೋಜನ ವಿರಾಮದ ನಂತರ ಪುನಃ 3-30 ಗಂಟೆಗೆ ಸೇರಲು ನಿರ್ಧರಿಸಿತು.)

ಸದನವು ಪುನಃ 3.40 ನಿಮಿಷಕ್ಕೆ ಸೇರಿತು.

(ಮಾನ್ಯ ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

4) ರಾಜ್ಯಪಾಲರ ಭಾಷಣದ ಮೇಲೆ ವಂದನಾರ್ಪಣ ಪ್ರಸ್ತಾವದ ಚರ್ಚೆಗೆ ಮುಖ್ಯಮಂತ್ರಿಗಳಿಂದ ಮುಂದುವರಿದ ಉತ್ತರ.

ಶ್ರೀ ಜೆ. ಹೆಚ್. ಪಟೇಲ್ : ಸನ್ಮಾನ್ಯ ಉಪಾಧ್ಯಕ್ಷರೆ, ಇಲಾಖಾವಾರು ಸರ್ಕಾರದ ಕಾರ್ಯಕ್ರಮಗಳು ಮತ್ತು ಸಾಧನೆಗಳ ಬಗ್ಗೆ ಹೇಳುವಾಗ ಒಂದು ಕೈಗಾರಿಕಾ ಇಲಾಖೆ, ನ್ಯಾಷನಲ್ ಗೇಮ್ಸ್ ಮತ್ತು ಟೂರಿಸಂ ಈ ಮೂರು ಇಲಾಖೆಗಳ ಬಗ್ಗೆ ಬಿಟ್ಟಿದ್ದೆ. ಅದನ್ನು ಈಗ ಪೂರ್ಣಗೊಳಿಸುತ್ತೇನೆ. ಕೈಗಾರಿಕಾ ಇಲಾಖೆಯ ಬಗ್ಗೆ ಮಾತನಾಡಬೇಕಾದರೆ, ಪತ್ತು ಸಾವಿರ ಕೋಟಿ ಬಂತು, ಇಪ್ಪತ್ತು ಸಾವಿರ ಕೋಟಿ ಬಂತು, ಎಲ್ಲಿ ಬಂತು ? ಯಾರು ತಂದರು ಹಾಗೆ ಹೀಗೆ ಎಂದು ಕೇಳುತ್ತಾರೆ. ಅದು ಸ್ವಾಭಾವಿಕ. ನಾನು ಇವೊತ್ತು ಕರಾರುವಾಕ್ಕಾಗಿ ಯಾವ ಕಂಪನಿಯವರು ಎಷ್ಟು ದುಡ್ಡನ್ನು ಎಲ್ಲೆಲ್ಲಿ ಇನವೆಸ್ಟ್ ಮಾಡುತ್ತಾರೆ, ಇನ್ನು ಎಷ್ಟು ಕಂಪನಿಗಳು ರಾಜ್ಯಸರ್ಕಾರದೊಡನೆ ಒಪ್ಪಂದ ಮಾಡಿಕೊಂಡಿವೆ ಮತ್ತು ಎಲ್ಲೆಲ್ಲಿ ಇನ್‌ವೆಸ್ಟ್ ಮಾಡಬಹುದು ಇದರ ಬಗ್ಗೆ ನಾನು ಕಾಂಕ್ರೀಟ್ ಆಗಿ ಹೇಳುತ್ತೇನೆ. ಬರೀ ಥಿಯರಿ ಅಥವಾ ಐಡಿಯಾ ಅಲ್ಲ. ಈಗ ಹಿಂದೆ 5 ವರ್ಷದಲ್ಲಿ 27 ಪ್ರಾಜೆಕ್ಟ್ ಕ್ಲೀಯರ್ ಆಯಿತು. ಇನ್‌ವೆಸ್ಟ್‌ಮೆಂಟ್ ಆಗಲಿಲ್ಲ. ಆದರೂ ನೂರು ಇನ್ನೂರು ಕೋಟಿ ಆಗಿರಬಹುದು. ಈಗ 53 ಪ್ರಾಜೆಕ್ಟ್‌ಗಳು ಕ್ಲಿಯರ್ ಆಗಿವೆ. ಅದರೊಳಗೆ ಇಪ್ಪತ್ತು ಕಂಪನಿಗಳು ಕೆಲಸ ಶುರು ಮಾಡಿವೆ. ಅದರಲ್ಲಿ ನಾಲ್ಕು ಈಗಾಗಲೇ ಕಂಪ್ಲೀಶನ್‌ಗೆ ಬಂದಿವೆ. ಇನ್ನು 16 ಕಂಪನಿಗಳು ತಮ್ಮ ಬಂಡವಾಳವನ್ನು ತೊಡಗಿಸಿವೆ. ಅವುಗಳ ಹೆಸರನ್ನು ಕೂಡ ಹೇಳುತ್ತೇನೆ. Investments in industry for the last three years ನಲ್ಲಿ 36000 ಕೋಟಿ ರೂಪಾಯಿಗಳು ಅದಕ್ಕೆ ಪವರ್ ಪ್ರಾಜೆಕ್ಟನ್ನು ಸೇರಿ, ಬರೀ ಇಂಡಸ್ಟ್ರೀಸ್‌ಗೆ, ಸ್ಮಾಲ್ ಸ್ಕೇಲ್ ಸೆಕ್ಟಾರ್ಸ್‌ಗೆ ಎಷ್ಟು, ಬಿಗಿನರ್ಸ್‌ಗೆ ಎಷ್ಟು, ಮೆಗಾ ಪ್ರಾಜೆಕ್ಟ್‌ಗೆ ಎಷ್ಟು, ಅದಕ್ಕೆ ಬೇರೆ. Total clearance for investment in the State by 20 industries, out of which 4 have already been completed. The investment is Rs. 36.914 crores and the number of units are 53. The employment potential is 4,65,837. ಅದಕ್ಕೆ ಈಗಾಗಲೇ ಐದು -ಯುನಿಟ್‌ಗಳವರು 644 ಕೋಟಿ ಇನ್‌ವೆಸ್ಟ್ ಮಾಡಿದ್ದಾರೆ. 1,446 ಜನರು ಎಂಪ್ಲಾಯ್ ಆಗಿದ್ದಾರೆ.

ಇದು ಆಗಿರುವುದರ ಬಗ್ಗೆ ನಾನು ಹೇಳುವುದು. ಇನ್ನು ಬರಬಹುದಾದ ಇಂಡಸ್ಟ್ರೀಸ್ ಪ್ರೋಲ್ಪ್ರೋ, ಟೆಲ್ಕೋ, ಸುಜುಕಿ, ಟಯೋಟಾ ಇವು ಈಗ ಈ ರಾಜ್ಯದ ಬಗ್ಗೆ ಮತ್ತು ಈ ಸರ್ಕಾರದ ಬಗ್ಗೆ ತುಂಬಾ ವಿಶ್ವಾಸ ಬರೀ ರಾಷ್ಟ್ರದಲ್ಲಿ ಮಾತ್ರ ಅಲ್ಲ, ಅಂತರ್‌ರಾಷ್ಟ್ರದ ಮಟ್ಟದಲ್ಲಿ ವ್ಯಕ್ತಪಡಿಸುತ್ತಿವೆ. ನಾನಿದ್ದೇನೆ ಅಂತ ಅಲ್ಲ. ರಾಜ್ಯದ ಸಂಸ್ಕೃತಿ, ಈ ರಾಜ್ಯದ ಔದ್ಯೋಗಿಕ ಬೆಳವಣಿಗೆ ಹಿನ್ನೆಲೆಯಲ್ಲಿ ಒಂದೇ ಒಂದು ಅಡ್ಡಿ ಆಗುತ್ತಿರುವುದು ಎಲೆಕ್ಟ್ರಿಸಿಟಿ. ಅದು ಬಿಟ್ಟರೆ the relationship between the labour and the management, i.e., industrial relationship. ಅಂತ ಏನು ಕರೆಯುತ್ತೇವೆ ಅದು. When compared to any other State in India, they prefer Karnataka. ನಾನು ಬ್ರಿಟಿಷ್ ಪ್ರಧಾನ ಮಂತ್ರಿಗಳು ಬಂದಾಗ ಮಾತನಾಡಿದ್ದೆ, ಸಿಂಗಾಪೂರದ ಪ್ರಧಾನ ಮಂತ್ರಿಗಳು ಬಂದಾಗ ಕೂಡ ಮಾತನಾಡಿದ್ದೆ, ಮಲೇಶಿಯನ್ ಪ್ರಧಾನ ಮಂತ್ರಿಗಳು ಬಂದಾಗ ಕೂಡ ಮಾತನಾಡಿದ್ದೆ, ಕಳೆದ ಸಲ ಮಲೇಶಿಯನ್‌ಲೋಕೋಪಯೋಗಿ ಇಲಾಖಾ ಸಚಿವರು ಬಂದು ಬೆಂಗಳೂರು ಸಿಟಿ ಬಗ್ಗೆ, ಮೆಗಾಸಿಟಿ ಪ್ರಾಜೆಕ್ಟ್ ಮತ್ತು ಬೆಂಗಳೂರು ಮೈಸೂರು ಹೈವೇ, ಹಾಗೆಯೇ ಬೆಂಗಳೂರು ಸಿಟಿನಲ್ಲಿ ಫ್ಲೈ ಓವರ್ಸ್ ರಿಂಗ್ ರೋಡ್ ಅರೌಂಡ್ ಬೆಂಗಳೂರು ಸಿಟಿ ಅದರ ಬಗ್ಗೆ ಬರೀ ಮಾತುಕತೆ ಅಲ್ಲ, ಕೆಲಸ ಪ್ರಾರಂಭ ಮಾಡಿದ್ದೇವೆ, ಮೊನ್ನೆ ನಾನು ಸ್ವತಃ ಹೋಗಿ ಇನಾಗರೇಟ್ ಮಾಡಿ ಅದರ ಕೆಲಸ ಪ್ರಾರಂಭ ಮಾಡಿ ಬಂದಿದ್ದೇನೆ. ಇಂದು ಮಲೇಶಿಯನ್ಸ್ ನಮ್ಮ ಪಾರ್ಟ್‌ನರ್ಸ್ ಆಗುವುದಕ್ಕೆ ಮುಂದೆ ಬರಲು ಉತ್ಸುಕರಾಗಿದ್ದಾರೆ. ಏಕೆ ಇವರು ಕರ್ನಾಟಕದ ಬೆಂಗಳೂರಿನ ಬಗ್ಗೆ ಆಸಕ್ತಿ ವಹಿಸುತ್ತಾರೆಂದರೆ, ಮೊದಲನೆಯದಾಗಿ ನಮ್ಮಲ್ಲಿ ಸ್ಕಿಲ್ಡ್ ಲೇಬರ್ಸ್ ಹೆಚ್ಚಿದ್ದಾರೆ. ಈಗಾಗಲೇ ಸಾಫ್ಟ್‌ವೇರ್ ಇಂಡಸ್ಟ್ರಿ, Bangalore is becoming globally important. Almost all multi-nationals those who are advanced in this technology, either Japan or Germany, all of them are settled now in Bangalore. Singapore Technology Park, ಒಂದು ವರ್ಷದಲ್ಲೇ ಇವೊತ್ತು ಅದ್ಭುತವಾಗಿ ಕೆಲಸ ಮಾಡಿ ಕಟ್ಟಿದ್ದಾರೆ. ಈ ಜೂನ್‌ನಿಂದ ಅವರ ಕೆಲಸ ಪ್ರಾರಂಭವಾಗುತ್ತದೆ. ಆ ಟೆಕ್ನಾಲಜಿಯಲ್ಲಿ ಕೆಲಸ ಪ್ರಾರಂಭ ಮಾಡಿದರೆ, ಆಗ ಪ್ರಪಂಚದ ಎಲ್ಲಾ ಸಂಸ್ಥೆಗಳು ಇಲ್ಲಿ ಅಪರೇಟ್ ಮಾಡುತ್ತವೆ. ಅದಕ್ಕಾಗಿ ಆ ಒಂದು ಅವಶ್ಯಕತೆಯ ವಾತಾವರಣಕ್ಕೆ ಈಗ ಏನು ಬೆಳವಣಿಗೆಗೆ ಬಂದಿದೆ, ಅದಕ್ಕೆ ತಕ್ಕ ಹಾಗೆ ನಾವು ರೆಸ್ಪಾಂಡ್ ಮಾಡಬೇಕಾಗುತ್ತದೆ. ಎಲ್ಲಾ ರೀತಿಯಿಂದಲೂ ಕೋ-ಅಪರೇಟ್ ಮಾಡಬೇಕಾಗುತ್ತದೆ. ಹೀಗೆಂದ ಮಾತ್ರಕ್ಕೆ ಅವರಿಗೆ ಬೇಕಾದ್ದೆಲ್ಲಾ ಕೊಟ್ಟುಬಿಡಬೇಕು ಎಂದೇನೂ ಅಲ್ಲ. ನಮ್ಮವರಿಗೆ ಮೊದಲು ಕೆಲಸ ಸಿಗಬೇಕು. ನಾನು ಆ ಟೆಕ್ನಾಲಜಿ ಪಾರ್ಕ್ ಓಪನಿಂಗ್ ವ್ಯಾಗೆ ಹೋದಾಗ ಏನು ಗೊತ್ತಾಯಿತು ಎಂದರೆ ಸುಮಾರು 14 ಸಾವಿರ ಜನ ಇಂಜಿನಿಯರ್ಸ್‌ಗಳು ಆ ಒಂದೇ ಯುನಿಟ್‌ಗೆ ಬೇಕಂತೆ, ಅದಕ್ಕೋಸ್ಕರ ನಾವು ಇಂದು ಸರ್ವಾಂಗೀಣ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಯಾವುದೋ ಒಂದು ಭಾಗದಲ್ಲಿ ಬಹಳ ಬೆಳೆದು, ಇನ್ನೊಂದು ಭಾಗದಲ್ಲಿ ಹಿಂದುಳಿಯುವ ರೀತಿ ಆಗಬಾರದು. ಅದೃಷ್ಟವಶಾತ್ ಕರ್ನಾಟಕದಲ್ಲಿ ಒಳ್ಳೆಯ ಪ್ರಕೃತಿ ಸಂಪತ್ತು ಇದೆ. ಒಳ್ಳೆಯ ಅರಣ್ಯ ಇದೆ, ಸಮುದ್ರ ಇದೆ. ಸ್ಕಿಲ್ಡ್ ವರ್ಕರ್ಸ್ ಇದ್ದಾರೆ, ಆದುದರಿಂದ ನಾವು ಇಂದ ಪ್ರೈವೇಟ್ ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್‌ಗೆ ಅವಕಾಶ ಮಾಡಿಕೊಡಬೇಕು. ಇಲ್ಲದೇ ಹೋದರೆ ನಾನು ಈಗಾಗಲೇ

ಮೊದಲೇ ಹೇಳಿದ ಹಾಗೆ ಇಂದು ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್ ಉದ್ಯಮಗಳು ಅವುಗಳ ಒಳಗಿರತಕ್ಕಂಥ ಆಂತರಿಕ ದೋಷದಿಂದ ಅವು ಕುಸಿಯುತ್ತಿವೆ. ಈಗ ನಮ್ಮ ಯುವಕರಿಗೆ ಕೆಲಸ ಬೇಕಾಗಿದೆ. ಆದ್ದರಿಂದ ಇವತ್ತು ಭಾರತದಲ್ಲಿ ಕರ್ನಾಟಕ ಒಂದು ಕೇಂದ್ರ ಬಿಂದುವಾಗಿ, ಅದಕ್ಕೆ ಬೆಂಗಳೂರನ್ನು ಇಂಥ ಬೆಳವಣಿಗೆಗೆ ಒಂದು ಯೋಗ್ಯವಾದಂಥ ಒಂದು ಕ್ಯಾಪಿಟಲ್‌ನ್ನು ರಾಜಧಾನಿಯನ್ನಾಗಿ ಮಾಡುವುದಕ್ಕೆ ಇಂದು ಫ್ರೆಂಚ್ ಸರ್ಕಾರದವರು ಸಾಲವನ್ನು ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಮಲೇಶಿಯಾದವರು ಇಂದು ಇಲ್ಲಿ ಪಾರ್ಟಿಸಿಪೇಟ್ ಮಾಡುವುದಕ್ಕೆ ಉತ್ಸುಕರಾಗಿದ್ದಾರೆ. ಆದ್ದರಿಂದ ನಾನು ಈ ಸದನಕ್ಕೆ ತಿಳಿಯಬಯಸುವುದೇನೆಂದರೆ ಇಂಡಸ್ಟ್ರಿಯಲ್ ಗ್ರೋತ್, ಅದು ಹೊಸಪೇಟೆ, ಬಳ್ಳಾರಿ ಸೆಂಟರ್ ಇರಬಹುದು, ಮಂಗಳೂರಿನಲ್ಲಿರಬಹುದು. ಮಂಗಳೂರಿನಲ್ಲಿ ಇಂದು ಬಹಳ ದೊಡ್ಡದಾಗಿ ಇನ್‌ವೆಸ್ಟ್‌ಮೆಂಟ್ ಬರುತ್ತದೆ. ಆದರೆ ಅಲ್ಲಿ ಪ್ರತಿಯೊಂದಕ್ಕೂ ಪರಿಸರವಾದಿಗಳು ಇದನ್ನು ಹಾಕಬೇಡಿ, ಅದನ್ನು ಹಾಕಬೇಡಿ ಎಂದು ವಿರೋಧಿಸುತ್ತಾರೆ. ಆಗಲಿ, ನಾನು ಇದರ ಬಗ್ಗೆ ಹಲವಾರು ಸಾರಿ ಹಿಂದೆ ಮಾತನಾಡುತ್ತಾ ಹೇಳಿದ್ದೇನೆ, ಮನುಷ್ಯನ ಜೀವಕ್ಕೆ ಅಥವಾ ಯಾವುದೇ ಜೀವಿಗಳಿಗೆ ಹಾನಿಕರವಾದ ಯಾವುದೇ ಅಂಶ ಹೊರಗೆ ಬಂದರೆ, ಅದು ಹೊಗೆ ಇರಬಹುದು, ನೀರಿರಬಹುದು ಮತ್ತೊಂದು ಇರಬಹುದು, ಇದರಿಂದ ಪ್ರಾಣಿಗಳಿಗೆ ಮತ್ತು ಮನುಷ್ಯನ ಜೀವಕ್ಕೆ ಅಪಾಯವಿದೆ ಎನ್ನುವುದಾದರೆ ಬೇಡ ಎಂದಿದ್ದೇನೆ. ಏಕೆಂದರೆ ಇಂದು ನಾವು ಜನರನ್ನು ಕೊಂದು ಇಂಡಸ್ಟ್ರಿ ಮಾಡಬೇಕಾದ ಅವಶ್ಯಕತೆಯಿಲ್ಲ. ಆದರೆ ಪ್ರಪಂಚದ ಬೇರೆ ರಾಷ್ಟ್ರಗಳಲ್ಲಿ ಇರತಕ್ಕಂಥ ಸ್ಟ್ಯಾಂಡರ್ಡ್ ಏನಿದೆ, ಪೊಲ್ಯೂಶನ್ ಸ್ಟ್ಯಾಂಡರ್ಡ್ ಏನಿದೆ, ಮೇನ್‌ಟೆನೆನ್ಸ್ ಆಫ್ ಎನ್‌ವೈರ್ನಮೆಂಟ್ ಏನಿದೆ, ಅವುಗಳಿಗೆ ತಕ್ಕಂತೆ ಇವರು ತಂತ್ರಜ್ಞತೆಯನ್ನು ಮೀರಿ ಆ ಡ್ಯಾಮೇಜ್‌ಗಳನ್ನು ಮಿನಿಮೈಸ್ ಮಾಡಿದರೆ, ನಾವು ಸುಮ್ಮನೇ ವಿನಾಕಾರಣ ಅಡ್ಡಿ ಮಾಡುವುದು ಬೇಡ. ರಾಮಕೃಷ್ಣರವರೇ ಕಾರವಾರದಲ್ಲಿ ಆಟೋಮಿಕ್ ಪ್ಲಾಂಟ್ ಬೇಡ ಎಂದು ಹೇಳುತ್ತಾರೆ. ಎಷ್ಟು ಅವೈಜ್ಞಾನಿಕ ಇವರದು ಎಂದರೆ, ರಾಜಾಸ್ಥಾನದಲ್ಲಿರುವ ಆಟೋಮಿಕ್ ಪ್ಲಾಂಟ್ ಸಿಡಿದರೂ ಕೂಡ ನಾವು ಸಾಯುತ್ತೇವೆ, ಚೆರ್ನೋಬೈಲ್‌ನಲ್ಲಿ ಒಂದು ಆಟೋಮಿಕ್ ಪ್ಲಾಂಟ್ ಡಿಸಾಸ್ಟರ್‌ನ್ನೇ ನಾವು ತಲೆಯಲ್ಲಿ ಇಟ್ಟುಕೊಂಡು, ಈ ಆಟೋಮಿಕ್ ಪ್ಲಾಂಟ್‌ಬೇಡ, ಅರಣ್ಯವನ್ನು ಮುಳುಗಿಸುವುದು ಬೇಡ, ಕೈಗಾರಿಕೆಗಳು ಬರುವುದು ಬೇಡ ಅಂದರೆ ಹೇಗೆ ಬದುಕುತ್ತೀರಿ? ಬರೇ ಗಡ್ಡೆ ಗೆಣಸು ತಿನ್ನಬೇಕು, ಕೊನೆಗೆ ಅವು ಸಿಗುವುದಿಲ್ಲ, ಹೊತ್ತು ಮುಳುಗುವುದಕ್ಕೆ ಮುಂಚೆ ಮಲಗಬೇಕು ಮತ್ತು ಹೊತ್ತು ಹುಟ್ಟಿದ ಮೇಲೆ ಏಳಬೇಕು. ಬೇರೆ ಏನೂ ಉರಿಸುವುದಕ್ಕೆ ಆಗುವುದಿಲ್ಲ, ನೀವು ಏನನ್ನೂ ಉರಿಸುವುದಕ್ಕೆ ಆಗುವುದಿಲ್ಲ. ಎಣ್ಣೆಯನ್ನೂ ಉರಿಸುವುದಕ್ಕಾಗುವುದಿಲ್ಲ. ನಮ್ಮ ಪರಿಸರವಾದಿಗಳ ಕಳಕಳಿ ನನಗೆ ಅರ್ಥವಾಗುತ್ತದೆ, ಅವರೇನೂ ನಮ್ಮ ವಿರೋಧಿಗಳಲ್ಲ. ಕಳಕಳಿ ಅರ್ಥವಾಗುತ್ತದೆ. ಆದರೆ ಇದನ್ನೇ ದೊಡ್ಡದು ಮಾಡಬಾರದು. ಏಕೆಂದರೆ ನಮಗೆ ವಿದ್ಯುತ್ ಬೇಕೆಂದರೆ ನಾವು ಕೋಲನ್ನು ಬರ್ನ್ ಮಾಡಬೇಕು, ಇಲ್ಲದಿದ್ದರೆ ನೀರನ್ನು ತಡೆಹಿಡಿಯಬೇಕು, ಇಲ್ಲದಿದ್ದರೆ ಆಟೋಮಿಕ್ ಐಸೊಟೋಪ್ಸ್ ಯೂಸ್ ಮಾಡಬೇಕು, ಗಾಳಿ ಉಪಯೋಗಿಸಬಹುದು. ಇದನ್ನು ಬಿಟ್ಟು ಬರೇ ಗಾಳಿಯಿಂದ, ಸೂರ್ಯನಿಂದ ವಿದ್ಯುತ್ ಉತ್ಪಾದನೆ ಮಾಡಬೇಕು ಎಂಬ ಅಭಿಪ್ರಾಯವೇನೋ ಒಳ್ಳೆಯದು. ನನಗೂ ಗೊತ್ತಿದೆ ಪ್ರಪಂಚದಲ್ಲಿಯೇ ಅತಿ

ದೊಡ್ಡದಾದ ವಿಂಡ್ ಫಾರ್ಮ್ ಕಾಲಿಫೋರ್ನಿಯಾದಲ್ಲಿದೆ ಅಲ್ಲಿ 400 ಮೆ.ವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತದೆ. ಅದನ್ನು ಬಿಟ್ಟರೆ ಬೇರೆಯವೆಲ್ಲಾ 1 ಅಥವಾ 2 ಮೆ. ವ್ಯಾಟ್‌ದು. ಧಾರವಾಡದ ಕಪ್ಪಗುಡ್ಡದ ಹತ್ತಿರ ಮಾಡಿರುವುದೇನಿದೆ ಅದರಿಂದ 2 ಮೆ.ವ್ಯಾಟ್ ವಿದ್ಯುತ್ ಬರತಕ್ಕಂಥದ್ದು. ಆದುದರಿಂದ ನಮ್ಮ ಔದ್ಯೋಗಿಕ ಬಳಕೆಗೆ ಬೇಕಾದಂಥ ಇಂಧನವನ್ನು, ವಿದ್ಯುಚ್ಛಕ್ತಿಯನ್ನು ಅಸಂಪ್ರದಾಯಕ ಅಂದರೆ ನಾನ್ ಕನ್‌ವೆನ್‌ಶನಲ್ ಎನರ್ಜಿ ಮೂಲಕ ಮಾಡುವುದಕ್ಕೆ ಸಾಧ್ಯವಿದ್ದರೆ, ಇವೆಲ್ಲಾ ಕೈ ಬಿಟ್ಟುಬಿಡೋಣ. ಇವ್ಯಾವು ಥರ್ಮಲ್ ಬೇಡ ಹೈಡಲ್ ಬೇಡ ಎಂದರೆ ಆ ರೀತಿಯಲ್ಲಿ ಮಾಡುವುದಕ್ಕೆ ನಮಗೆ ಸಾಧ್ಯವಿಲ್ಲ. ಫ್ರಾನ್ಸ್‌ನಲ್ಲಿ ವಿದ್ಯುತ್ ಶೇಕಡ 60 ಭಾಗ ಅಟೋಮಿಕ್‌ನಿಂದ ಆಗುತ್ತಿರುವುದು. ಅಮೆರಿಕಾದಲ್ಲಿ ಈಗ ಕಡಿಮೆ ಮಾಡುತ್ತ ಬಂದು ಶೇಕಡ 40 ಭಾಗ ಇದರಿಂದ ವಿದ್ಯುತ್ ಉತ್ಪಾದನೆ ಮಾಡುತ್ತಿದ್ದಾರೆ. ಕೆನಡಾದಲ್ಲಿ ಎಲ್ಲಾ ಹೈಡಲ್‌ನಿಂದಲೇ ಉತ್ಪಾದನೆ ಮಾಡುತ್ತಾರೆ. ಅಲ್ಲಿ ಒಂದೇ ಒಂದು ನದಿಗೆ 15 ಸಾವಿರ ಮೆ.ವ್ಯಾಟ್ ವಿದ್ಯುತ್ ಜನರೇಟ್ ಮಾಡುತ್ತಾರೆ. ಕೆನಡಾದ ಸೌಭಾಗ್ಯ ನಮಗಿಲ್ಲ. ಆದರೆ ದಕ್ಷಿಣ ಆಫ್ರಿಕಾದಲ್ಲಿ ರಾತ್ರಿಯ ಹೊತ್ತು ದೀಪಕ್ಕೆ ಗತಿಯಿಲ್ಲ. ವಿಯಟ್ನಾಂನಲ್ಲಿ ಸೋಲಾರ್ ಎನರ್ಜಿಯಿಂದ ಹೆಚ್ಚುಮನೆಗಳಿಗೆ ದೀಪದ ವ್ಯವಸ್ಥೆಯನ್ನು ಮಾಡಿದ್ದಾರಂತೆ, ನಾನು ಅದನ್ನು ಕೇಳಿದ್ದೇನೆ. ಆದರೆ ನಾನು ಹೋಗಿ ನೋಡಿಲ್ಲ. ಮನೆಗಳಿಗೆ ಆ ವ್ಯವಸ್ಥೆ ಮಾಡಬಹುದು, ಸೋಲಾರ್ ಎನರ್ಜಿಯಿಂದ ದೀಪ ಹಚ್ಚುವ ವ್ಯವಸ್ಥೆಯನ್ನು ನನ್ನ ಮನೆಯಲ್ಲೂ ಮಾಡಿದ್ದೇನೆ. ನೀರು ಕಾಯಿಸುವ ವ್ಯವಸ್ಥೆಯನ್ನೂ ಅಳವಡಿಸಿಕೊಂಡಿದ್ದೇನೆ. ಆದರೆ ಈ ಸೋಲಾರ್ ಎನರ್ಜಿಯಿಂದ ಇಂಡಸ್ಟ್ರಿಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಹೆಚ್ಚಿನ ಶಕ್ತಿಯ ವಿದ್ಯುತ್ ಬೇಕಾದರೆ ಈ ಮಾರ್ಗ ಅನಿವಾರ್ಯ. ಅದರ ಮೇಲೆ ಯಾರಾದರೂ ಮಹಾನ್ ಜ್ಞಾನಿಗಳು ಇದು ಯಾವುದೂ ಬೇಡಪ್ಪಾ, ನಾನೇ ಯಾವುದಾದರೂ ಜಾದೂ ಮಾಡಿ ತೋರಿಸುತ್ತೇನೆ ಎಂದು ಹೇಳಿದರೆ ಮಾಡಲಿ, ನಾನು ಬೇಡ ಎನ್ನುವುದಿಲ್ಲ. ನಾವೇನೂ ಹಠ ಹಿಡಿದಿಲ್ಲ. ಇಲ್ಲಿ ಒಂದು ಕಡೆ ಉತ್ಪಾದನೆಯಾಗಲಿಲ್ಲ, ಟೆಕ್ಸ್‌ಟೈಲ್ಸ್ ಇಂದು ಕುಸಿಯುತ್ತಿದೆ. ನಮ್ಮ ದೇಶದಲ್ಲಿ ಹೆಚ್ಚು ಎಂಪ್ಲಾಯ್‌ಮೆಂಟ್ ಅಪರ್‌ಚುನಿಟೀಸ್ ಇದ್ದದ್ದು ಈ ಟೆಕ್ಸ್‌ಟೈಲ್ ಇಂಡಸ್ಟ್ರೀಸ್‌ನಲ್ಲಿ. ಆದರೆ ಇಂದು ಟೆಕ್ಸ್‌ಟೈಲ್‌ಗಿಂತ ಆಟೋಮೊಬೈಲ್ ಸಾಫ್ಟ್‌ವೇರ್ ಇಂಡಸ್ಟ್ರೀಸ್‌ಗಳು ಸ್ಪರ್ಧಾತ್ಮಕವಾಗಿವೆ. ಅದಕ್ಕೋಸ್ಕರ ನಾವು ಇಂದು ಬೆಳೆಯುತ್ತಿರತಕ್ಕಂಥ ಪ್ರಪಂಚದ ವೇಗದ ಮಟ್ಟಕ್ಕೆ ನಾವು ಇಟ್ಟುಕೊಳ್ಳಬೇಕು. ಭಾರತದಲ್ಲಿ ಬೇರೆ ರಾಜ್ಯಗಳೊಂದಿಗೆ ಏನು ಕಾಂಪಿಟೇಶನ್ ಇದೆ ಅದನ್ನು ನಾವು ಇಂದು ಕಂಟೇನ್ ಮಾಡಿಕೊಳ್ಳಬೇಕು. ಅದೃಷ್ಟವಶಾತ್ ಮಾನ್ಯ ದೇವೇಗೌಡರು ನಮ್ಮ ದೇಶದ ಪ್ರಧಾನಿ ಮಂತ್ರಿಗಳಾದ ಮೇಲೆ ನಮಗೆ ಹಲವಾರು ರೀತಿಯಲ್ಲಿ ವಿಶೇಷವಾಗಿ ನಮಗೆ ಔಟ್ ಆಫ್ ದಿ ವೇನಲ್ಲಿ ಏನೂ ಕೊಟ್ಟಿಲ್ಲ. ನಮ್ಮ ರಾಜ್ಯಕ್ಕೆ ಏನು ಯೋಜನೆಗಳು, ಸಹಾಯಗಳು ಕೇಂದ್ರದಿಂದ ಸಿಗಬೇಕಾಗಿತ್ತೋ ಅದು ಸಿಕ್ಕಿರಲಿಲ್ಲ. ಅದನ್ನು ಇವೊತ್ತು ಅವರು ಒದಗಿಸಿಕೊಟ್ಟಿದ್ದಾರೆ. ಆದುದರಿಂದ ನಾವು ಈ ಸಂದರ್ಭವನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಬೇಕು. ನಾನು ವಿರೋಧ ಪಕ್ಷದ ನಾಯಕರಿಗೆ, ವೈ. ರಾಮಕೃಷ್ಣರವರಿಗೆ ಮತ್ತು ಯಡಿಯೂರಪ್ಪನವರಿಗೆ ಹೇಳುವುದಿಷ್ಟೇ. ಸರ್ಕಾರವನ್ನು ನೀವು ಬರೀ ಕೆಂಗಣ್ಣಿನಿಂದಲೇ ನೋಡಿದರೆ ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಹೆಚ್. ಎನ್. ನಂಜೇಗೌಡ : 1996ರ ಬಜೆಟ್‌ನಲ್ಲಿ ನೀವು ಇಟ್ಟಂಥ ಇಂಡಸ್ಟ್ರಿಯಲ್ ಸೆಕ್ಟರ್‌ನಲ್ಲಿ ಇಂಡಸ್ಟ್ರಿಯಲ್ ಪಾಲಿಸಿ ಪೇಪರ್‌ನಲ್ಲಿ ಏನು ಹೇಳಲಾಗಿದೆಯೆಂದರೆ ಇದನ್ನು ನಾವು

ದಯವಿಟ್ಟು ಕಿವಿಗೆ ಹಾಕಿಕೊಳ್ಳಬೇಕು.`` Investment in the industrial sector from August 1993 till January 1996". ಈ ಡೇಟ್ ಆದಮೇಲೆ ಇದನ್ನು ಇಟ್ಟಿದ್ದು, ನೀವು ಕೊಟ್ಟಿರುವುದು 39951 ಕೋಟಿ ರೂ.ಗಳು. ಇದು ಆಕ್ಚುಯಲ್ ಇನ್‌ವೆಸ್ಟ್‌ಮೆಂಟ್ ಎಂದು ನಾನು ಅವತ್ತು ತಿಳಿದುಕೊಂಡೆ. ಅದು to be invested ಎಂದು ನೀವು ಹಾಕಿಲ್ಲವಲ್ಲ. ಅದಕ್ಕೆ ನಾನು ಬ್ರೇಕಪ್ ಕೇಳಿದ್ದು; ಎಲ್ಲಿ ಕಾಣುತ್ತಿಲ್ಲವಲ್ಲ ನಮಗೆ ಎಂದು. ಇವತ್ತು ಹೇಳುತ್ತಿದ್ದಾರೆ, ಆರುನೂರು ಚಿಲ್ಲರ ಕೋಟಿ ರೂಪಾಯಿ ಆಕ್ಚುಯಲ್ ಇನ್‌ವೆಸ್ಟ್‌ಮೆಂಟಾಗಿದೆ, ಉಳಿದಿದ್ದು ಆಗಿಲ್ಲ. ಇನ್ನು ಅದು ಅಗ್ರಿಮೆಂಟ್, ಅದು ಇದು ಎಂದು ಬೇರೆಬೇರೆ ಹಂತದಲ್ಲಿವೆ. ಇದರಲ್ಲೂ ಹಾಗೆ ಹಾಕಬೇಕಾಗಿತ್ತು ಇಂಡಸ್ಟ್ರೀಯಲ್ ಪಾಲಿಸಿ ಪೇಪರ್‌ನಲ್ಲಿ ಎಂದು ನಾನು ಹೇಳಿದ್ದು.

ಶ್ರೀ ಜೆ. ಹೆಚ್. ಪಟೇಲ್ : ಕೆಲವು ಸಾರಿ ನಾವು ಅಡ್ವೈರ್‌ಟೈಸ್‌ಮೆಂಟ್ ಮಾಡಿಕೊಳ್ಳಬೇಕಾದರೆ ಜಾಸ್ತಿ ಹಾಕಿ ಹೇಳಿಬಿಡುತ್ತೇನೆ. ಆದರೆ ಇದು ಆಕ್ಚುಯಲ್ ರಿಪೋರ್ಟ್. ಆದುದರಿಂದ ನಮ್ಮ ಔದ್ಯೋಗಿಕ ನೀತಿ, ನಮ್ಮಲ್ಲಿರತಕ್ಕಂಥ ವಿದ್ಯುತ್‌ಅವಲಂಬನೆ ಇವುಗಳನ್ನು ಸರಿದೂಗಿಸಿಕೊಳ್ಳುವುದಕ್ಕೆ ಏನು ಮಾಡಬೇಕು. ಇನ್ನೊಂದು ವಿಚಾರವೇನೆಂದರೆ ಇಂಡಸ್ಟ್ರೀಸ್‌ಗಳ ಬಗ್ಗೆ ಆಲೋಚನೆ ಮಾಡುವಾಗ ಪ್ರವಾಸೋದ್ಯಮ ಒಂದು ದೊಡ್ಡ ಇಂಡಸ್ಟ್ರೀಸ್ ಆಗುತ್ತದೆ. ಪ್ರಪಂಚದಲ್ಲೇ ಅತ್ಯಂತ ಕಡಿಮೆ ಬಂಡವಾಳದಿಂದ ಹೆಚ್ಚು ಜನರಿಗೆ ಕೆಲಸ ಕೊಡುವುದು ಅದು ಒಂದೇ. ಜಗತ್ತಿಗೆ ಹೋಲಿಕೆ ಮಾಡಿದರೆ, ನಮ್ಮ ಭಾರತದಲ್ಲಿ ಪ್ರವಾಸೋದ್ಯಮಕ್ಕೆ ಬಂಡವಾಳ 0.01 ಪರ್ಸೆಂಟ್ ಇಲ್ಲ. ಸಿಂಗಾಪುರದ್ದು ತಾವು ನೋಡಿದರೆ ಪ್ರತಿವರ್ಷ ಏಳು ಮಿಲಿಯನ್ ಟೂರಿಸ್ಟ್ ವಿಸಿಟ್ ಮಾಡುತ್ತಾರೆ. The total population of Singalore is 3 Million. The total revenue they get is something fantastic. Singalore with a population of 3 Million consumes Electricity of 11,000 M.Wts.. of Electricity ಅಗತ್ಯ ಎಂದರೆ ಏನು? ಕುಳಿತುಕೊಂಡು ಮಾತನಾಡಿದರೆ ಆಗುತ್ತದೆಯೇ? ಇವತ್ತು ಐದು ಕೋಟಿ ಜನ ಕರ್ನಾಟಕದಲ್ಲಿದ್ದು, ನಾವು ಇನ್ನು 3,200 ಮೆಗವ್ಯಾಟ್‌ಗೆ ಹೋಗಿಲ್ಲ. ಈಗ ನಾವೇನಾದರೂ ವೇಗವಾಗಿ ಹೋಗಬೇಕು, ಮಾಡಬೇಕು, ಕ್ಲಿಯರ್ ಮಾಡಬೇಕು ಎಂದರೆ ನಮ್ಮ ದೇಶದ ಬ್ಯುರೋಕ್ರಾಟ್ಸ್‌ಇದ್ದಾರಲ್ಲ ಅವರಂತಹ ಅಬ್ಸ್‌ಟ್ರಕ್ಷನಿಸ್ಟ್ ಏನು ಮಾಡಿದರೂ ಮುಂದುವರೆಯುವುದಕ್ಕೆ ಬಿಡುವುದೇ ಇಲ್ಲ. ಯಾರೂ ಹೆಚ್ಚು ಕಾಲು ಎಳೆಯುತ್ತಾರೋ ಅವನು ಬಹಳ ಬುದ್ಧಿವಂತ ಎಂದು. ಎಷ್ಟು ಡಿಲೇ ಮಾಡುತ್ತಾನೋ ಅಷ್ಟು ಬುದ್ಧಿವಂತ ಎಂದು. ನಾನು ಇದನ್ನು ಬಹಳ ಮನನೊಂದು ಹೇಳುತ್ತೇನೆ. ನಮ್ಮ ಆಫೀಸರ್ಸ್ ಇಂಟೆಗ್ರಿಟಿ ಬಗ್ಗೆ ಪ್ರಶ್ನೆ ಮಾಡುವುದಿಲ್ಲ. ಒಂದು ತರಹ ಸ್ಯಾಡಿಸಂ ಅವರದು. ಯಾವುದೋ ಒಂದು ಪ್ರಾಜೆಕ್ಟ್ ಆಗುವುದನ್ನು ತಡೆದುಬಿಡುತ್ತೀನಲ್ಲ ಎಂದು ಖುಷಿ. ಹೆಲ್ಪ್ ಮಾಡಿದೆನಲ್ಲ ಎನ್ನುವ ಹಾಗೆ ಇಲ್ಲ. ತಡೆದುಬಿಟ್ಟೆನಲ್ಲ ಎಂದುಕೊಳ್ಳುತ್ತಾರೆ. ಈಗ ಇಂಡಿಯನ್ ಬ್ಯುರೋಕ್ರಸಿ, ಡೆವಲಪ್‌ಮೆಂಟ್ ಆಫ್ ಇಂಡಿಯನ್ ಇಂಡಸ್ಟ್ರೀಸ್, ಮತ್ತು ಇನ್‌ಫ್ರಾಸ್ಟ್ರಕ್ಚರ್ ಪ್ರೆಸೆಂಟ್ ಪೊಜಿಷನ್, ಇದನ್ನೆಲ್ಲಾ ಒಟ್ಟಾಗಿ ತೆಗೆದುಕೊಂಡು.... ಇವತ್ತು ಏಕದಂ ಸ್ವರ್ಗಕ್ಕೆ ಹೋಗುತ್ತೇವೆ ಎಂದು ಅಲ್ಲ. ಒಂದು ಆಗಲೇ ಹೇಳಿದಹಾಗೆ ಗಾಂಧಿಸಂಗೆ ನಾವು ವಾಪಸ್ಸು ಹೋಗುವ ಹಾಗೆ ಇಲ್ಲ. ಸಾಧ್ಯವೇ ಇಲ್ಲ. We cannot think of Gandhian economy ಈಗ ಮುಂದೆ ಹೋಗಬೇಕಲ್ಲ,

ಮುಂದೆ ಹೋಗುವಾಗ ನಾವು ಅವರಷ್ಟು ವೇಗದಲ್ಲಿ ಹೋಗುವುದಕ್ಕೆ ಆಗದೇ ಇದ್ದರೂ ನಾವು ನಮ್ಮ ಸುರಕ್ಷತೆಯನ್ನು ನೋಡಿಕೊಳ್ಳುವಷ್ಟು ವೇಗದಲ್ಲಿ ಹೋಗಬೇಕು. ತೀರಾ ವೇಗವಾಗಿ ಹೋದರ ಅಪಘಾತ ಆದರೂ ಆಗಬಹುದು. ಆದುದರಿಂದ ಈ ವಿಷಯದಲ್ಲಿ we must give more attention to the Tourism which we are going to do. ಕೇಂದ್ರ ಸರ್ಕಾರಕ್ಕೂ ಮನವಿ ಮಾಡಿಕೊಂಡಿದ್ದೇನೆ. ಇಂದು ಅಂತರಾಷ್ಟ್ರೀಯ ಪ್ರವಾಸೋದ್ಯಮದ ಕೇಂದ್ರ ಜರ್ಮನಿ. ಜರ್ಮನಿಯ ಒಂದು ಸಂಸ್ಥೆ ಏನಿದೆ ಅವರನ್ನು ಕೇಳಿದರೆ ಪ್ರಪಂಚದಲ್ಲಿ ಯಾವುದಿದೆ ಏನಿದೆ ನೇಚರ್, ಸ್ಕಲ್ಪಚರ್, ಆರ್ಕಿಟೆಕ್ಚರ್ ಇದೆಲ್ಲಾ ಲಿಸ್ಟರಿ ಇಟ್ಟುಕೊಂಡಿರುತ್ತಾರೆ. ಆದರೆ ನಮ್ಮ ಕರ್ನಾಟಕದ ಹೆಸರೇ ಇಲ್ಲ. ಇಂಡಿಯನ್ ಟೂರಿಸಂ ಎಂದರೆ ರಾಜಸ್ತಾನ, ಉದಯಪುರ, ಜೈಪುರ್ ಆಗ್ರಾ ಇದೆಲ್ಲಾ ಇಟ್ಟುಕೊಂಡಿದ್ದಾರೆ. 10,000 ಮೈಲಿಯಿಂದ ಬರುತ್ತಾರೆ, ಅವನು ಬಂದು ಬರೀ ಇಷ್ಟು ನೋಡಿಕೊಂಡು ಹೋಗುತ್ತಾನೆ. ಅವನಿಗೆ ಕರ್ನಾಟಕದಲ್ಲಿ 58 ಅಡಿ ಎತ್ತರದ ಒಂದು ವಿಗ್ರಹ ಇದೆ ಎನ್ನುವುದು ಬಹಳ ಜನರಿಗೆ ಗೊತ್ತಿಲ್ಲ. 900 ಅಡಿ ಆಳದ ಜಲಪಾತ ಇದೆ ಎನ್ನುವುದು ಗೊತ್ತಿಲ್ಲ, 1,300 ವರ್ಷಗಳ ಹಿಂದಿನ ಗುಹೆಗಳು ನಮ್ಮಲ್ಲಿ ಇದೆ ಎನ್ನುವುದು ನಮ್ಮಲ್ಲಿ ಇರುವಂತಹ ಪ್ರಾಚೀನ ಅರ್ವಾಚೀನ ಇರತಕ್ಕಂಥ ಪ್ರಕೃತಿ ಸಂಪತ್ತು, ನಮ್ಮಲ್ಲಿ ಇರತಕ್ಕಂಥ ಸಮುದ್ರದ ಸೌಂದರ್ಯ ಯಾವ ದೇಶಕ್ಕೂ ಕಡಿಮೆ ಇಲ್ಲ. ನಮ್ಮದು ಹೇಗೆ ಎಂದರೆ ಬಡವನ ಹೆಂಡತಿ ಸುಂದರಿಯಲ್ಲ. ಯಾರೂ ನಮ್ಮ ರಾಜ್ಯದ ಪ್ರವಾಸೋದ್ಯಮವನ್ನು ಪ್ರೊಜೆಕ್ಟ್ ಮಾಡಿಲ್ಲ. ವರ್ಷಕ್ಕೆ 2-3 ಕೋಟಿ ರೂಪಾಯಿ ಇಡೀ ಡಿಪಾರ್ಟ್‌ಮೆಂಟ್‌ಗೆ ಸಂಬಳ ಕೊಡುವುದಕ್ಕೆ ಆಗದೇ ಇರುವಷ್ಟು ದುಡ್ಡನ್ನು ಇದುವರೆಗೆ ಕೊಡುತ್ತಾ ಬಂದಿದ್ದೇವೆ. ಅದಕ್ಕೆ ಈ ವರ್ಷ ಜಾಸ್ತಿ ಮಾಡಿದ್ದೇವೆ. ಈಗ ಅದರ ಜೊತೆ ಆಕ್ಟಿವಿಟೀಸ್ ಜಾಸ್ತಿಯಾಗಿದೆ. ಟೂರಿಸಂ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನ ಬಬ್ಬ ಆಕ್ಟೀವ್ ಚೇರ್‌ಮನ್ ಆಗಿ ಆಲ್ ಓವರ್ ದಿ ಕಂಟ್ರಿ ಇಂಟರೆಸ್ಟ್ ತೆಗೆದುಕೊಂಡು ಮಾಡುತ್ತಿದ್ದಾರೆ. ಈಗ ಅದಕ್ಕೆ ಪ್ರಾರಂಭದಲ್ಲಿ ನಾವು ಖರ್ಚು ಮಾಡಬೇಕು. It will feed back. ಕೌಲಾಲಂಪುರದಿಂದ 250 ಕಿಲೋಮೀಟರ್ ದೂರದಲ್ಲಿ ಒಂದು ಐಲ್ಯಾಂಡ್ ಇದೆ. There is another island owned by a private man called Mr. Francis. He took me to the Island. He has built about 2.500 huts. He owns the island. He has a Golf coures, Tennis court and he is having three beautiful beaches which are very safe and you will be surprised that he has built about 100 houses on the sea based on Cement Pillers. If you sit in the room and if you open the shutters you can see the marine life in your room. Do you know how much he charges? 6,000 Rs. per day; Do you know how many people visit that place? Two and half Million. His entire corporate expenditure is met by that one island. We have beautiful islands around Mangalore. Karwar, but we have never made up our mind to put our efforts on these lands. ಮಾನ್ಯ ಉಪಾಧ್ಯಕ್ಷರೇ, ನಮಗೆ ಏನೋ ಒಂದು ರೀತಿಯ ಸಂಕುಚಿತತನ. ಹೂವು ಸರಿಯಾಗಿ ಅರಳಲೇ ಇಲ್ಲ. ಮುದುಡಿಕೊಳ್ಳುತ್ತಾ ಬಂತು. ಬಂದು ಈಗ ಈ ಸ್ಥಿತಿಗೆ ಬಂದಿದೆ. ಈಗಲಾದರೂ ನಾವು ಎಲ್ಲರೂ ಸೇರಿ ಇದನ್ನು ಟೂರಿಸಂ, ಇಂಡಸ್ಟ್ರೀಯಲ್‌ನ್ನು ಬೆಳೆಸಬೇಕು. ಇನ್ನು

ಬ್ಯುರೋಕ್ರಸಿ ಬಗ್ಗೆ ಹೆಚ್ಚು ಹೇಳುವುದು ಬೇಡ. ಮತ್ತೆ ಅವರು ಬಿಟ್ಟು ಆವರೆ ಕಷ್ಟ. ಅದರ ಮೇಲೆ ಅವರೇ ತಿಳಿದುಕೊಂಡರೆ ಒಳ್ಳೆಯದು. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದು ಅಂಶವನ್ನು ಸೇರಿಸಿದ್ದೆ. ಅದು ಸದನದ ವಿಚಾರ. ಹೊಸ ಜಿಲ್ಲೆಗಳ ನಿರ್ಮಾಣ. ಮಾನ್ಯ ವಾಟಾಳ್ ನಾಗರಾಜ್‌ರವರು ಬಹಳ ತೀವ್ರತೆಯಿಂದ ಮಾತನಾಡಿದರು. ಹೊಸ ಜಿಲ್ಲೆಗಳ ನಿರ್ಮಾಣದ ಅವಶ್ಯಕತೆ ಇದೆ. ಅದಕ್ಕೆ ಯಾವುದೇ ರಾಜಕೀಯ ಸೋಂಕು ಇಲ್ಲ. ಯಾವ್ಯಾವ ಜಿಲ್ಲೆಗಳನ್ನು ಹೊಸದಾಗಿ ನಿರ್ಮಾಣ ಮಾಡಬೇಕು ಎನ್ನುವ ಬಗ್ಗೆ ಮೂರು ಸಮಿತಿಗಳು ರಿಕಮೆಂಡ್ ಮಾಡಿವೆ. ಅವರು ಒಟ್ಟು ರಿಕಮೆಂಡ್ ಮಾಡಿರುವುದು ಒಂಭತ್ತು. ಅದರಲ್ಲಿ ಕಾಂಟ್ರವರ್ಸಿ ಇರುವುದು 2-3 ಇದೆ. ಯಾವುದೇ ಕಾಂಟ್ರವರ್ಸಿ ಇಲ್ಲದ ಇರುವುದು 5-6 ಇದೆ. ಅವುಗಳ ಬಗ್ಗೆ ಶೀಘ್ರವಾಗಿ ತೀರ್ಮಾನ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಕೆಲವು ಬಿಟ್ಟು ಕೆಲವು ಮಾಡುತ್ತೇವೆ ಎಂದು ಹೇಳಿಬಿಡಿ. ಒಂಭತ್ತನ್ನು ಮಾಡುವುದಕ್ಕೆ ಯೋಚನೆ ಮಾಡಿ. ಅವತ್ತು ನಾನು ಹೇಳಿದ್ದೇನೆ ಸ್ವಲ್ಪ ವ್ಯತ್ಯಾಸಗಳು ಆಗಬಹುದು. ಇದನ್ನು ತಾವು ಎದುರಿಸಬೇಕಾಗುತ್ತದೆ.

ಶ್ರೀ ಜೆ. ಹೆಚ್. ಪಟೇಲ್ : ಕಾಂಟ್ರವರ್ಸಿ ಇದ್ದರೆ ಒಪ್ಪಿಸಬಹುದು. ಅದೇನು ಕಾಂಟ್ರವರ್ಸಿ ಅಲ್ಲ. ಇದಕ್ಕೆ ಎಕ್ಸ್‌ಟ್ರಾ ಫೈನಾನ್ಸ್ ಬರ್ಡನ್ ಏನೂ ಹೇಳಿಲ್ಲ. ಎಕ್ಸ್‌ಟ್ರಾ ಸ್ಟಾಫ್ ಏನೂ ಮಾಡುತ್ತಿಲ್ಲ. ಇರುವಂತಹ ಅಸಿಸ್ಟೆಂಟ್ ಕಮಿಷನರ್ ಆಫೀಸ್ ಡೆಪ್ಯೂಟಿ ಕಮಿಷನರ್ ಆಫೀಸಾಗುತ್ತದೆ. ಡಿವೈಎಸ್‌ಪಿ, ಆಫೀಸ್ ಎಸ್‌ಪಿಯಾಗುತ್ತದೆ. ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟ್, ಡಿಸ್ಟ್ರಿಕ್ಟ್ ಕೋರ್ಟ್ ಆಗುತ್ತದೆ. ಅದಕ್ಕೆ ಹೇಳಿದ ಹಣ ಖರ್ಚು ಮಾಡದೇ ಆಡಳಿತವನ್ನು ಸುಧಾರಣೆ ಮಾಡುವುದಕ್ಕೆ ಸಾಮಾನ್ಯ ಜನರಿಗೆ ಅನುಕೂಲ ಹೆಚ್ಚು ಆಗಲಿ ಎನ್ನುವ ಕಾರಣಕ್ಕೆ ಹೊಸ ಜಿಲ್ಲೆಗಳನ್ನು ಮಾಡುವ ತೀರ್ಮಾನವಾಗಿದೆ. ಅದನ್ನು ಇಂಪ್ಲಿಮೆಂಟ್ ಮಾಡುತ್ತೇವೆ. ಇಷ್ಟು ಇಲಾಖೆಗಳ ಬಗ್ಗೆ ಆಯಿತು.

4.10 ಪಿ.ಎಂ.

ಈಗ ನಂಜೇಗೌಡರು, ಅವರು ಮೂಲಭೂತವಾಗಿ ಈ ದೇಶದ ವ್ಯವಸ್ಥೆಯ ಬಗ್ಗೆ, ಅದು ಯಾವುದೋ ಇದು ಅದು ಎಂದು ಅಲ್ಲ, ಸಿಸ್ಟಂ. ನಮ್ಮ ದೇಶದಲ್ಲಿ ಏನು ನಡೆಯುತ್ತಿದೆ, ಯಾರು ರಾಜ್ಯಾಂಗ ದತ್ತವಾಗಿ ಕೊಟ್ಟಿರತಕ್ಕಂಥ ಅಧಿಕಾರಗಳು ಇವೊತ್ತು ಏನಾಗುತ್ತಿದೆ. ಅವರು ನ್ಯಾಯಾಂಗದ ಬಗ್ಗೆ ಬರುವುದಕ್ಕಿಂತ ಮುಂಚೆ, ಕಾರ್ಯಾಂಗ ಮತ್ತು ಶಾಸಕಾಂಗ ಎಲ್ಲಾ ರಾಜಕೀಯ ಶಕ್ತಿಗಳ ಉಗಮಸ್ಥಾನ, ಹುಟ್ಟುವುದು ಇಲ್ಲಿ, power generates here: either here or Lok Sabha ಹಾಗೆ ನೋಡಿದರೆ, Soveignty of the people- If you take Subbarao Judgment, where does the soveriegnty lies? Is it in supreme Court? representatives of the people. ಈ ಸಾವರ್ನಿಟಿ ಬಗ್ಗೆ ಬಂದಾಗ ನಾವೂ ಸಾವರಿನ್, ಕೆಲಸ ಮಾಡುವ ದೃಷ್ಟಿಯಿಂದ ಅಷ್ಟು ಸಾವರಿನ ಅಲ್ಲ. ನಾವು ಸೆಕೆಂಡ್ ಗ್ರೇಡ್. ಅದಕ್ಕೆ ಎಲ್ಲಾ ಎಂ.ಎಲ್.ಎ.ಗಳು, ಎಲ್ಲಾ ಎಂ.ಪಿ.ಗಳು ಆ ಅಧಿಕಾರಿ ಯಾರು, ಅವನು ಏಕೆ ಬೇಕು, ಇವನು ಏಕೆ ಬೇಕು; ಅಮೆರಿಕಾ ಸಂವಿಧಾನದ ಬಗ್ಗೆ ಓದುತ್ತಾ ಇದ್ದೆ. ಅಮೆರಿಕನ್ ಕಾನ್‌ಸ್ಟಿಟ್ಯೂಷನ್‌ನಲ್ಲಿ President has no legislative powers. Legislature is totally

independent of President. President also is not responsible to answer in this When he chooses his Secretaries of State. he has no compunction of anything. ನಾವು ಇದು ಇವನ್ಯಾಕೆ ಮಾಡಿದ, ಅವನ ಸಂಬಂಧಿಕ ಏಕೆ ಮಾಡಿದ ಏನೂ ಇಲ್ಲ. ಅದು spoil system ಎಂದು ಏನು ಮಾಡಿದ್ದಾರ, he can appoint his brother as Advocate General or Attorney General. He can appoint anybody. ಇಲ್ಲೇನು ಆಗಿಬಿಟ್ಟದೆಯೆಂದರ, ಅವನು ಜಾತಿಯನ್ನು ಹಾಕಿದ ತಕ್ಷಣ ಹಾಕಿದ್ದಾನ ನೋಡು ಏನೋ ಮಾಡಿದ. ಇದು ನಾವು ಬ್ರಿಟಿಷ್ ಸಿಸ್ಟಂ ಮೇಲೆ ಡಿಪೆಂಡ್ ಆದೆವು. ಹೋಗಲಿ ಬ್ರಿಟಿಷ್ ಸಿಸ್ಟಂನಾದರೂ ಚೆನ್ನಾಗಿ ಮಾಡಿದ್ದೇವೆಯೇ? ಬ್ರಿಟಿಷರ ಸಿಸ್ಟಂನಲ್ಲಿ I can be a Professor to-day. I can be Minister tomorrow or I can also come back to some department. But, here once a political always a politician and he never retires. ಅವನು ಸತ್ತರೂ, ಸಾಯುವವರೆವಿಗೂ ಏನು ಮಾಡಿಯಾದರೂ ಭಂಡತನದಿಂದಾದರೂ ಇರಬೇಕು ಅವನು ಮರ್ಯಾದೆಯಿಂದ, is there any one example in this country where politician...... ಜೆ.ಪಿ. ಗಾಂಧಿ ಬಿಡಿ, ಅವರು ಪೊಲಿಟಿಷನ್ಸ್ ಅಲ್ಲ. ಅವರು ತಪಸ್ವಿಗಳು.

ಶ್ರೀ ಎನ್. ರಾಜಣ್ಣ : ಎಕ್ಸ್‌ಕ್ಯೂಸ್ ಮಿ ಸಾರ್, ಇದ್ದಾರೆ ಸಾರ್, ನಾವು ಈಗ ಪೊಲಿಟಿಕಲಿ ಬಂದಿದ್ದೇವೆ, ಇಲ್ಲ ಅಂದರೆ ಮತ್ತೆ ನಾವು ಕ್ಯಾಟಲ್‌ಷೆಡ್‌ಗೆ ಹೋಗುವುದಕ್ಕೆ ರೆಡಿಯಾಗಿದ್ದೇನೆ. ನಾವು ಜನ ಸೇವೆಯ ಮನೋಭಾವದಿಂದಲೇ ಬಂದಿರುವುದು.

ಶ್ರೀ ಜೆ. ಹೆಚ್. ಪಟೇಲರು : ದೇವರು ಒಳ್ಳೆಯದು ಮಾಡಲಿ, ಆದಷ್ಟು ಬೇಗ ವಾಪಸ್ಸು ಹೋಗಿ. ಗಾಂಧೀಜಿ ನೀವು ಮೌನ ಏಕೆ ಆಚರಿಸುತ್ತೀರಿ ಎಂದು ಕೇಳಿದಾಗ, `The quest for truth cannot be prosecuted in a case. Silence makes no sense where it is necessary to speak'. ಅಂದರೆ ಯಾವಾಗ ಮಾತನಾಡಬೇಕು, ಯಾವಾಗ ಮಾತನಾಡಬಾರದು ಎಂಬುದು ನನಗೆ ಗೊತ್ತಿದೆ ಎನ್ನುವುದನ್ನು ಅವರ ಮಾತಿನಲ್ಲಿ ಹೇಳಿದರು. ಆಮೇಲೆ ನನ್ನನ್ನು ಮಹಾತ್ಮ ಎಂದು ಕರೆಯುತ್ತಾರೆ, ನಾನು ಮಹಾತ್ಮನಲ್ಲ. ನಾನು ಧರ್ಮದಲ್ಲಿ ವಿಶ್ವಾಸ ಇಟ್ಟಿರತಕ್ಕಂಥ ಒಬ್ಬ ಸಾಮಾನ್ಯ ರಾಜಕಾರಣಿ. ಧರ್ಮದ ಅವರ ವ್ಯಾಖ್ಯಾನವೇ ಬೇರೆ, ಬೇರೆಯವರ ವ್ಯಾಖ್ಯಾನವೇ ಬೇರೆ. ಧರ್ಮದ ಬಗ್ಗೆ ವ್ಯಾಖ್ಯಾನ ಮಾಡುವಾಗ ಅಂಬೇಡ್ಕರ್‌ರವರು ಒಂದು ಹೇಳಿದ್ದಾರೆ `The religion is there to explain the orginin of the world. now it came existence. whereas Dhamman (Budha's Dhamman) is meant for restructuring the world'. ಇದು ಅಂಬೇಡ್ಕರ್‌ರವರ ಕಾನ್ಸೆಪ್ಟ್ ಆಫ್ ರಿಲಿಜನ್, ಗಾಂಧೀಜಿಯವರ ಕಾನ್ಸೆಪ್ಟ್ ಆಫ್ ರಿಲಿಜನ್ ಬೇರೆ. ಅದರೆ ನೆಹರೂ ರವರು ರಿಲಿಜನ್‌ಬಗ್ಗೆ, ನಾನು ಇರ್‌ರಿಲೀಜಿಯಸ್ ಎಂದೂ ಹೇಳಲಿಲ್ಲ, ಆಂಟಿ ರಿಲೀಜಿಯಸ್ ಎಂದೂ ಹೇಳಲಿಲ್ಲ ಅಥವಾ ಬಹಳ ಮೂಢನಂಬಿಕೆ ಇದೆ ಎಂದೂ ಹೇಳಲಿಲ್ಲ. ಅವರು ರ್‍ಯಾಷನ್‌ಲಿಸ್ಟ್ ಎನ್ನುತ್ತಾರೆ. ಕಾಂಗ್ರೆಸ್‌ನಲ್ಲಿ ಮೂಲಭೂತವಾಗಿ ಐಡಿಯಾಲಾಜಿಕಲ್ ಗ್ರೂಪೇ ಇದೆ. ಅವರು ಯಾವ

ಕಾರಣಕ್ಕೂ ಏನೇ ಆದರೂ, ಆಗ ಗಾಂಧೀಜಿ ಇದ್ದರು, ನೆಹರೂರವರನ್ನು, ಸುಭಾಷಚಂದ್ರ ಬೋಸ್‌ರನ್ನು, ಪಟೇಲ್‌ರನ್ನು, ಅಜಾದ್‌ರವರನ್ನು, ಏನು ಅವರು ಕೊಟ್ಟಿದ್ದು ತಗೆದುಕೊಂಡು ಹೋಗುವ ಶಕ್ತಿ ಇತ್ತು. ಆದರ ಇಲ್ಲಿ ಏನು ವೆಸ್ಟರ್ನ್ ಎಕಾನಮಿ, ವೆಸ್ಟರ್ನ್ ಫಿಲಾಸಫಿ ಇನ್‌ಫ್ಲೂಯೆನ್ಸ್ ಆದದ್ದು ನೆಹರೂರವರಿಂದ. ಮಾರ್ಕ್ಸಿಸ್ಟ್ ಇನ್‌ಫ್ಲೂಯೆನ್ಸ್, ಮಾರ್ಕ್ಸಿಸ್ಟ ಐಡಿಯಾಲಜಿಯನ್ನು ತಂದವರು ನೆಹರೂರವರು. Even though he believed in the democratic system of west, he also tried to bring Marxism which was resented by Patel and others. ಅದಕ್ಕೆ ಸುಭಾಷಚಂದ್ರ ಬೋಸರು ಬಿಡಿ. He rebelled totally and he went away. He did not believe in non-violence and all that. ಆದ್ದರಿಂದ ಕಾಂಗ್ರೆಸ್ ಪ್ರಾರಂಭದಿಂದ ಹೇಗೆ ಬಂತು ಎಂಬುದಕ್ಕೆ ನಾನು ಬಿರ್ಲಾ ಹೌಸ್‌ನಿಂದ ಒಂದು ಪಬ್ಲಿಕೇಷನ್ ಬರುತ್ತದೆ. ಆಗ ಘನಶ್ಯಾಂದಾಸ್ ಬಿರ್ಲಾ ಆಗಿನ ವೈಸರಾಯ್ ಹತ್ತಿರ ಮಾತನಾಡುವಾಗ, ಅವರೇ ಬಹಳದೊಡ್ಡ, ಇಂಗ್ಲೆಂಡ್‌ನಲ್ಲಿ ಅಲ್ಲಿ, ಅವರು ಮಾತನಾಡುವಾಗ ಎಲಿಫ್ಯಾಕ್ಸ್ ಎಂದು ಕೇಳುತ್ತಾರೆ, ಗೌರ್ನರ್ ಜನರಲ್ ಆಗಿದ್ದವರು. ನೀನು ಇಷ್ಟು ದೊಡ್ಡ ಶ್ರೀಮಂತ, ಭಾರತ ದೇಶದಲ್ಲಿ ಶ್ರೀಮಂತರು, ಮೇಲ್ವರ್ಗದವರು ಜೊತೆಗೂಡಿ ರಾಜಕೀಯ ಮಾಡಿರುವುದು. ಬಹಳ ಪವರ್‌ಫುಲ್ ಪೊಲಿಟಿಕ್ಸ್ ಮಾಡಿರುವುದು. ಆದ್ದರಿಂದ ನಿನ್ನ ದೃಷ್ಟಿಯಲ್ಲಿ ನೆಹರೂ ಹೇಗೆ ಪಟೇಲ್ ಹೇಗೆ ಎಂದು ಕೇಳಿದರು? ಆತ ಹೇಳುತ್ತಾನೆ, `Patel is a dangerous fellow'. He mentioned here. When asked `what about Nehru?' He said `Nehru is alright. But, he is not meant for elderly person; he is for young boys'. Nehru's charm, charism - it influenced he younger generation in those days. Patel, a farmer, a stubborn leader was nto acceptable to that Congress the. ಗಾಂಧೀಜಿ ಯಾವಾಗ 1936ರಲ್ಲಿ ಪ್ರೆಸಿಡೆಂಟ್‌ಷಿಪ್ ಅನ್ನು ನೀನು ಮಾಡಿಕೊಂಡು ಹೋಗಪ್ಪ ಎಂದು ನೆಹರೂರವರಿಗೆ ಹೇಳಿದಮೇಲೆ, ಆಗ ನಮ್ಮ ನಾಯಕರುಗಳು ಜಯಪ್ರಕಾಶ್ ಮತ್ತು ಲೋಹಿಯಾ ರವರು ಗಾಂಧೀಜಿಗೆ ಹತ್ತಿರ ಆದರು. ಇವೊತ್ತು ಲೋಹಿಯ ಹೇಳುತ್ತಾರೆ, ಗಾಂಧೀಜಿ ಅವ ಒಬ್ಬ ವಿಜ್ಞಾನಿ ಅಲ್ಲ. `Marx is a scientist'. Prophets are different. Scientists are different. `Einstein is a scientist. Marx is a scientist. Pygambar is a prophet. Gandhiji combined both. He had the qualities of prophet as well as scientist'. ಇದು ಗಾಂಧೀಜಿ ಮತ್ತು ಮಾರ್ಕ್ಸ್ ಅವರ ಕಂಪ್ಯಾರಿಸನ್. ಅದಕ್ಕೆ ನಾನು ಇವೊತ್ತು ಈ ಸಂದರ್ಭದಲ್ಲಿ ಏಕೆ ಹೇಳುತ್ತೇನೆ ಎಂದರೆ, ನಾವೇನು ಎಲ್ಲಿಗೆ ಹೋಗುತ್ತಿದ್ದೇವೆ ತಾವು ಮೂಲಭೂತ ಪ್ರಶ್ನೆಗಳನ್ನು ಎತ್ತಿದಿರಿ. Judiciary sitting in judgment over even in issue of tickets to some institutions, judiciary sitting in judgment over entering into executive, putting itself in the legs, in the position of executive. ಅದನ್ನು ನಾವು ಜೆಸ್ಟಿಫೈ ಮಾಡುವುದಕ್ಕೆ ಎಕ್ಸಿಕ್ಯೂಟಿವ್ ಏಕೆ ಇಷ್ಟು ತಪ್ಪು ಮಾಡಿದೆ. ಲೆಜಿಸಲೇಚರ್‌ನಲ್ಲಿ ಇದು ಆಗಿದೆ. ಏನು ಮಾಡುವುದು ಸಾರ್, ಕಾನೂನು ಹೇಳುತ್ತದೆ ಇದು ಮಾಡು ಎಂದು ಆಗ ಅವಕ್ಕ ಪ್ರೊವೈಸೋ ಇದೆಯಲ್ಲ ಅದು ಅಲೋ ಮಾಡಲ್ಲ. Provisos

are becoming more common than the main provisions itself. ಪ್ರೊವೈಸೋ ಹಿಡಿದುಕೊಂಡು ಈಗ ಇವರು ಹೇಳಿದಂತೆ ಬ್ಯಾಕ್‌ಲಾಗ್. ಯಾವುದೋ ಒಂದು ಪ್ರೊವೈಸೋ ಇಟ್ಟುಕೊಂಡಿದ್ದಾರೆ. ಅದಕ್ಕೇನು ಮೈನ್ ರೀಸನ್ಸ್ ಇರುವುದಿಲ್ಲ. ಅದಕ್ಕೆ ನಾನು ಇವೊತ್ತು, ನಾನು ಮೊದಲಿನಿಂದ ಒಂದಷ್ಟು ದಿನ ಲಾ ನೂ ಪ್ರಾಕ್ಟಿಸ್ ಮಾಡಿದೆ, ಡಿಸ್ಟ್ರಿಕ್ ಕೋರ್ಟ್‌ನಲ್ಲಿ ಮತ್ತು ಹೈಕೋರ್ಟ್‌ನಲ್ಲಿ. ನಂತರ ಪೊಲಿಟಿಕ್ಸ್‌ಗೆ ಬಂದಮೇಲೆ ಅದಕ್ಕೆ ಮಾಲ್‌ಪ್ರಾಕ್ಟಿಸ್ ಜಾಸ್ತಿಯಾಗುತ್ತಾ ಹೋಯಿತು ಪ್ರಾಕ್ಟಿಸ್‌ಆಗಲಿಲ್ಲ ಅದಕ್ಕೆ ಕೈಬಿಟ್ಟೆ. ನಾವು ಕಾನೂನನ್ನು ಅನಾವಶ್ಯಕವಾಗಿ ಹೆಚ್ಚು ನಿರ್ಮಾಣ ಮಾಡಿಕೊಂಡು, ಇಂಪ್ಲಿಮೆಂಟೇಷನ್ ಮಾಡುವುದಿಲ್ಲ. ಕಡಿಮೆ ಕಾನೂನುಗಳ ಸಂಖ್ಯೆ ಇಟ್ಟುಕೊಂಡು ಹೆಚ್ಚು ಇಂಪ್ಲಿಮೆಂಟ್ ಮಾಡಿದರೆ, ಆ ಸಮಾಜದಲ್ಲಿ ಒಂದು ಶಿಸ್ತು ಇರುತ್ತದೆ. ನಾವು ಪ್ರತಿಯೊಂದಕ್ಕೂ ಒಂದು ಪ್ರೊವಿಸೋಸ್ ಮಾಡುತ್ತೇವೆ. ಈಗ ದಕ್ಷಿಣಕ್ಕೆ ಹೋಗಬೇಕೇ; ದಕ್ಷಿಣಕ್ಕೆ ಹೋಗುವುದಾದರೆ ಬಲಗಡೆಗೆ ತಿರುಗಿ, ಎಡಗಡೆಗೆ ಹೋಗಿ ಎಂದು ಅವನು ಉತ್ತರಕ್ಕೆ ಹೋಗುವಂತೆಯೆ ಮಾಡಿಬಿಡುತ್ತಾರೆ. ಈ ಮೆಕಾನಿಸಂ ಏನು ಇದೆ ನಮ್ಮದು 50 ವರ್ಷ, lack of clarity, lack of purpose, ಪ್ರತಿಯೊಂದಕ್ಕೂ ಕೋರ್ಟಿಗೆ ಹೋಗುವುದು, ಅದಕ್ಕೆ ಹೋಗುವುದು, ಇದಕ್ಕೆ ಹೋಗುವುದು. ಸಾಮಾನ್ಯ ಮನುಷ್ಯ ಯಾರು ಕೋರ್ಟಿಗೆ ಹೋಗುವುದಕ್ಕೆ ಸಾಧ್ಯ ಇಲ್ಲ, ಯಾರು ಕೋರ್ಟಿನಿಂದ ನ್ಯಾಯವನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಅವನು ಇವೊತ್ತು ರಸ್ತೆಯಲ್ಲಿ ಬಿದ್ದಿದ್ದಾನೆ. It is he who is the breeder of violence in this country. It is he who is the target of violence in this country. ಯಾರಿಂದ ಕ್ರೌರ್ಯ ಬರುತ್ತಿದೆ ಎಂದರೆ ಇಂಥವರಿಂದ. ಅವರು ವಿದ್ಯಾವಂತರಿರಬಹುದು, ಅವಿದ್ಯಾವಂತರಿರಬಹುದು. ಹಳ್ಳಿಯಲ್ಲಿ ಕೆಲಸ ಇರುವುದಿಲ್ಲ. ಜಮೀನನ್ನು ಕೊಳ್ಳುವುದಕ್ಕೆ ಆಗುವುದಿಲ್ಲ. ಕೆಲಸ ಹುಡುಕಿಕೊಂಡು ದಾವಣಗೆರೆ ಬರುತ್ತಾನೆ. ದಾವಣಗೆರೆಯಲ್ಲಿ ಕೆಲಸ ಸಿಗುವುದಿಲ್ಲ. ನಂತರ ಬೆಂಗಳೂರಿಗೆ ಬರುತ್ತಾನೆ. ಇಲ್ಲಿಯೂ ಓಡಾಡುತ್ತಾನೆ, ಅಲ್ಲಿಯೂ ಓಡಾಡುತ್ತಾನೆ. ಕೊನೆಗೆ ಬೊಂಬಾಯಿಗೆ ಹೋಗುತ್ತಾನೆ. ಅಲ್ಲಿಂದ ಹಾಗೆಯೇ ಮೇಲೆ ಹೋಗುತ್ತಾನೆ, ವಾಪಸ್ಸು ಬರುವುದಿಲ್ಲ. ಇದು ನಮ್ಮ ದೇಶದ ಹಳ್ಳಿಗಾಡಿನ ನಿರುದ್ಯೋಗಿಗಳ ಕಥೆ. ಅವರು ವಿದ್ಯಾವಂತರಿರಬಹುದು ಅವಿದ್ಯಾವಂತರಿರಬಹುದು. ಇಂಥ ಪರಿಸ್ಥಿತಿಯಿರುವಾಗ ನೀವು ನ್ಯಾಯಾಂಗವನ್ನು,.... ಅದೇನು ಒಂದು ಕಮಲವೇ, ಬೇರೆ ನೀರಿನಲ್ಲಿ ಹುಟ್ಟಿರುವಂಥಾದ್ದು. Judiciary, they are our own men. Judges are our own men, flesh and blood. They are not a different race. ಜ್ಯುಡಿಷಿಯರಿಯಲ್ಲಿ ಒಂದು ಫೈನೆಸ್ಟ್ ಇನ್‌ಸಿಡೆಂಟ್ ಆಫ್ ಕರಪ್ಷನ್‌ಅನ್ನು ಹೇಳುತ್ತೇನೆ. ಸುಪ್ರೀಂ ಕೋರ್ಟ್‌ನ ಒಬ್ಬ ಚೀಫ್ ಜಸ್ಟೀಸ್, ಅವರ ಹೆಸರು ಹೇಳುವುದು ಬೇಡ, ಅವರು ನ್ಯಾಯಾಧೀಶರನ್ನು ನೇಮಕ ಮಾಡಲು ನಾಲ್ಕು ಜನ ಕುಳಿತಿದ್ದರು. ಸಂದರ್ಶನ ನಡೆಯುತ್ತಿತ್ತು. ನಡೆಯುತ್ತಿರುವಾಗ ಐದಾರು ಜನ ಬಂದರು. ಏಳನೆಯವನು ಬರುವಾಗ ಮುಖ್ಯ ನ್ಯಾಯಾಧೀಶರು ಏನು ಹೇಳಿದರು ಎಂದರೆ, ಇಲ್ಲಿ ನಾನು ಕುಳಿತಿರಬಾರದು, ಈಗ ಬರುತ್ತಿರುವ ಏಳನೆಯವನು ನನ್ನ ಅಳಿಯ. ಆದ್ದರಿಂದ ನಾನು ಇಲ್ಲಿ ಇರಬಾರದು ಎಂದು. ಅಷ್ಟು ಹೇಳಿದ್ದೇ ಸಾಕಾಯಿತು, ಅವನು ಸೆಲೆಕ್ಟ್‌ಆಗಿ ನೇಮಕವಾಗಿಯೇ ಬಿಟ್ಟ. ಅವನ ಅಳಿಯ ಎಂದು ಇವರಿಗೂ ಗೊತ್ತಾಯಿತಲ್ಲ ಅದಕ್ಕೆ. ನಮ್ಮ

ದೇಶದಲ್ಲಿ ವ್ಯವಹಾರಗಳು ಇಷ್ಟು ಸೂಕ್ಷ್ಮವಾಗಿ ನಡೆಯುತ್ತವೆ. ನಾವು ಇವತ್ತು ಯಾವುದೋ ಒಬ್ಬ ಪೇದೆಯನ್ನು, ಸಬ್‌ಇನ್ಸ್‌ಪೆಕ್ಟರ್‌ರವರನ್ನು ಸರಿಪಡಿಸುತ್ತೇವೆ ಎಂದರೆ, ನೀವು ಮೈಮೇಲಿರುವ ಹುಣ್ಣಿಗೆ ಔಷಧ ಹಚ್ಚಬೇಡಿ, ಏಕೆಂದರೆ ರಕ್ತ ಕೆಟ್ಟುಹೋಗಿದೆ. ಜ್ಯುಡಿಷಿಯರಿಯೂ ಅಷ್ಟೇ, ಎಕ್ಸಿಕ್ಯುಟೀವ್ ಕೂಡ ಅಷ್ಟೇ. ವಾಟಾಳ್‌ರವರು ಬಹಳ ಚೆನ್ನಾಗಿ ಹೇಳಿದರು, "ಕೋಡಗನ ಕೋಳಿ ನುಂಗಿತ್ತಾ, ನೋಡವ್ವ ತಂಗಿ ಕೋಡಗನ ಕೋಳಿ ನುಂಗಿತ್ತಾ" ಎಂದು. ಅದಕ್ಕಿಂತ ಮುಂಚೆ "ಸೋರುತಿಹುದು ಮನೆಯ ಮಾಳಿಗೆ" ಕೋಳಿ ಕೋಡುಗನನ್ನು ತಿನ್ನುವುದಕ್ಕಿಂತ ಮುಂಚೆ ಇಲ್ಲಿ ಮನೆ ಸೋರಿದೆ. " ಅಜ್ಞಾನದಿಂದ ಸೋರುತಿಹುದು ಮನೆಯ ಮಾಳಿಗೆ, ಮಳೆಗಾಳಿಗೆ ನೆನೆನೆನೆದು ಸೋರುತಿಹುದು ಮನೆಯ ಮಾಳಿಗೆ" ಅದಕ್ಕಾಗಿ, ವಾಟಾಳ್‌ರವರೇ ಕೋಳಿ ಕೋಡುಗನನ್ನು ನುಂಗುವುದಕ್ಕೆ ಆಗುವುದಿಲ್ಲ. ಅವರು ಸಾಂಕೇತಿಕವಾಗಿ ಏನು ಹೇಳಿದ್ದಾರೆ, 'ಗೋವಿಂದ ಗುರುವಿನ ಪಾದ ನನ್ನನ್ನು ನುಂಗಿತು' ಎಂದರೆ ಗುರುವಿನ ಪಾದದಲ್ಲಿ ನಾನು ಲೀನನಾಗುತ್ತೇನೆ ಎಂದರೆ ಅದಕ್ಕೆ ಅದು, ಕೋಡಗ ಮತ್ತು ಕೋಳಿ, ಗುಹೆ ಮತ್ತು ಬೆಟ್ಟ, ಗೋಡೆ ಮತ್ತು ಸುಣ್ಣ, ಮದ್ದಳೆ ಮತ್ತು ನರ್ತಕಿ, ನೇಗಿಲು ಮತ್ತು ರೈತ. ಅದಕ್ಕೆ ನಿಮ್ಮ ವಿಚಾರ ಸರಿಯಿದೆ. ಆದರೆ ಈ ಸೋರುವುದನ್ನು ನಿಲ್ಲಿಸಬೇಕು. ಬರೀ ಕೋಡುಗನನ್ನು ನೋಡಿದರೆ ಆಗುವುದಿಲ್ಲ, ಮನೆ ಮಾಳಿಗೆ ಸೋರುತ್ತಿದೆಯಲ್ಲ, ಅದನ್ನು ನಿಲ್ಲಿಸಬೇಕು. ಮಾನ್ಯ ನಂಜೇಗೌಡರಿಗೆ ನಾನು ಇಷ್ಟು ಹೇಳಲಾರೆ. ಎಲ್ಲರಿಗೂ ಹೇಳುತ್ತೇನೆ. ಈ ಸಿಸ್ಟಂ ಕೊಲ್ಯಾಪ್ಸ್ ಆದರೆ, ಸಿಸ್ಟಮ್ಯಾಟಿಕ್ ಅಲ್ಲ, ಸಿಸ್ಟಮಿಕ್. ಇದನ್ನು ಹೇಗೆ ತಡೆಯಬೇಕು? ಯಾರು ತಡೆಯಬೇಕು? ಅದು ಹೇಗೆ ಕೊಲ್ಯಾಪ್ಸ್ ಆಗುತ್ತದೆ ಮತ್ತು ಹೇಗೆ ಅಸ್ತಿತ್ವಕ್ಕೆ ಬರುತ್ತದೆ ಎನ್ನುವುದು ಇತಿಹಾಸಕ್ಕೆ ಬಿಟ್ಟಿದ್ದು. ಇಲ್ಲ, ಅದು ಕೊಲ್ಯಾಪ್ಸ್ ಆಗುವುದಕ್ಕಿಂತ ಮುಂಚೆ ನಾವೇನಾದರೂ ಇವತ್ತು, ಆಲ ಪಾರ್ಟಿ ಮೀಟಿಂಗ್‌ನಲ್ಲಿ ಕೆಲವು ಕೋಡ್ ಆಫ್ ಕಾಂಡಕ್ಟ್ ಬಗ್ಗೆ ಚರ್ಚೆಗೆ ಇದೆ ಚುನಾವಣೆಗಳನ್ನು ನಾವು ಹೇಗೆ ನಡೆಸುತ್ತೇವೆ ಎಂದರೆ, ಮನಸ್ಸಿಗೆ ಎಷ್ಟು ಅಸಹ್ಯವಾಗುತ್ತದೆ, ಮನಸ್ಸಿಗೆ ಎಷ್ಟು ನೋವಾಗುತ್ತದೆ. ಇದಕ್ಕೆ ಯಾರೂ ಎಕ್ಸೆಪ್ಷನ್ ಇಲ್ಲ, ಯಾವ ಪಾರ್ಟಿಯೂ ಎಕ್ಸೆಪ್ಷನ್ ಇಲ್ಲ. ಕೆಸರು ಹಚ್ಚುವುದರಲ್ಲಿ ನಿಮಗಿಂತ ನಾವು, ನಮಗಿಂತ ನೀವು ಎಂದು ಮಾಡಿಕೊಂಡು ಮುಖಕ್ಕೆ ಕೆಸರು ಹಚ್ಚುವುದರಲ್ಲಿ ಇವತ್ತು ಎಲ್ಲರೂ ಕೈಗೆ ಕೆಸರು ಹಚ್ಚಿಕೊಂಡಿದ್ದೇವೆ. ಯಾರ ಕೈಯಲ್ಲೂ ಗಂಧವಿಲ್ಲ. ಯಾರು ಹೆಚ್ಚು ಕೆಸರು ಹಚ್ಚುತ್ತಾನೋ ಅವನೇ ವೀರ. ಇದಕ್ಕೆ ಪ್ರಕ್ರಿಯೆ ಹೇಗೆ ಬಂತು ಎಂದರೆ ಕೆಲವು ಸಲಹೆಗಳನ್ನು ನಾವು ಕೊಡುತ್ತೇವೆ. T.N. Seshan gave suggestions. The general receiption was very good. ಆಯಿತು, ಇವನು ಏನೋ ಒಂದು ಸ್ವಲ್ಪ ಸಿಸ್ಟಂಅನ್ನು ಇಂಪ್ರೂವ್ ಮಾಡುತ್ತಾನೆ, ಅದು ಹಾಗಲ್ಲ. ನಮ್ಮ ದೇಶ ನಿಂತ ನೀರು, ಕೊಳಚೆ. ಹುಡುಗರು ಬಂದು ನೀರು ನಿಂತಿದೆಯಲ್ಲ ಎಂದು ಒಂದು ಕಲ್ಲು ಎಸೆದರೆ ಮೊದಲು ತರಂಗಗಳು ಏಳುತ್ತವೆ, ಸ್ವಲ್ಪ ಸದ್ದಾಗುತ್ತದೆ. ಕಲ್ಲು ಕೆಳಗೆ ಹೋಗುತ್ತದೆ ಮತ್ತು ಕೆರೆ ಅದೇ ರೂಪಕ್ಕೆ ಬರುತ್ತದೆ. ಇದು ನಮ್ಮ ದೇಶ ನಾವು ನಿಂತ ನೀರು, ಕೊಳೆತ ನೀರು. ಯಾರೋ ಒಬ್ಬ ಬುದ್ಧ, ಒಬ್ಬ ಬಸವ, ಒಬ್ಬ ಅಂಬೇಡ್ಕರ್, ಒಬ್ಬ ಮಹಾತ್ಮ ಬಂದು ಒಂದು ಕಲ್ಲು ಹಾಕಿದಾಗ ತರಂಗಗಳು ಏಳುತ್ತವೆ. ಮತ್ತೆ ಯಥಾಪ್ರಕಾರವಾಗುತ್ತದೆ. ಅದಕ್ಕೋಸ್ಕರ ಈ ಪದ್ಧತಿಯನ್ನು ಹೇಗೆ ಮಾಡುವುದು? ಈಗ ನಾವು ಅಸೆಂಬ್ಲಿಯಲ್ಲಿ ಕಾನೂನು ಪಾಸ್ ಮಾಡಿ ಎಲ್ಲಾ ಸರಿಪಡಿಸಬೇಕು, ಅಲ್ಲ. ಆದರೆ ತಮ್ಮ ವಿಚಾರ ಏನಿದೆ,

ಆ ವಿಚಾರವನ್ನು ಇವತ್ತು ನಾವು ಜನರಿಗೆ, we must share these thoughts with the people, people's organisations. ಈಗ ನಾವೆಲ್ಲರೂ ಏನಾದರೊಂದು ನಮ್ಮ ಪಕ್ಷದ ಅಥವಾ ಸರ್ಕಾರದ ನಡವಳಿಕೆಗೆ, ಮಾತತ್ತಿದರೆ ಚಳುವಳಿ, ಮಾತೆತ್ತಿದರೆ ಹೋರಾಟ. ಅವು ಕೇಳುವುದಕ್ಕೆ ಯೋಗ್ಯವಲ್ಲದ ವಿಚಾರಗಳಾದರೂ ಚಳುವಳಿ ಮಾಡುತ್ತಾರೆ. ಹೈಕೋರ್ಟ್ ಹತ್ತಿರ ಅಡ್ವೋಕೇಟ್‌ಗಳು ಮತ್ತು ಕೋರ್ಟಿನ ನೌಕರರು ಹೊಡೆದಾಟ ಮಾಡಿದ್ದಾರೆ ಎಂದರ ಅದಕ್ಕೆ ಪರಿಹಾರವೇನು? ಪೋಲೀಸಿನವರು ಹೋಗಿ ವಕೀಲರುಗಳನ್ನು, ನ್ಯಾಯಾಧೀಶರುಗಳನ್ನು, ನೌಕರರನ್ನು ಸಮಾಧಾನ ಮಾಡಬೇಕು ಎಂದರೆ ಏನು ಪರಿಹಾರ ಎನ್ನುವುದನ್ನು ಪ್ರಮೀಳಾ ಅವರು ಹೇಳಬೇಕು. ಮುಖ್ಯಮಂತ್ರಿಯಾಗಿ ನಾನು ಅವರನ್ನು ಕರೆದು ಮಾತನಾಡಬಹುದು. ಅಲ್ಲೊಂದು ಕಡೆ ಬಸ್ಸಿಗೆ ಕಲ್ಲು ಹೊಡೆದಿದ್ದಾರೆ. ಯಾರು ಕಾನೂನನ್ನು ತಿರಸ್ಕರಿಸುತ್ತಾರೆ, ಯಾರು ಅಪರಾಧ ಮಾಡುತ್ತಾರೆ, ಅವರು ಕಾನೂನಿಗೆ ಒಳಗಾಗಬೇಕು ಎಂದು ಇಡೀ ಸಮಾಜವನ್ನು, ಲಾ ಅಂಡ್ ಆರ್ಡರ್ ಮೆನಟೇನ್ ಮಾಡತಕ್ಕಂಥ ವೃತ್ತಿಯನ್ನು ಮಾಡತಕ್ಕಂಥವರು ಹೀಗೆ ಹೊಡೆದಾಟಕ್ಕೆ ಇಳಿದರೆ ಹೇಗೆ? ನಾನು ಆ ವಕೀಲರದ್ದು ತಪ್ಪು ಅಥವಾ ಇವರದ್ದು ತಪ್ಪು ಎಂದು ಹೇಳುತ್ತಿಲ್ಲ. ಆದರೆ ಇಂಥ ಸ್ಥಿತಿಗೆ ಬಂದರೆ, ಅದಕ್ಕೆ ಒಂದು ಮಾತು ಹೇಳುತ್ತಾರೆ, "ಹೊಸಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜೆ ತುಂಬಿ ಮನೆಯೊಳಗೆ ಮನೆಯೊಡೆಯನಿದ್ದಾನೋ, ಇಲ್ಲವೋ." ಹೊಸ್ತಿಲಲ್ಲಿ ಹುಲ್ಲು ಹುಟ್ಟುವುದು ಎಂದರೆ ಯಾರೂ ನೋಡಿಕೊಂಡಿಲ್ಲ ಎಂದಾಗುತ್ತದೆ. ಮನೆಯೊಳಗೆ ರಜೆ ತುಂಬಿ ಎಂದರೆ, ಎಲ್ಲಾ ಜಗಳವಾಡಿಕೊಳ್ಳುತ್ತಾ ಅಣ್ಣನ ಮೇಲೆ ಇವನು, ತಮ್ಮನ ಮೇಲೆ ಇವನು ಹೇಳುತ್ತಾ, ಯಾರೂ ಕೇಳುವವರಿಲ್ಲ ಎಂದರೆ ಆಗ ಈ ಮನೆಗೆ ಯಜಮಾನ ಇದ್ದಾನೋ, ಇಲ್ಲವೋ ಎನ್ನುವ ಪ್ರಶ್ನೆ ಬರುತ್ತದೆ. ಈಗ ನಾವೂ ಹಾಗೇ ಕೇಳಬೇಕಾಗುತ್ತದೆ. ಹೈಕೋರ್ಟ್ ಹತ್ತಿರ ವಕೀಲರದು ಮತ್ತು ನೌಕರರ ಹೊಡೆದಾಟ ಎಂದರೆ ಇದಕ್ಕಿಂತ ಉಲ್ಲೇಖ ಇನ್ನೇನು ಬೇಕು. ಅದಕ್ಕೆ, ನಾವೆಲ್ಲರೂ ಸ್ವಲ್ಪ ಗಂಭೀರವಾಗಿ, ಈ ವ್ಯವಸ್ಥೆ ಸರಿಪಡಿಸಲು ಆಗದಿದ್ದರೆ ಹೋಗಲಿ, ಅದು ಹೇಗೆ ಹೋಗುತ್ತದೋ ಹಾಗೆ ಹೋಗುತ್ತದೆ, ನಾವೇನೂ ಅದನ್ನು ಹಿಡಿದುಕೊಳ್ಳುವುದಕ್ಕೆ ಆಗುವುದಿಲ್ಲ, ಮಾಡುವುದಕ್ಕೂ ಆಗುವುದಿಲ್ಲ. ಆದಷ್ಟು ಬೇಗ ಹೋಗುವ ಹಾಗೆ ಮಾಡಬೇಕು. ಅದಕ್ಕೂ ಒಂದು ಮಾರ್ಗವಿದೆ. ಆದಷ್ಟು ಬೇಗ ಇದು ಕೊಲ್ಯಾಪ್ಸ್ ಆಗಲಿ ಇದು ಎಂದು. ಯಾವಾಗ ನೀವು ಅದನ್ನು ರಿಫಾರ್ಮ್ ಮಾಡಲಿಕ್ಕೆ ಆಗಲಿಲ್ಲ, ಆಗ ಅದನ್ನು you have to push it down. ಅದನ್ನಾದರೂ ತೀರ್ಮಾನ ಮಾಡೋಣ, ಇದನ್ನಾದರೂ ಮಾಡೋಣ. ಆದರೆ ಯಾವುದಾದರೂ ಒಂದನ್ನು ತೀರ್ಮಾನ ಮಾಡೋಣ. ನಾವು ಕಟ್ಟೋಣಪ್ಪಾ ಎಂದರೆ ನೀವು ಎಳೆಯುತ್ತೇವೆ ಎನ್ನುತ್ತೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ತೀರ್ಮಾನ ಏನು ಎನ್ನುವುದನ್ನಾದರೂ ಹೇಳಿ.

ಶ್ರೀ ಜೆ. ಹೆಚ್. ಪಟೇಲ್ : ಅದಕ್ಕೇ ಜ್ಯುಡಿಷಿಯರಿ, ಮೊದಲು ನಾವು ಲೆಜಿಸ್ಲೇಚರ್‌ನಿಂದ ಮಾಡೋಣ. ಇನ್ನು ಉಳಿದವರ ಬಗ್ಗೆ ಏಕೆ? ಈಗ ಎಕ್ಸಿಕ್ಯುಟೀವ್ ಬಗ್ಗೆ ಹೇಳಿದ್ದೇನೆ. ಮನೆಯೊಳಗೆ ಮನೆಯೊಡನೆಯ ಇದ್ದಾನೋ ಇಲ್ಲಾವೋ, ಹೊಸ್ತಿಲಲ್ಲಿ ಹುಲ್ಲು ಹುಟ್ಟಿ ಮನೆಯೊಳಗೆ ರಜೆ ತುಂಬಿ

ಮನೆಯೊಳಗೆ ಮನೆಯೊಡೆಯ ಇದ್ದಾನೋ ಇಲ್ಲವೋ ಇದನ್ನು ಬಸವಣ್ಣನವರು ಹೇಳಿರುವಂತದ್ದು. ಕೆಲವು ಸಾಮಾನ್ಯ ಸುಧಾರಣೆಗಳನ್ನು ಆಡಳಿತಾತ್ಮಕ ಸುಧಾರಣೆ, ಕಾನೂನು ಬದಲಾವಣೆ ಮಾಡಿ ಮಾಡೋಣ. ಈಗ ಎಲೆಕ್ಟ್ರಿಸಿಟಿ ಬಗ್ಗೆ ಸಲಹೆಯನ್ನು ಕೊಟ್ಟರಿ ಅದನ್ನು ನಾವು ಒಪ್ಪಿಕೊಂಡೆವು. ವಾಸ್ತವಿಕವಾಗಿ ಸರ್ಕಾರ ಏನು ಆಲೋಚನೆ ಮಾಡುತ್ತದೆ ಅದನ್ನು ಸುಮ್ಮನೆ ಬಿಡಬೇಕೆನು ಎಂದು ನಿನ್ನೆಯ ದಿವಸ ನಮ್ಮ ಆಯನೂರು ಮಂಜುನಾಥ್‌ರವರು ಒಂಟಿ ಕಾಲಿನಲ್ಲಿ ನಿಂತುಕೊಂಡರು. ಹಿಂದೆ ಒಂಟಿಕಾಲಿನಲ್ಲಿ ನಿಲ್ಲುತ್ತಿದ್ದರು ಎಂದರೆ ತಪ್ಪಸ್ಸು ಮಾಡುವ ಸಲುವಾಗಿ ಬಹಳ ದೊಡ್ಡ ಋಷಿಗಳು ವಸ್ತು ಅಲ್ಲ. ನಾನು ಯಾವುದೋ ಟಿ.ವಿ.ಯಲ್ಲಿ ಹೇಳಿದೆ ಎಂಬ ವಿಷಯವನ್ನು ಗಮನದಲ್ಲಿಟ್ಟುಕೊಂಡು ಅಂದರೆ ಮದಿರೆ ಮತ್ತು ಮಾನಿನಿಯರ ಬಗ್ಗೆ ಮುಖ್ಯಮಂತ್ರಿಗಳು ಈ ತರಹ ಹೇಳಬಹುದೆ. ನಾನು ಹೇಳಿರುವುದನ್ನು ಸದನದ ಸದಸ್ಯರು ದಯಮಾಡಿ ಒಂದು ಸಾರಿ ಟಿ.ವಿ.ಯನ್ನು ನೋಡಿಬಿಡಿ. ಆತ ನನ್ನನ್ನು ಏನು ಕೇಳಿದ? ಒಂದು ಕಡೆ ಒಂದು ಸಾರಿ ಎಲ್ಲಾದರು I have to bury this hatchet ಎಲ್ಲರೂ ಹಗಲೆಲ್ಲ ಅದನ್ನೆ ಮಾತನಾಡುವುದು ಹೇಗೆಂದರೆ, "ಒಬ್ಬ ಗುರುಗಳು ಜೊತೆಗೆ ಒಬ್ಬ ಶಿಷ್ಯನನ್ನು ಕರೆದುಕೊಂಡು ಹೋಗುತ್ತಿದ್ದರು ಅವರ ಶಿಷ್ಯ ಒಬ್ಬ ಯುವಕ, ಒಂದು ಹೊಳೆಯ ಹತ್ತಿರ ಹೋದರು ಆ ಹೊಳೆಯನ್ನು ದಾಟಬೇಕು ಎಂದಾಗ ಒಬ್ಬ ಯುವತಿ ಎದುರಾಗಿ ಹೊಳೆಯನ್ನು ದಾಟಬೇಕಲ್ಲ ಗುರುಗಳೆ ಎಂದು ಕೇಳಿಕೊಂಡಳು ಈ ಯುವಕ ಇದ್ದವನ್ನು ಆ ಯುವತಿಯನ್ನು ಹೆಗಲಮೇಲೆ ಕುಳ್ಳರಿಸಿಕೊಂಡು ಅವಳನ್ನು ಹೊಳೆಯಿಂದ ದಾಟಿಸಿ ಆ ಕಡೆ ಇಳಿಸಿದ. ಇವನು ಗುರು ಹೇಳಿದ, ನೀನು ಬ್ರಹ್ಮಚಾರಿ...ಹೌದು, ನಂತರ ಐದು ಮೈಲಿ ನಡೆದರು ಮತ್ತೆ ಗುರುಗಳು, ನೀನು ಆಕೆಯನ್ನು ಸ್ಪರ್ಶ ಮಾಡಿದೆ... ಹೌದು, ನಿನ್ನ ಹೆಗಲಮೇಲೆ ಕುಳಿತಾಗ ಅವಳ ದೇಹ ಮೆತ್ತಗಿತ್ತೋ ಹೇಗಿತ್ತು ಎಂದರು, ಇಲ್ಲ ಬುದ್ಧಿ ನಾನು ನೋಡುವುದಕ್ಕೆ ಹೋಗಲಿಲ್ಲ ಎಂದ. ಇನ್ನು ಸ್ವಲ್ಪ ದೂರ ನಡೆದ ನಂತರ ಮತ್ತೆ ಆಕೆಯ ಕಾಲು ನಿನ್ನ ಎದೆಗೆ ತಾಗುತ್ತಿತ್ತಿಲ್ಲ ನಿನಗೇನೆನಿಸಿತು ಎಂದು ಗುರುಗಳು ಹೀಗೆ 15ಸಾರಿ ಕೇಳುತ್ತಲೇ ಕೇಳುತ್ತಲೇ ಸುಮಾರು 5-6 ಗಂಟೆ ಕೇಳಿದ. ಆ ಶಿಷ್ಯ ಹೇಳಿದ, ಏನು ಗುರುನಪ್ಪಾ ನೀವು ನಾನು ಆಕೆಯನ್ನು ಐದು ನಿಮಿಷ ಹೆಗಲಮೇಲೆ ಕುಳ್ಳರಿಸಿಕೊಂಡಿದ್ದೆ ನೀವು ಐದು ಗಂಟೆ ಆಕೆಯನ್ನು ತಲೆಯ ಮೇಲೆ ಕುಳ್ಳರಿಸಿ ಕೊಂಡಿದ್ದೀಯಾ, ನಿನಗೆ ಬುದ್ಧಿ ಇದೆಯಾ; ಆಕೆ ನಿನ್ನನ್ನು ಐದು ಗಂಟೆ ಕಾಡುತ್ತಿದ್ದಾಳೆ ಎಂದು ಹೇಳಿದ. ಹಾಗೆ ನಾನು ಟಿ.ವಿ.ಯಲ್ಲಿ ಐದು ನಿಮಿಷ ಹೇಳಿದ್ದನ್ನು ಇವರೆಲ್ಲ ಮಹಾನುಭಾವರು ಏನು ವ್ಯಾಖ್ಯಾನ ಸುಮಾರು ತಿಂಗಳಗಟ್ಟಲೆ ಮಾಡುತ್ತಾರೆ. ತಮಾಷೆ ಏನೆಂದರೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಲ್ಲಾ ಮಹತ್ವದ ಕೆಲಸ ಐದು ನಿಮಿಷದಲ್ಲೆ ನಡೆಯುತ್ತದೆ.

ಶ್ರೀ ಹೆಚ್.ಎಸ್. ನಂಜೇಗೌಡ : ಇನ್ನೊಂದು ವಿಚಾರವೇನೆಂದರೆ, ನಾನು ಎಲ್ಲರನ್ನು ಕೇಳಿಕೊಂಡು ಬಂದಿದ್ದೇನೆ, ನೀವು ಮಾಡಿದ್ದು ತಪ್ಪೆಂದು ಇದುವರೆಪಿಗೂ ಯಾರೂ ಹೇಳಿಲ್ಲ, ಮಾತು ಹೇಳಬಾರದಿತ್ತು ಎನ್ನುತ್ತಾರೆಯೇ ಹೊರತು, ತಪ್ಪೆಂದು ಹೇಳಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅದನ್ನು ಹೇಳುತ್ತಿರುವವರು ಯಾರು ಗೊತ್ತೇನು ಅದನ್ನು ಮಾಡಿರುವವರೆ.

ಶ್ರೀ ಜೆ. ಹೆಚ್.ಪಟೇಲ್ : ಎಲ್ಲಾದರೂ ಒಂದು ಕಡೆ ನಮಗೆ ಮುಚ್ಚುಮರೆ ಎನ್ನುವುದು ಬೇಕ ಆದರೂ ವಿಚಾರವಿರಬೇಕು, ಮುಕ್ತತೆ ಇರಬೇಕು. ಅದಕ್ಕೆ ಬಟ್ರಂಡ್‌ರಸಲ್‌ರವರ ಆ ಒಂದು ಪುಸ್ತಕವ ತರುವುದಕ್ಕೆ ಹೇಳಿದ್ದೆ. ಬೇರೆ ಪುಸ್ತಕವನ್ನು ತೆಗೆದುಕೊಂಡು ಬಂದಿದ್ದಾರೆ. ವಾಟಾಳ್ ನಾಗರಾಜ್‌ರವ ಬಟ್ರಂಡ್‌ರಸಲ್ ತೊಂಭತ್ತಾನಾಲ್ಕನೆ ಇಸವಿಯಲ್ಲಿ ಎಂಭತ್ತೊಂಭತ್ತನೆ ವಯಸ್ಸು ಮಹಿಳೆಯ ಮದುವೆಯಾಗುತ್ತಾನೆ. ಕೇಳುತ್ತಾನೆ, ಏಕೆಂದರೆ, ಒಂದು ಹೆಣ್ಣುಗಂಡಿನ ಸಂಬಂಧ ಕೇವಲ ಕಾಮವ ಕೇವಲ ಲೈಂಗಿಕತೆಯಲ್ಲ ಅಥವಾ ಸೌಂದರ್ಯದ ಉಪಾಸನೆಯಲ್ಲ, ಕೇವಲ ಲಂಪಟತನವಲ್ಲ, ಕೀ ಮಟ್ಟದ್ದಲ್ಲ, ಬಹಳ ಎತ್ತರದ ಮಟ್ಟಕ್ಕೂ ಹೋಗಬಹುದು. ಆಗ ಬಟ್ರಂಡ್‌ರಸಲ್ ಏನು ಹೇಳುತ್ತಾ ಎಂದರೆ ನನಗೆ ಇನ್ನೇನು ಇಲ್ಲಪ್ಪ Iam against bored. Alone I am bored, so I want to sha some time ಅದಕ್ಕೆ ಹೆಣ್ಣು ಗಂಡಿನ ಸಂಬಂಧದಲ್ಲಿ ಬಹಳ ಸೂಕ್ಷ್ಮತೆಗಳಿರಬೇಕು, ವಿಚಾರಗಳಲ ಸೂಕ್ಷ್ಮತೆಗಳಿರಬೇಕು. ಸಾಧಾರಣ ಮಾತಿಗೂ ಎಲ್ಲಾ ರಾಮಕೃಷ್ಣ ಪರಮಹಂಸರು, ವಿವೇಕಾನಂದರ ಎನ್ನುವ ಹಾಗೆ ಅವಿವೇಕರು ಮಾತನಾಡಿದರೆ, ನನಗೆ ಹೀಗೇಕೆ ಮಾತನಾಡಿದರೆಂದು ಗೊತ್ತಾಗುತ್ತ ಅದಕ್ಕೆ ಮನಸ್ಸು ಶುದ್ಧಿ ಇದ್ದರೆ, ನಾವು ಇನ್ನೊಬ್ಬರಿಗೆ ತೊಂದರೆ ಮಾಡದಿದ್ದರೆ, ಹಿಂಸೆ ಮಾಡದಿದ್ದ ನಾವು ನಿಚ್ಚಳ ಮನಸ್ಸಿನಿಂದ ಇರಬಹುದು, ಅದನ್ನು ಮಹಾತ್ಮಗಾಂಧಿಜಿಯವರು ಬಹಳ ಉತ್ತಮವಾ ಭಾಷೆಯಲ್ಲಿ ಹೇಳಿದ್ದಾರೆ

> ``I do not seek redemption from the consequences of my sin. I seek to be redeemed from the sin itself or rather from the very thought of sin"

ನನಗೆ ಸಿನ್ ಕಾನ್ಷಿಕ್ವೆಸಸ್ ಗೊತ್ತಿಲ್ಲದಿದ್ದರು. thought of sin is *haunting so many peop* from so many months. ಅವನು ಹೇಗೆ ಕೇಳಿದ ಎಂದರೆ,

> ``Sir, coming from a socialist background, you are reputed to be a lover of art, literature and you are great friend of many men of letters like Gopalkrishna Adiga and U.R. Anant Murthy and we have also heard that you are very close to wine and women"

Then I said, ``Yes, I like good things in my life, but I am not a drunkar I am not a womaniser, but I am not Mahatma Gandhi also, I may be like Nehru That is what I have said. ಅದಕ್ಕೆ ಕಥೆಯನ್ನು ಕಟ್ಟಿಕೊಂಡು ಹೇಳುತ್ತಾರೆ. ಹೇಳುತ್ತಾರೆ, ಎಲ್ಲರ ಉಪದೇಶ ಮಾಡುವವರೆ, ತಿನ್ನುವುದು ಬದನೆಕಾಯಿ. ಅದಕ್ಕೆ ಮಾನ್ಯ ಉಪಾಧ್ಯಕ್ಷರೆ, ಅವ ಹಿತದೃಷ್ಟಿಯಿಂದಲೇ ಹೇಳುತ್ತಿದ್ದೇನೆ ದಯವಿಟ್ಟು ಇದನ್ನು ಯಾರು ಪ್ರಸ್ತಾಪ ಮಾಡುವುದು ಬೇ ಇಲ್ಲದಿದ್ದರೆ ಯಾರ್‍ಯಾರು ಏನೇನು ಮಾಡಿದ್ದಾರೆಂದು ವಿಚಾರಣೆ ಮಾಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಒಂದು ಆಯೋಗ ರಚನೆ ಮಾಡಿ, ಅದಕ್ಕೆ ನಾ ಅಧ್ಯಕ್ಷನಾಗುತ್ತೇನೆ. ಈಗ ನನ್ನ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ರಚನೆ ಮಾಡುವುದಾದ ಎಲ್ಲರದ್ದನ್ನು ಬಯಲು ಮಾಡಿಬಿಡೋಣ.

ಶ್ರೀ ಜೆ. ಹೆಚ್. ಪಟೇಲ್ : ನಮ್ಮಲ್ಲಿ ದೇವರುಗಳ ಕಲ್ಪನೆ, ನಮ್ಮ ಪ್ರಕೃತಿಯ ಬಗ್ಗೆ ಒಂದು ಬಗೆಯ ಧಾರ್ಮಿಕ ಭಾವನೆ ಇದೆ. ನಾವು ತಿರುಪತಿ ಬೆಟ್ಟವನ್ನು ಕಲ್ಲುಗುಟ್ಟವೆಂದು ಪರಿಗಣಿಸುವುದಿಲ್ಲ, ತಿರುಪತಿಯನ್ನು ಒಂದು ಪವಿತ್ರ ಸ್ಥಳವೆಂದು ಹೇಳುತ್ತೇವೆ, ಗಂಗೆಯನ್ನು ಕೂಡ ಪವಿತ್ರವೆಂದು ಹೇಳುತ್ತೇನೆ. ಹಾಗೆಯೆ ಪ್ರತಿಯೊಂದಕ್ಕೂ ನಮ್ಮ ಕಲ್ಪನೆಗಳೇನಿವೆ, ಆ ಕಲ್ಪನೆಗಳೆ ನಮ್ಮ ಮಹಾ ಕಾವ್ಯಗಳು. ಮೈತಾಲಜಿ, ಮಿತ್ಸ ಅವು. ರಾಮ, ಕೃಷ್ಣಾ, ಶಿವ, ಇಂಥವರು, ಈಗ ಪೈಗಂಬರ ಇದ್ದರು, ಏಸು ಕ್ರಿಸ್ತ ಇದ್ದರು, ಅವರು ಹುಟ್ಟಿದ, ಅವರು ಓಡಾಡಿದ ಸ್ಥಳಗಳು ಇವತ್ತು ಕೂಡ ಐತಿಹಾಸಿಕವಾಗಿದ್ದಾವೆ; ನಮಗೆ ಗೊತ್ತಿದೆ. ಆದರೆ ಈ ರಾಮ, ಕೃಷ್ಣಾ, ಶಿವ ಮಹಾ ಕಾವ್ಯದಲ್ಲಿ ಸೃಷ್ಟಿಯಾದ ವ್ಯಕ್ತಿತ್ವಗಳು, ಅವು ಕ್ಯಾರೆಕ್ಟರ್ಸ್. They have themselves a different entity. ಭಾರತದಲ್ಲಿ ಅವನ್ನು ಹೇಳುವಾಗ ನಾವು, ರಾಮನ ಹೆಸರನ್ನು ಕೇಳದೇ ಇರುವವರು ಯಾರು ಇಲ್ಲ, ಇನ್ನು ಗಾಂಧೀಜಿಯವರು ಹೆಸರನ್ನು ಕೇಳದೆ ಇರುವವರು ಇರಬಹುದು. ಏಕೆಂದರೆ ಮೈತಾಲಜಿ ಎಂದರೆ, ಅವರು ಓದಿರಲೇ ಬೇಕೆಂದೇನು ಇಲ್ಲ. ಹಳ್ಳಿಗಾಡಿನ ಜನ ಹಲವಾರು ಮಾರ್ಗಗಳಿಂದ, ನಾಟಕವಿರಬಹುದು, ಪದಗಳಿರಬಹುದು, ಜಾನಪದವಿರಬಹುದು they are closer to our cultrual India. Our Cultural India it was so big, ಭರತವರ್ಷ ಎಂದು ಏನು ಕರೆಯುತ್ತೇವೆ ಹಿಮಾಲಯ ಪರ್ವತದ ಮೇಲೆ ಅವನು ಕುಳಿತು ಬಲಗಡೆ ಕೈನಲ್ಲಿ ಕಾನ್ಸ್ಟಂಟಿನೋಪಲ್, ಎಡಗಡೆ ಕೈನಲ್ಲಿ ಜಕಾರ್ತ, ಇಷ್ಟು ದೊಡ್ಡದಂತೆ ಆವಾಗ. ಇದು ಸಾಂಸ್ಕೃತಿಕ ಭಾರತ, ಕಲ್ಚರಲ್ ಇಂಡಿಯಾ, ಆಮೇಲೆ ಪೊಲಿಟಿಕಲ್ ಇಂಡಿಯಾ ಕುಗ್ಗುತ್ತಾ ಕುಗ್ಗುತ್ತಾ ಬಂತು ಪಾಕಿಸ್ತಾನವಾಯಿತು, ಬಾಂಗ್ಲದೇಶವಾಯಿತು, ಆ ಭೂಪಟವನ್ನು ನೋಡುವುದಕ್ಕಾಗದಂತೆ ಕೆಟ್ಟ ರೀತಿಯಲ್ಲಾಯಿತು. ನಾನು ಬರೆಯುತ್ತಿದ್ದಾಗ ಭಾರತದ ಭೂಪಟ ಬಹಳ ಚೆನ್ನಾಗಿ ಕಾಣುತ್ತಿತ್ತು. ಆ ಭೂಪಟ ಭೌಗೋಳಿಕವಾಗಿ ಹೇಗೆ ಬದಲಾವಣೆಯಾಗುತ್ತಾ ಬಂತೋ ಹಾಗೆ internally characterstically India is also becoming deformed ಎಲ್ಲೋ ನಾವು ತಪ್ಪುತ್ತಿದ್ದೇವೆ. ನಾನು ಇದನ್ನು ನಮ್ಮ ಪಕ್ಷ ನಿಮ್ಮ ಪಕ್ಷವೆಂದು ಹೇಳುತ್ತಿಲ್ಲ. ಇವತ್ತು ಎಲ್ಲರೂ ಕೂಡ ಈ ದೇಶದ ಹೊಣೆಗಾರಿಕೆಯನ್ನು ಹೊತ್ತಿರುವವರು. ಆದಕ್ಕೆ ಮೊನ್ನೆ ನಾನು ಈ ಭ್ರಷ್ಟಾಚಾರದ ಬಗ್ಗೆ ಬರೀ ಮಾತಾಗುತ್ತಿದೆ, ಬರೀ ಮಾತಾಗುತ್ತಿದೆ ಎಂದು ಪ್ರಧಾನಮಂತ್ರಿಗಳ ಜೊತೆ ಮಾತನಾಡುವಾಗ ಹೇಳಿದೆ. ಪ್ರಹ್ಲಾದನ ಅಪ್ಪ ಹಿರಣ್ಯಕಶ್ಯಪು ಕೇಳಿದ ದೇವರು ಎಲ್ಲಿದ್ದಾನೆ, ಎಲ್ಲಿದ್ದಾನೆ ಎಂದು ಕೇಳಿದ ಹಾಗೆ ಇವತ್ತು ಭ್ರಷ್ಟಾಚಾರ ಎಲ್ಲಿದೆ ಎಲ್ಲಿದೆ ಎಂದು ಕೇಳಿದಂತಾಗಿದೆ. ಅದು ಉಗ್ರ ನರಸಿಂಹ ಒಂದು ಸಾರಿ ಹೊರಗೆ ಬಂದನೆಂದರೆ ಆ ಕೋಪಕ್ಕೆ ಎಷ್ಟು ಜನ ಈಗಾಗಲೇ ಬಲಿಯಾಗುತ್ತಿದ್ದಾರೆ? ಈಗ ಜಪಾನಿನ ತನಾ-ಕಾವೆಗೆ ಎರಡು ವರ್ಷ ಶಿಕ್ಷೆಯಾಯಿತು, ಅವನು ರಾಜಕೀಯದಿಂದಲೆ ನಿವೃತ್ತಿಯಾದ, ಗ್ರೀಸ್ ಪ್ರೆಸಿಡೆಂಟದು ಅದೇ ರೀತಿಯಾಯಿತು, ಹಾಗೆ ಮೊನ್ನೆ ಬಾಂಗ್ಲ ದೇಶದ ಪ್ರೆಸಿಡೆಂಟ್ ಜಾಮೀನಿನ ಮೇಲೆ ಹೊರಗಡೆ ಬಂದರು. ಈ ರೀತಿಯಾಗಿ ನಮ್ಮ ದೇಶದ ಸ್ಥಿತಿ ಯಾವಾಗಲೂ ಬಂದಿರಲಿಲ್ಲ.

4.40 ಪಿ.ಎಂ.

ಆ ನಂತರ ಬರುತ್ತ ಬರುತ್ತಾ ಈಗೆಲ್ಲ ನಿರೀಕ್ಷಣಾ ಜಾಮೀನಿನ ಮೇಲೆ ಓಡಾಡುತ್ತಾರೆ. ಅದನ್ನು ಹೇಗೆ ಸರಿಪಡಿಸಬೇಕು? ನಮ್ಮ ಅಧ್ಯಕ್ಷರು ಬಹಳ ಸೂಕ್ಷ್ಮಮತಿಗಳು. ಅವರು ಸಿಟ್ಟಾಗಿ ಹೋಗಿದ್ದು ನನಗೆ ಒಂದು ತಮಿಳು ಸಾಹಿತ್ಯದ ಕಥೆ ನೆನಪಿಗೆ ಬರುತ್ತದೆ. ಒಬ್ಬ ಯುವಕ ತನ್ನ ಯುವತಿಗೋಸ್ಕರ

ತೋಟದಲ್ಲಿ ಕಾಯುತ್ತ ಕುಳಿತಿದ್ದ. ಆಕೆ ಹಿಂದುಗಡೆಯಿಂದ ಬಂದು ಕಣ್ಣು ಮುಚ್ಚುತ್ತಾಳೆ. ಕಣ್ಣು ಮುಚ್ಚಿದ ತಕ್ಷಣ ನೀನು ಯಾರು ಎಂದು ಕೇಳುತ್ತಾನೆ. ಯಾರು ಎಂದು ಕೇಳಿದನಲ್ಲ ಎಂದು ಆಕೆಗೆ ಹಾರ್ಟ್‌ಫೈಲ್ ಆಗಿಹೋಯಿತು... ಇವನು ಕಣ್ಣುಮುಚ್ಚಬೇಕಾದರೆ ಇನ್ನು ಯಾರೋ ಇರಬೇಕೆಂದು ಆಕೆ ಹಾರ್ಟ್‌ಫೈಲ್ ಆಗಿ ಸತ್ತಳಂತೆ. ಅಂತಹ ಕಳೆದುಕೊಳ್ಳಬೇಕೆಂದಲ್ಲ. ಆದರ ಹಾರ್ಟ್‌ಫೈಲ್ ಆಗುವಂಥ ಸೂಕ್ಷ್ಮತೆ ಹೋಗಬಾರದು. ಇಲಾಖಾವಾರು ಬಗ್ಗೆ ತಮ್ಮ ಪ್ರಶ್ನೆ ಬಹಳ ನಿಗೂಢವಾಗಿದೆ. ಏನು ಮಾಡುವುದು ಕೋರ್ಟ್‌ಗೆ ಹೋಗುತ್ತಾರೆ. ಹಾಗೆಯೇ ಪತ್ರಿಕೆ ಬಗ್ಗೆ ತಾವು ಹೇಳಿದಿರಿ. ಪತ್ರಿಕೆಯದು Fourth Estat ಇದೆ ಎಂದರೆ ಈ ದೇಶದ ಪ್ರಜಾತಂತ್ರವನ್ನು ಹೊರುವುದಕ್ಕೆ ನಾಲ್ಕು ಇವೆ. ಅದರಲ್ಲಿ ಇದು ಒಂದ ಸೇರಿದೆ. ಹೆಣ ಹೊರುವುದಕ್ಕೆ 4 ಜನ ಬೇಕಲ್ಲವೆ? ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗ ಹೀಗೆ ಇದೆಯಲ್ಲವೆ, 4 ನೆಯದು ಬೇಕು ಎಂದು ಹುಡುಕುತ್ತಿದ್ದಾಗ ಇದು ಸಿಕ್ಕಿತು ಹೆಣ ಹೊರುವುದಕ್ಕೆ. ಈ ಪೇಪರ್‌ನವರಿಗೆ ಸತ್ಯಾಸತ್ಯತೆಯ ಬಗ್ಗೆ ಗಮನವನ್ನು ಕೊಡುವುದು ಬೇಡವೇ? ಅವರಿಗೆ ಹೇ ತಿಳಿಯುತ್ತದೆಯೋ ಹಾಗೆ ಬರೆಯುತ್ತಾರೆ. ನಾವು ಏನು ಹೇಳುತ್ತೇವೆ ಎಂಬುದನ್ನು ಅವರ ತಿಳಿಯುವುದಕ್ಕೆ ಹೋಗುವುದಿಲ್ಲ. ಅಂದರೆ 'ದಿ ಹಿಂದೂ, ಪ್ರಜಾವಾಣಿ ಇಂತಹವುಗಳಿಗೆ ಎಕ್ಸಪ್ಷ ಇದೆ. ಕೆಲವರು ಏಕೆ ಹಾಗೆ ಬರೆಯುತ್ತಾರೋ ಗೊತ್ತಿಲ್ಲ. ಅವರಿಗೆ ಆ ರೀತಿ ಬರೆದರೆ ಒಂದು ತರ ಖುಷಿ ಕೊಡುತ್ತದೆ ಏನೋ? ಇನ್ನು ಕುಡಿತದ ಬಗ್ಗೆ ಚೀಟಿಯವರು ಒಂದು ಹಾಸ್ಯವನ್ನು ಬರೆದಿದ್ದಾ 'ಒಬ್ಬ ಸತ್ಯವಂತ ವಕೀಲರನ್ನು ಮದುವೆಯಾಗುತ್ತೇನೆಂದು ಮಗಳು ಕೇಳಿದಳಂತೆ. ಅಯ್ಯೋಯೊ ಸತ್ಯವಂತ ವಕೀಲ ಎಂದೂ ಇಲ್ಲ, ಅಯ್ಯಯ್ಯೋ, ವಕೀಲನೆ ಬೇರೆ ಸತ್ಯವಂತನ ಬೇರೆ, ಹೀ ಇಬ್ಬಿಬ್ಬರನ್ನು ಮದುವೆ ಆಗಬೇಕಾಗುತ್ತದೆಂ ಹೇಳಿದನಂತೆ. ಹಾಗೆ ಒಬ್ಬ ಪತ್ರಕರ್ತ ಮತ್ತು ಒಬ್ಬ ಕುಡು ಇದ್ದ. ಅವನು ಅದೆ, ಅವನು ಅದೆ ಎಂದು ಬರೆದ. ಪತ್ರಕರ್ತರಷ್ಟು ಕುಡುಕರು ಯಾರೂ ಇಲ್ಲ. ಆದ ಎಲ್ಲೂ ಎಕ್ಸೆಪ್ಷನ್ ಕೇಸ್ ಇರುತ್ತಾರೆ. ಆದರೆ ಕೆಲವರು ಎಷ್ಟೇ ಕುಡಿದರೂ ತಮ್ಮ ಬರವಣಿಗೆಯ ಬಹಳ ಎತ್ತರಕ್ಕೆ ತೆಗೆದುಕೊಂಡು ಹೋಗುತ್ತಾರೆ. ಕುಡುಕನಾದರೆ ಕೆಟ್ಟದ್ದು, ಸಮಾಜಕ್ಕೆ ಅವ ಕಂಟಕಪ್ರಾಯನಾದರೆ ಕೆಟ್ಟದು, ಆದರೆ ಇವರು ಉಪದೇಶ ಮಾಡುವುದು ಬೇರೆಯದಕ್ಕೆ. ಆದ ಇನ್ನೂ ಒಂದು, ಪಬ್ಲಿಕ್ ರಿಸೆಪ್ಷನ್ ಏನು ಇದೆ, ಸೆನ್ಸೇಶನ್‌ಗೋಸ್ಕರ ಅಸೆಂಬ್ಲಿಯ ಶ್ರೀ ಆಯನೂರು ಮಂಜುನಾಥ್‌ರವರು ಒಂಟಿ ಕಾಲಿನಲ್ಲಿ ನಿಂತರು. ಪೇಪರ್‌ನಲ್ಲಿ ಇದು ದೊಡ್ಡದಾ ಬಾಕ್ಸ್ ಒಳಗೆ ಬಂತು. ಈ ಮಂಜುನಾಥ್‌ರವರ ಹೆಸರು ಬಾಕ್ಸ್ ಐಟಂನಲ್ಲಿ ಬಂತು ಎಂದು ನಾ ಯಾರಾದರು ಶಿರಶಾಸನ ಹಾಕಿದರೆ, ಶಿರಶಾಸನ ಹಾಕುವುದಿಲ್ಲ ಎಂದು ಹೇಗೆ ಹೇಳುತ್ತೀರಿ? ಮಾ ಯಡಿಯೂರಪ್ಪನವರೆ, ಸದನದಲ್ಲಿ ಏನು ಚರ್ಚೆಯಾಯಿತು, ಯಾವ ಕಾನೂನು ಏನು ಹೇಳುತ್ತ ಎಂಬುದರ ಬಗ್ಗೆ ಕ್ಲಾಜ್ ಬೈ ಕ್ಲಾಜ್ ಓದಿಕೊಂಡು ಬರಬೇಕು. ಮಾನ್ಯ ಸದಸ್ಯರಾದ ವೈ. ರಾಮಕೃ ಒಬ್ಬರೇ ಕಾನೂನು ಬಗ್ಗೆ ಸೀರಿಯಸ್ ಆಗಿ ಓದಿಕೊಂಡು ಬರುವವರು. ಇನ್ನು ಎಲ್ಲರೂ ಅರ್ಥಂಭಥ ಯಾರು ಸರಿಯಾಗಿ ಹೇಳುವುದಿಲ್ಲ. ನಮ್ಮ ಊರಿನಲ್ಲಿ ಕೊಲೆಯಾಗಿದೆ. ಸ್ವಾಮಿ ಎಂದು ಇದ್ದಕ್ಕಿದ್ದ ಹ ಹೇಳಿಬಿಡುವುದು. ಕೇಳುವ ಹಾಗಿಲ್ಲ, ಹೇಳುವ ಹಾಗಿಲ್ಲ. ನಾವು ಲೆಜಿಸ್ಲೇಚರ್‌ಗಳಾಗಿ ಮೊದ ಬಂದಾಗ, ಏನಾದರೂ ಒಂದು ವಿಷಯ ಇದ್ದರೆ ಅದನ್ನು ಹೇಳಬೇಕೋ ಬೇಡವೋ, ಕೇಳಬೇಕೆ ಬೇಡವೋ ಎಂದು ಯೋಚನೆ ಮಾಡುತ್ತಿದ್ದೆವು. ಈಗ ನಮ್ಮ ಯುವಕರು ಬಂದುಬಿಟ್ಟಿದ್ದಾರೆ. ರೂ

ಓದಿ ರೂಲ್ಸ್ ಪ್ರಕಾರ ಹೆಸರು ಕಳುಹಿಸಬೇಕು. ನಿಮ್ಮ ಪ್ರತಿಭೆ ಏನು ಇದೆ ಅದನ್ನು ವ್ಯಕ್ತಪಡಿಸಲು ಓದಿಕೊಂಡು ಬಂದು ಮಾತನಾಡಬೇಕು. ನಾನು ಬಹಳ ಬುದ್ಧಿವಂತನೆಂದು ಹೇಳುತ್ತಿಲ್ಲ. ನಾನು ಮಾತನಾಡುತ್ತಿದ್ದರೆ ಮಾನ್ಯ ದೇವರಾಜು ಅರಸುರವರು ಎದ್ದು ಹೋಗುತ್ತಿರಲಿಲ್ಲ. ಕುಳಿತು ನಾನು ಏನು ಹೇಳುತ್ತೇನೆಂಬುದನ್ನು ಕೇಳುತ್ತಿದ್ದರು. ಹಾಗೆಯೇ ನೀವು, ನಾವು ಕುಳಿತುಕೊಂಡು ಕೇಳುವ ಹಾಗೆ ವಿದ್ವತ್‌ಪೂರ್ಣವಾಗಿ ಅಥವಾ ಯಾವುದಾದರೂ ಒಂದು ವಸ್ತುವಿನ ಮೇಲೆ ನೀವು ವಸ್ತುನಿಷ್ಠವಾಗಿ, ಅದರಲ್ಲಿ ಎಕ್ಸಾಜರೇಶನ್ ಮಾಡಬಾರದು, ಅಥವಾ ಸದನಕ್ಕೆ ಯಾವುದೇ ರೀತಿಯಿಂದ ಮಿಸ್‌ಲೀಡ್ ಮಾಡುವ ಹಾಗೆ ಹೇಳಬಾರದು. ಹಾಗೆ ಹೇಳಿದರೆ we will be able to do something, achieve something ಒಂದು ವರ್ಷಕ್ಕೆ ಕನಿಷ್ಟ ಪಕ್ಷ 100 ದಿನ ಅಧಿವೇಶನವನ್ನು ಮಾಡಬೇಕೆಂದು ಶ್ರೀವಾಟಾಳ್ ನಾಗರಾಜುರವರು ಹೇಳಿದರು. In principle I agree, but it should be well spelt. 100ದಿನ ಅಧಿವೇಶನ ನಡೆದರೆ ಇದೇ ತರಹ ನೀವು ನೆಲ ಹಿಡಿಯುವುದು, ನಾವು ಮೇಲೆ ಎತ್ತುವುದು, ಧರಣಿ ಎಂದರೆ ನೆಲ ಹಿಡಿಯುವುದು...

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ನಾವು ನೆಲ ಹಿಡಿಯುತ್ತೇವೆ, ನೀವು ಅಂದರೆ ಸರ್ಕಾರ ಮೇಲಕ್ಕೆ ಏಳುತ್ತಿರುತ್ತೀರಿ. ನಿಮ್ಮ ಮಂತ್ರಿಗಳ ಹಣೆಬರಹ ಅಷ್ಟೇ ಇದೆ. ನೀವು ಅಷ್ಟೇ ಇರಿ. ಏನು ಮಾಡುವುದಕ್ಕೆ ಆಗುತ್ತದೆ.

ಶ್ರೀ ಜೆ. ಹೆಚ್. ಪಟೇಲ್ : ನೀವು ಎಷ್ಟು ಸಲ ಅಂತ ನೆಲ ಹಿಡಿಯುತ್ತೀರಿ. ನಾವು ಎತ್ತಿ ಎತ್ತಿದಾಗೆಲ್ಲ ನೀವು ನೆಲ ಹಿಡಯುತ್ತೀರಿ. ನೆಲ ಹಿಡಿಯಬೇಡಿ ಎಂದು ಹೇಳುತ್ತೇನೆ. ತರ್ಕ, ವಿವಾದ, ಗ್ರಂಥ, ಸಾಹಿತ್ಯ ಕಾನೂನು ಇದರಲ್ಲಿ ನೀವು ಎಷ್ಟು ವಿದ್ವತ್ತನ್ನು ಪ್ರದರ್ಶನ ಮಾಡುತ್ತೀರೋ ಅಷ್ಟಕ್ಕೆ ನಾವು ತಯಾರಾಗಿ ಬರುತ್ತೇವೆ. ನಮ್ಮಲ್ಲಿ ಸಾಕಷ್ಟು ಸಮರ್ಥರು ಇದ್ದಾರೆ. ಇಲ್ಲವೆಂದು ಹೇಳುತ್ತಿಲ್ಲ. ಇದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರತಕ್ಕಂಥ ಎರಡು ವಿಷಯಗಳ ಬಗ್ಗೆ ಒಂದು ಬ್ಯಾಕ್‌ಲಾಗ್, ಜೆನ್ಯೂಸ್ ಇರುವ ಹಾಗೆ ಕಾಣುತ್ತದೆ. If we really want to help the Scheduled Caste, we must decide to do. ಅದು ಉಳಿದುದನ್ನು ಬ್ಯಾಲೆನ್ಸ್‌ನಲ್ಲಿ ಇಂಬ್ಯಾಲೆನ್ಸ್ ಮಾಡುವ ಹಾಗೆಯೂ ಇರಬೇಕು. ಅದರ ಬಗ್ಗೆ ಅವರನ್ನು ಕರೆಸಿ ಮಾತನಾಡುತ್ತೇನೆ. ಇನ್ನು ಬೇರೆ ಬೇರೆ ಸರ್ಕಾರದ ಆಜ್ಞೆಗಳು ಏನಾಗಬೇಕು, ಏನು ಸುಧಾರಣೆಗಳನ್ನು ಮಾಡಬೇಕು ಅದರ ಕೆಲವು ವಿಷಯಗಳನ್ನು ಹೇಳಿದ್ದಾರೆ ನಂಜೇಗೌಡರು ಮತ್ತು ಶಿಶುನಾಳ ಷರೀಫ್‌ರು ಅಂದರೆ ವಾಟಾಳ್ ನಾಗರಾಜ್‌ರವರು ಹೇಳಿದ್ದಾರೆ. ಅದನ್ನು ಯಾವ ಅರ್ಥದಲ್ಲಿ ತೆಗೆದುಕೊಳ್ಳಬೇಕೊ ಆ ಅರ್ಥದಲ್ಲಿ ತೆಗೆದುಕೊಳ್ಳಬೇಕು. ಮನೆ ಸೋರುವುದಕ್ಕೆ ಬಿಡಬಾರದು ಆ ಕೆಲಸ ಮಾಡಿ ಎಂದು ತಮ್ಮನ್ನೆಲ್ಲ ಕೇಳಿಕೊಂಡು ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಬಹಳ ದೀರ್ಘವಾಗಿ ಮಾನ್ಯ ಮುಖ್ಯಮಂತ್ರಿಗಳು ಬಹಳ ದಿವಸದ ಮೇಲೆ 4 ರಿಂದ 5ರವರೆಗೆ ಪೊಲಿಟಿಕಲ್ ಫಿಲಾಸಫಿ ಮೇಲೆ ಮತ್ತು ಬೇರೆ ಆಸ್ಪೆಕ್ಟ್ಸ್‌ಗಳ ಮೇಲೆ ಮಾತನಾಡಿದ್ದಾರೆ. ನಾನು ಅದರ ಬಗ್ಗೆ ಕೇಳುವುದಕ್ಕೆ ಹೋಗುವುದಿಲ್ಲ.

ಏಕೆಂದರೆ ಕೆಲವು ರೆರ್ಕಾಡ್ಸನಲ್ಲಿ ತಪ್ಪು ಮಾಹಿತಿಯನ್ನು ಕೊಡತಕ್ಕಂಥ ಪ್ರಯತ್ನ ಆಗಿದೆ. ಆ ರೆಕಾರ್ಡ್ಸ್ ಕೂಡ ನೇರವಾಗಿರಬೇಕು, ಮತ್ತು ಅವರೂ ಕೂಡ ಒಪ್ಪುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಮೊದಲನೆಯದಾಗಿ ಈ ಸಮಾಜ ಕಲ್ಯಾಣ ಇಲಾಖೆಯಲ್ಲಿ ತಾವು ಹೇಳಿದಿರಿ 20 ಕೋಟಿ ರೂಪಾಯಿ ಕನ್‌ಸಾಲಿಡೇಟೆಡ್ ಫಂಡ್‌ನಿಂದ ನಾನು ತೆಗೆದುಕೊಂಡು ಹೆಚ್ಚಿನ ಹಣ ಖರ್ಚುಮಾಡಿದ್ದೇನೆ ಎಂಬ ಮಾತನ್ನು ತಮ್ಮ ಭಾಷಣದಲ್ಲಿ ಸಮಾಜ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಮಾತನಾಡುವಾಗ ಹೇಳಿದಿರಿ. ನಾನು ಇಲ್ಲಿ ಪ್ರಸ್ತಾಪ ಮಾಡಿದ ಅಂಕಿಅಂಶದ ಮೇಲೆ ಅದೂ ಕೂಡ ಪ್ರಶ್ನೆ ಸಂಖ್ಯೆ:27, 13-2-97 ಇದೇ ಸದನದಲ್ಲಿ ಉತ್ತರ ಕೊಟ್ಟಿದ್ದೀರಿ, 1996-97, 1995-96ಕ್ಕೆ ಹಣ ಎಷ್ಟು ನಿಗಧಿ ಮಾಡಿದ್ದಿರಿ ಅಂದರೆ 1995-96ರಲ್ಲಿ 195 ಕೋಟಿ 98 ಲಕ್ಷ. ಆಗ ಖರ್ಚಾಗಿದ್ದು ಎಷ್ಟು ಎಂದರೆ 186 ಕೋಟಿ 14 ಲಕ್ಷ ಅಂದರೆ ಉಳಿದಿದ್ದು 9 ಕೋಟಿ 63 ಲಕ್ಷ. ಆಮೇಲೆ 1996-97 ಫೆಬ್ರವರಿ 13ರವರೆಗೆ ತಾವು ಇಟ್ಟಿದ್ದು 168 ಕೋಟಿ ಮಾತ್ರ. ಅಂದರೆ ಸುಮಾರು 118 ಕೋಟಿ ರೂಪಾಯಿ ಇನ್ನೂ ಖರ್ಚುಮಾಡದೆ ಉಳಿದಂಥ ಹಣ. ಇದು ಸ್ಟಾರ್ಡ್ ಕೊಶ್ಚನ್, ಸದನದಲ್ಲಿ ಕೊಟ್ಟಂಥ ಉತ್ತರ, ಮತ್ತು ಬಹಳ ದಿವಸಗಳ ಹಿಂದೆ ಶ್ರೀ ಎಚ್.ಡಿ. ಬಸವರಾಜುರವರ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೀರಿ. ಸ್ಪೆಷಲ್ ಕಾಂಪೊನೆಂಟ್‌ನಲ್ಲಿ ಎಸ್.ಸಿ/ಎಸ್.ಟಿ. ಜನಾಂಗಕ್ಕೆ ಖರ್ಚಾಗತಕ್ಕಂಥ ಹಣ, ಖರ್ಚಾಗದೇ ಇರತಕ್ಕಂಥದ್ದು ಸುಮಾರು 118 ಕೋಟಿ ರೂಪಾಯಿ. ಅದಕ್ಕಾಗಿ ನಾವು ಹೆಚ್ಚಿನ ಹಣ ಖರ್ಚು ಮಾಡಿದ್ದೇವೆಂದು ತಾವು ಏನು ಹೇಳುತ್ತಾ ಇದ್ದೀರಿ ಇದು ಸತ್ಯಕ್ಕೆ ದೂರವಾದುದು. ಇದು ಈ ಸದನದಲ್ಲಿ ಉತ್ತರ ಕೊಟ್ಟಿದ್ದು. ಅದಕ್ಕಾಗಿ ತಾವೇನು ಇವರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಖರ್ಚು ಮಾಡಿದ್ದೇವೆ ಎಂದು ಹೇಳುತ್ತೀರಿ ಇದು ಸರಿಯಲ್ಲ. ಎರಡನೆಯದು, ಪ್ಲಾನ್ ಔಟಲೇನಲ್ಲೂ ಕೂಡ ತಾವು ಪ್ರಿಯಾರಿಟಿ ಛೇಂಜ್ ಮಾಡಿದ್ದೇವೆ ಎಂದು ಹೇಳಿದ್ದೀರಿ. ಪ್ರಿಯಾರಿಟಿ ಛೇಂಜ್ ಮಾಡಿಲ್ಲ. ಅಂದರೆ ಇರಿಗೇಷನ್‌ಗೆ ಏನು ಮಹತ್ವ ಕೊಡಬೇಕು, ಪವರ್‌ಗೆ ಏನು ಕೊಡಬೇಕು, ಸೋಷಿಯಲ ವೆಲಫೇರಗೆ ಏನು ಕೊಡಬೇಕು, ಇದೆಲ್ಲಾ ಕೊಟ್ಟಿದ್ದೀರಿ. ಆದರೆ ಪ್ಲಾನ್ ಔಟ್‌ಲೇನಲ್ಲಿ ಸುಮಾರು 710 ಕೋಟಿ ರೂಪಾಯಿಗಳನ್ನು ಕಟ್ ಮಾಡಿ ಅದರಲ್ಲಿ ಸುಮಾರು 130 ಕೋಟಿ ರೂಪಾಯಿಗಳನ್ನು ನೀರಾವರಿಯಲ್ಲಿ ಕಟ್ ಮಾಡಿ, 178 ಕೋಟಿ ರೂಪಾಯಿಗಳನ್ನು ಪವರ್‌ನಲ್ಲಿ ಕಟ್ ಮಾಡಿದ್ದೀರಿ. ಗ್ರಾಮೀಣಾಭಿವೃದ್ಧಿಯಲ್ಲಿ 56 ಕೋಟಿ ರೂಪಾಯಿ ಕಟ್ ಮಾಡಿದ್ದೀರಿ. ಅಂದರೆ ಸ್ವಾಭಾವಿಕವಾಗಿ ಈ ಪ್ಲಾನ್ ಔಟ್‌ಲೇ, ನಿಮ್ಮ ಗಾತ್ರ ಕಡಿಮೆಯಾದಾಗ ನಿಮ್ಮ ಡೆವಲಪ್‌ಮೆಂಟಲ್ ಆಕ್ಟಿವಿಟೀಸ್ ಕಡಿಮೆ ಆಗೇ ಆಗುತ್ತದೆ. ಅದಕ್ಕಾಗಿ ಪ್ರಿಯಾರಿಟಿ ಛೇಂಜ್ ಆಗಿಲ್ಲ. ಆದರೆ ನಿಮ್ಮ ಎಕ್ಸ್‌ಪೆಂಡಿಚರ್ ಕಡಿಮೆಯಾಯಿತು. ನಿಮ್ಮ ಪ್ಲಾನ್ ಔಟಲೇ ಕಡಿಮೆಯಾಗಿದೆ. ನಿಮ್ಮ ರಿಸೋರ್ಸ್ ಮೊಬಲೈಸೇಷನ್ ಕಡಿಮೆಯಾಗಿದೆ. ಇದನ್ನು ನೀವು ಒಪ್ಪಿಕೊಳ್ಳಬೇಕು. ಇದನ್ನೂ ಕೂಡ ಈ ಸದನದಲ್ಲಿ ನೀವು ಮಾನ್ಯ ಹೆಚ್.ಸಿ. ಬಾಲಕೃಷ್ಣ ಅವರು ಪ್ರಶ್ನೆಗೆ ಉತ್ತರ ಕೊಡುವಾಗ ತಾವೇ ಸ್ಪಷ್ಟವಾಗಿ ಹೇಳಿದ್ದೀರಿ. ರೂರಲ್ ಡೆವಲಪ್‌ಮೆಂಟ್‌ನಲ್ಲಿ ಏನು ಕಡಿತ, ಮೇಜರ್ ಮತ್ತು ಮೀಡಿಯಂ ಇರಿಗೇಷನ್‌ನಲ್ಲಿ, ಪವರ್‌ನಲ್ಲಿ, ಹೆಲ್ತ್‌ನಲ್ಲಿ ವೆಲ್‌ಫೇರ್ ಸ್ಕೀಂನಲ್ಲಿ ಎನ್ನತಕ್ಕಂಥದ್ದು ಇದೂ ಕೂಡ ಪ್ರಶ್ನೆ ಸಂಖ್ಯೆ : 367ಕ್ಕೆ 17-2-97ರಲ್ಲಿ ಈ ಪ್ರಶ್ನೆಗೆ ಉತ್ತರಿಸಿದ್ದೀರಿ. ಆದ್ದರಿಂದ ಇದಕ್ಕೂ ಕೂಡ ತಾವು ಸಮಾಧಾನಕಾರಕವಾದ ಉತ್ತರವನ್ನು

ನೀಡಲಿಲ್ಲ. ಬಹಳ ಜನರಲ್ಲಾಗಿ ಹೇಳಿಬಿಟ್ಟರಿ. ಆಮೇಲೆ ಎಕ್ಸೈಜ್ ರೂಲ್ಸ್. ಇನ್ನೂ ಕೂಡ ನನ್ನ ವಾದ ಇದೆ. ಇವತ್ತು ಸ್ಪೆಸಿಫಿಕ್ಕಾಗಿ ಅವರು ಏನು ಹೇಳುತ್ತಾರೆ ರೂಲ್ಸನ್ನು ಯಾವಾಗ ಅಮೆಂಡಮೆಂಟ್ ಮಾಡಿದೆ, ಹಿಂದೆ ನಮ್ಮ ಗೌರ್ನರ್ ರೂಲ್‌ನಲ್ಲಿ ಮತ್ತು ಹಿಂದೆ ಕಾಂಗ್ರೆಸ್ ಪಕ್ಷದ ಸರ್ಕಾರ ಇದ್ದಾಗ ಮತ್ತೆ ಇಲ್ಲಿಯವರೆಗೆ ಎಕ್ಸೈಜ್ ರೂಲ್ಸ್ ಇಟ್ಟುಕೊಂಡು ಎಂ.ಎಸ್.ಐ.ಎಲ್.ಗೆ ನಾವು ಸೋಲ್ ಏಜೆಂಟ್ ಮಾಡಿದರೆ ಅನುಕೂಲವಾಗುತ್ತದೆ ಎನ್ನುವ ವಾದವನ್ನು ಸುಪ್ರೀಂ ಕೋರ್ಟ್, ಹೈಕೋರ್ಟನಲ್ಲಿ ಮಂಡಿಸಿದ ಮೇಲೂ ಕೂಡ ಅದನ್ನು ಅಪ್‌ಹೆಲ್ಡ್ ಮಾಡಿದಮೇಲೂ ಕೂಡ ನೀವು ಏನು 30-12-96ಕ್ಕೆ ಏನು ಬದಲಾವಣೆ ಮಾಡುತ್ತಿದ್ದೀರಿ ಇದು ಸರಿಯಲ್ಲ. ಇದು ಪ್ರೈವೇಟ್ ಡಿಸ್ಟಲರಿಯವರಿಗೆ ಸಹಾಯ ಆಗುತ್ತದೆ. ಕೋಟ್ಯಾಂತರ ರೂಪಾಯಿ ಅವರಿಗೆ ಹೋಗುತ್ತದೆ. ನಿಮಗೆ ಬರತಕ್ಕ ಆದಾಯ ಬರುವುದಿಲ್ಲ ಎನ್ನತಕ್ಕಂಥ ಖಂಡಿತವಾದಂಥ ಆಪಾದನೆ ನನ್ನದಿದೆ. ಅದಕ್ಕಾಗಿ ಇದನ್ನು ನಾವು ಯಾವುದೇ ರೀತಿಯಿಂದ ಅಲ್ಲಗಳೆಯುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ. ಅದಕ್ಕಾಗಿ ನಾನು ಸ್ಪಷ್ಟವಾಗಿ ಹೇಳಿದ್ದು. ಈ ಡಿಸ್ಟಿಲರಿ ಓನರ್ಸ್‌ಗೆ ಸಪೋರ್ಟ್ ಕೊಟ್ಟ ಹಾಗೆ ಆಗುತ್ತದೆ. ಅದಕ್ಕೆ ತಾವು ಪುನಃ ಪರಿಶೀಲನೆ ಮಾಡಿ. ಆ ರೂಲ್ಸ್‌ನ್ನು ಅಮೆಂಡ್ ಮಾಡತಕ್ಕ ಅವಶ್ಯಕತೆ ಇಲ್ಲ. ತಾವು ವಿತಡ್ರಾ ಮಾಡಿ. ಬೇಕಾದರೆ ಇನ್ನೂ ಎಂ.ಎಸ್.ಐ.ಎಲ್.ಗೇ ಮಾಡಿ. ಇಲ್ಲ ಅಂದರೆ ಪ್ರತ್ಯೇಕವಾಗಿ ಕಾರ್ಪೊರೇಷನ್ನೇ ಮಾಡಿ. ಆ ರೀತಿ ಮಾಡಿ ಡಿಸ್ಟ್ರಿಬ್ಯೂಷನ್ ಸಿಸ್ಟಮನ್ನು ನಾವೇ ತೆಗೆದುಕೊಳ್ಳಬೇಕು. ಆದ್ದರಿಂದ 400-500 ಕೋಟಿ ರೂಪಾಯಿ ಈ ರಾಜ್ಯಕ್ಕೆ ಉಳಿತಾಯ ಆಗುತ್ತದೆ. ಮತ್ತು 700-800 ಕೋಟಿ ರೂಪಾಯಿ ಏನು ಕಟ್ ಆಗುತ್ತದೆ ಅದು ಆಗುವುದಿಲ್ಲ ಎನ್ನುವುದನ್ನು ನಾನು ಸ್ಪಷ್ಟಪಡಿಸುತ್ತೇನೆ. ಆಮೇಲೆ ಹೋಮ್ ಡಿಪಾರ್ಟ್‌ಮೆಂಟ್‌ನಲ್ಲಿ ಕೇಸ್‌ಗಳು ಬಹಳ ಕಡಿಮೆಯಾಗಿದೆ ಎಂದು ತಾವು ಹೇಳಿದಿರಿ. ತಮಗೆ ಗೊತ್ತಿದೆ, ಅನೇಕ ಸಾರಿ, ಮತ್ತು ಕೆಲವು ಸಲ ಇನ್‌ಫ್ಲುಯೆನ್ಸ್ ಮಾಡತಕ್ಕ ಮುಖಂಡರೂ ಇದ್ದಾರೆ. ಪೋಲೀಸ ಸ್ಟೇಷನ್ನಿಗೆ ಕೇಸೇ ಹೋಗುವುದಕ್ಕೆ ಬಿಡುವುದಿಲ್ಲ. ರಿಜಿಸ್ಟ್ರೇಷನ್ನೂ ಮಾಡಗೊಡುವುದಿಲ್ಲ. ಅಲ್ಲೇ ಅನೇಕ ರೀತಿಯಿಂದ ಸಮಜಾಯಿಸಿಕೊಂಡು ಅಟ್ರಾಸಿಟೀಸ್ ಮಾಡಿ ವಾಪಸ್ ಕರೆದುಕೊಂಡು ಬರುವವರೂ ಇರುತ್ತಾರೆ. ಅಥವಾ ಊರಲ್ಲಿ ಪಂಚಾಯಿತಿ ಮಾಡತಕ್ಕವರೂ ಇರುತ್ತಾರೆ. ಅದಕ್ಕಾಗಿ ಅದನ್ನೇ ದೊಡ್ಡದಾಗಿ ಅಂಕಿಸಂಖ್ಯೆ ತೆಗೆದುಕೊಂಡು ನನ್ನ ಕಾಲದಲ್ಲಿ ಹೆಚ್ಚಾಗಿಲ್ಲ ಎಂದು ಹೇಳಬೇಕಾಗಿಲ್ಲ. ಸಿಚುಯೇಷನ್ ಡಿಟೋರಿಯೇಟ್ ಆಗುತ್ತಾ ಇದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಲಾ ಅಂಡ್ ಆರ್ಡರ್ ಸಿಚುಯೇಷನ್ ದಿನೇದಿನೇ ಕೆಡುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಆದರೂ ಕೂಡ ತಾವು ಆ ಮಾತನ್ನು ಒಪ್ಪುತ್ತಿಲ್ಲ ಎನ್ನತಕ್ಕದ್ದು ಸರಿಯಲ್ಲ. ಇನ್ನೊಂದು ಫಿಸಿಕಲ್ ಅಂಡ್ ಫೈನಾನ್‌ಷಿಯಲ್. ಅಧ್ಯಕ್ಷರೇ, ಇವರು ನೀರಾವರಿ ಬಗ್ಗೆ ಹೇಳುವಾಗ ಫೈನಾನ್‌ಷಿಯಲ್ ಟಾರ್ಗೆಟ್ ಮಾತ್ರ ಹೇಳಿದರು. ಆರ್ಥಿಕ ಗುರಿ ಏನಿದೆ ಆ ಆರ್ಥಿಕ ಗುರಿ ಪ್ರಕಾರ ನಾವು ಖರ್ಚು ಮಾಡಿದ್ದೇವೆ. ಎರಡು ವರ್ಷದಲ್ಲಿ 1600 ಕೋಟಿ ರೂಪಾಯಿ ನಾವು ಖರ್ಚು ಮಾಡಿದ್ದೇವೆ. ಆದರೆ ಅದರ ಹಿಂದೆ ಬರೀ 4000 ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ ಎಂದು ಹೇಳಿದ್ದಾರೆ. ಆದರೆ ಅದರ ಜೊತೆಯಲ್ಲಿ ಫಿಸಿಕಲ್ ಟಾರ್ಗೆಟ್, ನಿಮ್ಮ ಗುರಿ ಏನಿತ್ತು ಎನ್ನತಕ್ಕಂಥದ್ದು ಬರಲಿಲ್ಲ. ಅದಕ್ಕಾಗಿ ನಾವು ಹಣ ಹೆಚ್ಚು ಖರ್ಚು ಮಾಡಿದ್ದೇವೆ, ಆದ್ದರಿಂದ ಕೆಲಸವೂ ಆಯಿತು ಎನ್ನುವುದಿಲ್ಲ. ಅದಕ್ಕೆ

ಆಗತಕ್ಕಂಥ ಇನ್‌ಫ್ಲೇಷನ್ ಮತ್ತೆ ಈ ಫಿಸಿಕಲ್ ಟಾರ್ಗೆಟ್ ಇವಕ್ಕೆ ಗುರುತಿಸಿ ಹೇಳಬಹುದಾಗಿತ್ತು. ಅದೂ ಕೂಡ ಇದರಲ್ಲಿ ಬರಲಿಲ್ಲ. ಇನ್ನೊಂದು ಶಬಭಾಸಗಿರಿ ಏನು ಕೊಟ್ಟರು ಅಂದರೆ ಕೇಂದ್ರದ ಸರ್ಕಾರದವರು ರೈಲ್ವೆ ಬಜೆಟ್‌ನಲ್ಲಿ ಸಾಕಷ್ಟು ಪ್ರಾವಿಷನ್ ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ಹೇಳಿದರು. ಆದರೆ ಮೂರು ನಾಲ್ಕು ಕೆಲಸ ಕಂಟಿನ್ಯೂ ಇರತಕ್ಕದ್ದು ಬಿಟ್ಟರೆ ಉಳಿದಂಥ ಕೆಲಸಗಳಿಗೆ ಬರೀ ಟೋಕನ ಗ್ರಾಂಟಾಗಿ ಆಗಿ ಒಂದು ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರ. ತಾವು ನೋಡಿದ್ದೀರೋ ಏನೋ. ಒಂದು ಲಕ್ಷ ಇಟ್ಟಿದ್ದಾರ. ಎಲ್ಲಿ ಕೆಲಸ 50 ಕೋಟಿ ರೂಪಾಯಿನದು ಇದೆ. 100 ಕೋಟಿ ರೂಪಾಯಿನದಿದೆ, 200 ಕೋಟಿ ರೂಪಾಯಿನದಿದೆ ಅಂಥ ಕೆಲಸಕ್ಕೆ ಟೋಕನ್ ಗ್ರಾಂಟ್ ಆಗಿ ಒಂದೊಂದು ಲಕ್ಷ ರೂಪಾಯಿ ಇಟ್ಟಿದ್ದಾರೆ. 7 ಕೆಲಸಕ್ಕೆ ಒಂದೊಂದು ಲಕ್ಷ ರೂಪಾಯಿ. ಅಂದರೆ ಅದು ರೈಲ್ವೆ ಬಜೆಟ್‌ನಲ್ಲಿ ನಮಗೆ ಕೊಟ್ಟಂಥ ಬೋನಸ್ಸಾ? ಅಥವಾ ನಮಗೆ ಕೊಟ್ಟಂಥ ಗಿಫ್ಟಾ? ಅಥವಾ ದೇಣಿಗೆಯಾ? ಏನಿದು? ಅದನ್ನು ತಾವು ತೆಗೆದುಕೊಳ್ಳಬೇಕಾಗುತ್ತದೆ. ಬರೀ ಸರ್ವೆಗೋಸ್ಕರ ಒಂದು ಲಕ್ಷ ರೂಪಾಯಿ ಇಟ್ಟಿದ್ದೇವೆ ಅಂತ ಹೇಳಿಕೊಂಡು ಇಡೀ ನಮ್ಮ 7 ಪ್ರಾಜೆಕ್ಟಗಳೂ ಕೂಡ ಬರುತ್ತವೆ ಎನ್ನತಕ್ಕದ್ದೇನೂ ಇಲ್ಲ. ಅದಕ್ಕೆ ಹಣವನ್ನೇ ಈವತ್ತಿನ ದಿವಸ ಒದಗಿಸಿಲ್ಲ ಎನ್ನತಕ್ಕ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಇಷ್ಟಕ್ಕೇ ನಾವು ಖುಷಿಪಡತಕ್ಕ ಅವಶ್ಯಕತೆ ಇಲ್ಲ ಎನ್ನತಕ್ಕಂಥ ಮಾತನ್ನೂ ಕೂಡ ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಎಲೆಕ್ಟ್ರಿಸಿಟಿ ಬಗ್ಗೆ ತಾವು ಹೇಳಿದಿರಿ. ನಮ್ಮ ಕಾಲದಲ್ಲಿ ಪ್ರಾರಂಭವಾದವುಗಳು ಈಗ ಬರುತ್ತಾ ಇವೆ, ಬಂದು ಇವತ್ತು ಮುಗಿಯುವ ಹಂತದಲ್ಲಿರಬಹುದು. ಕೆಲವು ಪ್ರಾರಂಭ ಆಗತಕ್ಕಂಥದ್ದಿರ ಬಹುದು. ಕೆಲವು ಅಗ್ರಿಮೆಂಟ್ ಆಗತಕ್ಕಂಥದ್ದಿರಬಹುದು. ಅದು ಎಲ್ಲರಿಗೂ ಕೂಡ ಗೊತ್ತಿರತಕ್ಕಂಥದ್ದು ತಾವೂ ಕೂಡ ಪ್ರಯತ್ನ ಮಾಡುತ್ತಿರಬಹುದು. ಆದರೆ ಒಂದು ಮಾತನ್ನು ಈ ಸದನದಲ್ಲಿ ನಾವು ಏನು ಎತ್ತಿದ್ದೇವೆ ಅದರ ಒಂದು ಮೆಸೇಜ್ ಇನ್ನೂ ಕೆಳ ಅಧಿಕಾರಿಗಳಿಗೆ ಹೋಗಿಲ್ಲ. ಅದಕ್ಕಾಗಿ ಹೆರಾಸ್ಮೆಂಟ್ ಪುನಃ ಮಾಡುತ್ತಿದ್ದಾರೆ. ಅದಕ್ಕಾಗಿ ಇಂಥದ್ದೆಲ್ಲಾ ಜನವಿರೋಧಿ ನೀತಿಯನ್ನು ತಾಳಿದಾಗ ಅಥವಾ ಧೋರಣೆಯನ್ನು ತಾಳಿದಾಗ ನಾವು ನ್ಯಾಚುರಲ್ಲಾಗಿ ಧರಣಿ ಮಾಡಬೇಕಾಗುತ್ತದೆ. ಅಜಿಟೇಷನ್ ಮಾಡಬೇಕಾಗುತ್ತದೆ. ಅದಕ್ಕಾಗಿ ಅವರು ಪದೇಪದೇ ನೀವು ನೆಲ ಕಚ್ಚಬೇಡಿರಿ, ನೀವು ನೆಲ ಹಿಡಿಯುತ್ತೀರಿ, ನಾವು ಮೇಲೆತ್ತಬೇಕು ಎಂದು ಏನು ಹೇಳುತ್ತಿದ್ದಾರೆ ನಿಮ್ಮ ಮೊಂಡುತನದ ಧೋರಣೆ ಇದ್ದಾಗ ನಾವು ಇಂಥದ್ದು ಮಾಡಲೇಬೇಕಲ್ಲ. ಪ್ರಜಾಪ್ರಭುತ್ವದಲ್ಲಿ ಇದೇ ದಾರಿ ಇದೆ. ಚರ್ಚೆ ಮಾಡಬೇಕು, ಇಲ್ಲವೇ ರೆಪ್ರಸೆಂಟೇಷನ್ ಮಾಡಬೇಕು, ಇಲ್ಲವೇ ನಿಮ್ಮ ಮನವೊಲಿಸಿ ಈ ರೀತಿಯಾಗಿದೆ ಎಂದು ಹೇಳಬೇಕು. ಇಷ್ಟೆಲ್ಲಕ್ಕೂ ಕೂಡ ನೀವು ಮಣಿಯದೇ ಇದ್ದಾಗ ಕೊನೆಗೆ ಮಹಾತ್ಮ ಗಾಂಧೀಜಿಯವರು ಹೇಳಿದಂಥ ಮಾರ್ಗದ ಮೇಲೆ ನಾವು ಧರಣಿಯನ್ನು ಇಲ್ಲಿ ಮಾಡಬೇಕಾಗುತ್ತದೆ. ಅದಕ್ಕಾಗಿ ತಾವು ಬರೀ ಧರಣಿಗೋಸ್ಕರ ಅವರು ಇಲ್ಲಿ ಬಂದಿದ್ದಾರೆ, ಎನ್ನತಕ್ಕಂಥ ಅಭಿಪ್ರಾಯವನ್ನು ಪದೇ ಪದೇ ಹೊರಗಡೆಗೆ ಕೊಡುತ್ತಿದ್ದಾರೆ. ಅಪೊಸಿಷನ್‌ನವರನ್ನು ಕರೆದರೆ ಏನು ಮಾಡುತ್ತಾರೆ? ಧರಣಿ ಮಾಡುತ್ತಾರೆ. ಇಲ್ಲವೇ ಟೈಮ್‌ವೇಸ್ಟ್ ಮಾಡುತ್ತಾರೆಂದು ಹೇಳುತ್ತಾರ. ತಮಗೇ ಗೊತ್ತಿದೆ, ಈಗ 15 ದಿವಸದಿಂದ ಸದನ ನಡೆದಿದೆ. ಒಂದೆರಡು ಸಂದರ್ಭದಲ್ಲಿ ಮಾತ್ರ ಧರಣಿ ಆಗಿರಬಹುದು. ಆ ಎರಡು ಮೂರು ಸಂದರ್ಭದಲ್ಲಿ ಯಾವುದಕ್ಕಾಗಿ ಧರಣಿ ಆಯಿತು? ನೀವು ಮಾಡಿದಂಥ ಒಂದು

ಅನ್ಯಾಯದ ಆರ್ಡರ್ ಏನಿತ್ತು ಎಲೆಕ್ಟ್ರಿಸಿಟಿಯದು ಅದರ ಬಗ್ಗೆ, ಇನ್ನೊಂದು ಹೌಸಿಂಗ್ ಬಗ್ಗೆ, ಇಂಥದ್ದು ಜನವಿರೋಧಿ ಧೋರಣೆಯನ್ನು ನಾವು ಏನು ತಾಳುತ್ತೀರಿ ಆಗ ಅಂಥ ಕಾಲಕ್ಕೆ ಮಾಡಲೇಬೇಕಾಗುತ್ತದೆ. ಬಾಕಿ ಟೈಂನಲ್ಲೂ ಕೂಡ ನಾವು ಸಾಕಷ್ಟು ಸಹಕಾರವನ್ನು ಅಧ್ಯಕ್ಷರು ನಮಗೆ ಯಾವ ಯಾವಾಗ ಆದೇಶ ಕೊಟ್ಟಿದ್ದಾರೋ ಆಗ ನಾವು ಕೊಟ್ಟುಕೊಂಡು ಬಂದಿದ್ದೇವೆ. ಆದರೆ ತಾವು ಪದೇಪದೇ ಧರಣಿ ಮಾಡಿಕೊಂಡು ಸಮಯ ಹಾಳು ಮಾಡುತ್ತಾರೆ ಎಂದು ಏನು ಹೇಳುತ್ತಿದ್ದೀರಿ ಅದೂ ಕೂಡ ಸರಿಯಿಲ್ಲ ಎನ್ನತಕ್ಕಂಥದ್ದನ್ನು ನಾನು ಹೇಳುತ್ತೇನೆ. ಇನ್ನು ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಒಂದು ಮಾತನ್ನು ಹೇಳಿದರು. ಏನು ಹೇಳಿದರು ಅಂದರೆ ನಿಮ್ಮ ಕಾಲದಲ್ಲೇ ಕಾನೂನನ್ನು ಸಡಿಲಗೊಳಿಸಿದಿರಿ, ಅದಕ್ಕೆ ನಾವು ತಂದಿದ್ದೇನೂ ತಪ್ಪಿಲ್ಲ ಎಂದು. ಆಗ ಏನಿತ್ತು? ಸೆಕ್ಷನ್ 79ಎ ಕೇವಲ ಒಂದು ಅಮೆಂಡ್‌ಮೆಂಟ್ ಏನೆಂದರೆ ದೇವರಾಜ ಅರಸರ ಕಾಲದಲ್ಲಿ ಭೂಸುಧಾರಣೆ ಕಾನೂನನ್ನು 74ರಲ್ಲಿ ತಂದಾಗ, ಆಗ 10 ಸಾವಿರ ರೂಪಾಯಿ ಇನ್‌ಕಮ್ ಲಿಮಿಟ್ ಇತ್ತು. 20 ವರ್ಷಕ್ಕೆ ಮತ್ತು ಈಗ ಹೋಲಿಸಿದಾಗ ಆ 10 ಸಾವಿರ ರೂಪಾಯಿಗೆ ಇವತ್ತಿನ ದಿವಸ ರಿಲೇಟೀವ್ಲಿ ರಿಯಲ್ ಟರ್ಮ್ಸ್‌ನಲ್ಲಿ ಎಷ್ಟಾಗಬಹುದು ಎನ್ನತಕ್ಕಂಥ ದೃಷ್ಟಿಯಿಂದ.....ಸಾಕಷ್ಟು ಜನ ನನಗೂ ಒತ್ತಾಯ ಮಾಡಿದರು ಎರಡು ಲಕ್ಷ ಮಾಡಿ ಎಂದು. ನಾನು ಆಗ ಮಣಿಯಲಿಲ್ಲ. ಲಿಬರ್‌ಲೈಸೇಷನ್ ಪಾಲಿಸಿ ಪ್ರಕಾರ ನೀವು ಮಾಡಿ ಎಂದು ಹೇಳಿ ನೀವು ಅಮೆಂಡ್‌ಮೆಂಟ್ ಏನು ತಂದಿದ್ದೀರಿ ಇದೆಲ್ಲವನ್ನೂ ಹೇಳಿದರು ನನಗೆ. ನಾನು ತಡೆಹಿಡಿದೆ. ಏಕೆಂದರೆ ಇದರ ಅನಾಹುತ ಜಾಸ್ತಿ ಇದೆ ಅಂತ ನನಗೆ ಗೊತ್ತು. ತಮಗೂ ಕೂಡ ಮುಂದೆ ಗೊತ್ತಾಗುತ್ತದೆ. ಇನ್ನೂ ಇದಕ್ಕೆ ನೀವು ಮೈಂಡ್ ಅಪ್ಲೈ ಮಾಡಿಲ್ಲ ಎನ್ನತಕ್ಕದ್ದನ್ನು ನಾನು ಹೇಳುತ್ತಿದ್ದೇನೆ. ನಾವು ಕೇವಲ ಒಂದೇ ಒಂದು ಸೆಕ್ಷನೆಗೆ ಏನು ತಂದಿದ್ದು, ಅಂದರೆ 10 ಸಾವಿರ ಇದ್ದುದನ್ನು 50.000 ಮಾಡಿದ್ದು, ಸ್ಕೂಲು ಮತ್ತು ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ಗೆ ಕೇವಲ ಎರಡು ಯೂನಿಟ್ ಎನ್ನತಕ್ಕಂಥದ್ದನ್ನು ತಂದಿದ್ದೇ ಹೊರತಾಗಿ ಬೇರೆ ಏನೂ ತರಲಿಲ್ಲ. ಆದರೆ ಇವತ್ತು ಏನು ಬಂದಿದೆ ಎಂದರೆ, ತಮ್ಮ ಪ್ರಕಾರ ಇದು ಇರುವುದು. ನಾನು ಎಲ್ಲವನ್ನೂ ಓದುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಈಗಾಗಲೇ ಅನೇಕ ಸಾರಿ ಹೇಳಿದ್ದೇವೆ. ಒಂದೇ ಒಂದು ಕೊನೆಯದು ಹೇಳುತ್ತೇನೆ. ಯಾವುದು ಸೆಕ್ಷನ್ 1091ಎ....

"Notwithstanding anything contained in subsection (1) the State Government may, in public interest and for reasons to be recorded in writing by notification exempt any extent of land for any specific purpose..." ಇಂಥ ಬ್ಲಾಂಕೇಟ್ ಆರ್ಡರ್‌ನ್ನು ಇವರು ತೆಗೆದುಕೊಂಡಿದ್ದಾರೆ. ಅಂದರೆ ಯಾವುದೇ ಕಾರಣಕ್ಕೆ ಅಥವಾ ಪಬ್ಲಿಕ್ ಪರ್ಪಸ್‌ಗೆ ಅಥವಾ ಯಾವುದಾದರೂ ಒಂದು ಇಂಡಸ್ಟ್ರಿಗೆ ಮನಸ್ಸು ಬಂದಹಾಗೆ ಅವರಿಗೆ ಕನ್ವಿನ್ಸ್ ಆದರೆ ಎಷ್ಟು ಎಕರೆಯಾದರೂ ಕೊಡಬಹುದು. ಇದೇನು ಹಿಂದೆ ಇತ್ತಾ? ಆ ದೃಷ್ಟಿಯಿಂದ ಇವತ್ತು ನಾವು ಹೇಳುತ್ತಿದ್ದೇವೆ ಎರಡು ಲಕ್ಷ ರೂಪಾಯಿ ಇನ್‌ಕಮ್ ಲಿಮಿಟನ್ನು ಏರಿಸಿದರು. 1992ರಲ್ಲಿ ಆಗಿತ್ತು. ಎರಡು ವರ್ಷದಲ್ಲೇ ಇದನ್ನು ಮಾಡತಕ್ಕಂಥ ಅವಶ್ಯಕತೆ ಇರಲಿಲ್ಲ. ಹೀಗೆ ಅದಕ್ಕೆ ಟ್ವಿಸ್ಟ್‌ಮಾಡಿ ಹೇಳತಕ್ಕಂಥಾದ್ದು ಸರಿಯಲ್ಲ. ಆದ್ದರಿಂದ ಇವತ್ತು ನಾನು ನೀವು ಕೊಟ್ಟಿರತಕ್ಕಂಥ, ಅಂಕಿಅಂಶಗಳ ಪ್ರಕಾರವೇ ಹೇಳುತ್ತಿದ್ದೇನೆ. ಮತ್ತು ನೀವು ಈ ಸದನದಲ್ಲಿ ಮಂಡಿಸಿದ್ದಂಥಾದ್ದು, ಅದಕ್ಕೆ ಬಹಳ ದೊಡ್ಡ

ಕೆಲಸ ಆಗಿದೆ ಎನ್ನತಕ್ಕಂಥಾದ್ದು ತಾವು ಹೇಳುತ್ತಿದ್ದೀರಿ, ಖಂಡಿತವಾಗಿ ಈ ಇಲಾಖೆಗಳಲ್ಲಿ ನಾನೇನು ಹೇಳಿದ್ದೇನೆ, ಅದರಲ್ಲೂ ಆಗಿಲ್ಲ. ಇವತ್ತು ಇಂಡಸ್ಟ್ರಿಯಲ್ಲಿ ಕೂಡ ಇನ್ವೆಸ್ಟಮೆಂಟ್ ಒಂದೇ ದಿವಸದಲ್ಲಿ ಬಂದಿಲ್ಲ. ಏನು ಜಿಂದಾಲ್ ಇವರಕಾಲದಲ್ಲಿ ಬಂತೇ? ಎಂ.ಆರ್.ಎಫ್. ಅಥವಾ ನಮ್ಮ ಮಂಗಳೂರಿನಲ್ಲಿರುವ ಬಿರ್ಲಾರವರದ್ದು ಬಂತಾ? ಅಥವಾ ಪೆಟ್ರೋ ಕೆಮಿಕಲ್ಸ್ ಇಂಡಸ್ಟ್ರಿಗಳು ಇವರ ಕಾಲದಲ್ಲಿ ಬಂತಾ? ಕೆಲವು ಹಂತಹಂತವಾಗಿ ಬರುತ್ತವೆ. ಅಥವಾ ರಾಜೇಶ್ವರಿ ಎಕ್ಸ್‌ಪ್ಯಾನಶನ್ ಸ್ಕೀಮ್‌ಗೆ ಇವರು ಅಪ್ರೂವಲ್ ಕೊಟ್ಟರೋ? ಅನೇಕ ಅಪ್ರೂವಲ್‌ಗಳನ್ನು ಹಿಂದಿನ ಸರ್ಕಾರ ಕೊಟ್ಟಿದೆ. ಕೆಲವು ಕೆಲಸಗಳು ನಡೆಯುತ್ತಲೇ ಇವೆ. ಅದಕ್ಕಾಗಿ ಬಹಳ ದೊಡ್ಡ ಸಾಧನೆ ಮಾಡಿದ್ದೇವೆ ಎಂದು ಅವರು ಏನು ಹೇಳಿಕೊಂಡಿದ್ದಾರೆ, ಅದಕ್ಕೇನೂ ಈ ಅಂಕಿಅಂಶ ಸಮರ್ಥನೆ ಕೊಡುತ್ತಾ ಇಲ್ಲ. ಅವರು ಕೂಡಿಸಿ ಹೇಳುತ್ತಿದ್ದಾರೆ. ಬಿಚ್ಚಿ ಬಿಚ್ಚಿ ಹೇಳಿಲ್ಲ, ಆ ಮಾತು ಬೇರೆ ಆದ್ದರಿಂದ ದಯವಿಟ್ಟು ಇದು ಒಂದು ಜನರಿಗೆ ತಪ್ಪು ತಿಳುವಳಿಕೆ ಕೊಡತಕ್ಕಂಥ ಒಂದು ಕೆಲಸ ಆಗಬಾರದು ಎನ್ನತಕ್ಕಂಥ ಮಾತನ್ನು ಮತ್ತು ನಮ್ಮ ರೆಕಾರ್ಡ್ಸ್ ನೇರವಾಗಿ ಇರಬೇಕು ಎನ್ನತಕ್ಕಂಥ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಅದಕ್ಕೆ ಅವರು ಇನ್ನು ಮೇಲಾದರೂ ಕೂಡ ಇದನ್ನು ತಿದ್ದಿಕೊಂಡು ಹೇಳುತ್ತಾರೆ, ಅದು ಭಾವಿಸಿದ್ದೇನೆ, ಇಲ್ಲದಿದ್ದರೆ ನಾವು ಪ್ರಿವಿಲೇಜ್ ನೋಟೀಸ್‌ನ್ನು ತರಬೇಕಾಗುತ್ತದೆ. ಏಕೆಂದರೆ ಅವರು ಉತ್ತರ ಸದನದಲ್ಲಿ ಕೊಡುವುದೇ ಒಂದು, ಅಲ್ಲಿ ಹೇಳುವುದೇ ಒಂದು ಆದರೆ, ನಾವು ಎಲ್ಲವನ್ನೂ ಕೂಡ ಕೋಟ್ ಮಾಡಿ ನಿಮಗೆ ಕೊಡಬೇಕಾಗುತ್ತದೆ. ಅದು ಒಂದು ಪ್ರಿವಿಲೇಜ್ ಆಗಿಬಿಡುತ್ತದೆ. ಆದ್ದರಿಂದ ಇಂತಹ ಸತ್ಯಕ್ಕೆ ದೂರವಾದ ಹೇಳಿಕೆಗಳನ್ನು ಕೊಡತಕ್ಕಂಥದ್ದನ್ನು ಅವರು ಇನ್ನುಮೇಲಾದರೂ ತಪ್ಪಿಸಬೇಕು. ಈಗ ಗಾಂಧಿಯವರ ಫಿಲಾಸಫಿ ಹೇಳಿದರು, ಆಮೇಲೆ ನೆಹರೂ ಅವರ ಫಿಲಾಸಫಿ ಹೇಳಿದರು. ಬರ್ನಾರ್ಟಂಡ ರೆಸೆಲರವರದು ಹೇಳಿದರು, ಆಮೇಲೆ ಕಾರ್ಲ್‌ಮಾರ್ಕ್ಸ್‌ರವರದು ಹೇಳಿದರು. ಎಲ್ಲರದ್ದೂ ಫಿಲಾಸಫಿ ಬಂತು.ಹಾಗೆ ಬಂದಮೇಲೆ ಹಾಗೆ ಸ್ವಲ್ಪ ನಡೆದುಕೊಳ್ಳುವುದಕ್ಕೆ ಕಲಿಯಿರಿ ಅಂತ ನಾವು ಅವರಿಗೆ ಹೇಳುತ್ತಿರುವುದು. ಬರೀ ಹೇಳುವುದು ಬೇಡ. 'ಶಾಸ್ತ್ರ ಹೇಳೋದಕ್ಕೆ ಬದನೆಕಾಯಿ ಉಣ್ಣಾಕೆ' ಇದು ಆಗಬಾರದು. ಆದ್ದರಿಂದ ಶಾಸ್ತ್ರ ಹೇಳಿದಹಾಗೆ ನಡೆದುಕೊಂಡರೆ ಅದಕ್ಕೆ ಏನಾದರೂ ಬೆಲೆ ಬರುತ್ತದೆ. ಇಲ್ಲದಿದ್ದರೆ ಬೆಲೆ ಬರುವುದಿಲ್ಲ ಎನ್ನುವ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಆದ್ದರಿಂದ ಈ ಅಂಕಿಅಂಶಗಳನ್ನು ನಾವೇನು ಕೊಟ್ಟಿದ್ದೇವೆ, ಇದರ ಬಗ್ಗೆ ಅವರದ್ದು ಸ್ಪಷ್ಟವಾದಂಥ ಉತ್ತರ ಬರಬೇಕಾಗಿತ್ತು. ಅದು ಬಂದಿಲ್ಲ. ಇನ್ನು ಮೇಲಾದರೂ ಕ್ಲಾರಿಫಿಕೇಶನ್‌ನಲ್ಲಿ ಕೊಡಬೇಕೆಂದು ಅಂತ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಈ ಕಡೆಗೆ ಗಮನ ಕೊಟ್ಟರೆ ಒಳ್ಳೆಯದು. ತಮ್ಮ ಸರ್ಕಾರ ಒಂದು ಘೋಷಣೆ ಮಾಡಿತ್ತು. 1995-96ನೇ ಸಾಲಿನಲ್ಲಿ ಯಾರು ಸಹಕಾರ ಸಂಘಗಳಿಂದ ಸಾಲ ತೆಗೆದುಕೊಂಡಿದ್ದಾರೆ, ಸಮಯಕ್ಕೆ ಸರಿಯಾಗಿ ಹಣ ಪಾವತಿ ಮಾಡಿದ ರೈತರಿಗೆ 5 ಪರ್ಸೆಂಟ್ ರಿಯಾಯ್ತಿ ಬಡ್ಡಿಯಲ್ಲಿ ಕೊಡುತ್ತೇವೆ, ಎಂದು ಹೇಳಿತ್ತು. ಇದುವರೆಗೂ ರೈತರಿಗೆ ಆ 5 ಪರ್ಸೆಂಟ್ ರಿಯಾಯಿತಿ ಹಣವನ್ನು ನೀವು ವಾಪಾಸ್ಸು ಕೊಟ್ಟಿಲ್ಲ. ಇದು ನಾನು ಹೊಸದಾಗಿ ಕೇಳುತ್ತಿಲ್ಲ. ಇದು ನಿಮ್ಮ ಸರ್ಕಾರದ ಒಂದು ಪಾಲಿಸಿ ಮ್ಯಾಟರ್. ರೈತರು ಯಾರು ಸಕಾಲದಲ್ಲಿ ಹಣ ಪಾವತಿ ಮಾಡುತ್ತಾರೆ, ಅವರಿಗೆ 5 ಪರ್ಸೆಂಟ್ ಬಡ್ಡಿ ರಿಯಾಯ್ತಿ ಕೊಡುತ್ತೇವೆ ಅಂತ

ಹೇಳಿದಿರಿ. 1995-96ರಲ್ಲಿ ರೈತರಲ್ಲ ದುಡ್ಡು ಕಟ್ಟಿದರು. ಬಡ್ಡಿಯನ್ನೂ ಕಟ್ಟಿಯಾಯಿತು. ಆದರೆ ಈ ನಿಮಿಷದವರೆಗೆ 1995-96 ನೇ ಸಂಬಂಧಪಟ್ಟಂತೆ ಈಗ 5 ಪರ್ಸೆಂಟ್ ರಿಯಾಯ್ತಿ ಹಣವನ್ನು ವಾಪಸ್ಸು ಕೊಡಲಿಲ್ಲ, ಇದು ಮೊದಲನೆಯದು. ಈ ವರ್ಷ ರಾಜ್ಯಪಾಲರ ಭಾಷಣದಲ್ಲೂ ಇಲ್ಲದೇ ಇರುವುದರಿಂದ, ಸಹಕಾರ ಮಂತ್ರಿಗಳು ಈಗಾಗಲೇ ಘೋಷಣೆ ಮಾಡಿದ್ದಾರೆ. ಈ ವರ್ಷ ಸಹ ಸಮಯಕ್ಕೆ ಸರಿಯಾಗಿ ಯಾರು ಸಹಕಾರಿ ಸಾಲ ಮರುಪಾವತಿ ಮಾಡುತ್ತಾರೆ, 5 ಪರ್ಸೆಂಟ್ ರಿಯಾಯ್ತಿ ಕೊಡುತ್ತೇವೆ ಅಂತ ಈಗಾಗಲೇ ಘೋಷಣೆ ಮಾಡಿರುವಂತೆ 95-96 ರದ್ದು 5 ಪರ್ಸೆಂಟ್ ರಿಯಾಯ್ತಿ ಹಣವನ್ನು ರೈತರಿಗೆ ತಕ್ಷಣ ವಾಪಾಸ್ಸು ತುಂಬಿ ಕೊಡುತ್ತೀರಾ? ಈ ವರ್ಷವೂ ಅದನ್ನು ಅನ್ವಯ ಮಾಡುತ್ತೀರಾ? ಇದು ಮೊದಲನೆಯದು. ಇದರ ಬಗ್ಗೆ ಸ್ಪಷ್ಟವಾದ ಉತ್ತರಬೇಕು. ಎರಡನೆಯದಾಗಿ, ನಮಗೆ ತೊಂದರೆಯಾಗುತ್ತಿರುವುದು, ಈ ಎ.ಪಿ.ಎಂ.ಸಿ. ರಸ್ತೆಗಳನ್ನು ತುಂಬಾ ಉತ್ಸಾಹದಲ್ಲಿ ಐವತ್ತೈವತ್ತು ಕಿಲೋಮೀಟರನ್ನು ಪ್ರತಿ ತಾಲ್ಲೂಕಿನಲ್ಲಿ ನೀವು ತೆಗೆದುಕೊಂಡುಬಿಟ್ಟಿರಿ. ಹಣ ಇಲ್ಲದೇನೆ, ತಾಲ್ಲೂಕು ಪಂಚಾಯಿತಿಗೆ ಸಂಬಂಧಪಟ್ಟ ರಸ್ತೆಗಳನ್ನು ಕೊಟ್ಟಾಗಿ ಬಿಟ್ಟಿದೆ; ಎಪಿಎಂಸಿ.ಗೆ ಈ ವರ್ಷದ ಕಾಮಗಾರಿಕೆಯಲ್ಲಿ ನಾವು ತೆಗೆದುಕೊಳ್ಳುವುದಕ್ಕೆ ಹೇಳಿದರೆ, ಇದು ಆಗಲೇ ಎ.ಪಿ.ಎಂ.ಸಿ.ಗೆ ವರ್ಗಾವಣೆ ಮಾಡಿಬಿಟ್ಟಿದ್ದೇವೆ ಅಂತ ಹೇಳುತ್ತಾರೆ. ಎ.ಪಿ.ಎಂ.ಸಿ.ಗೆ ವರ್ಗಾವಣೆ ಮಾಡಿದ್ದೇವೆ, ಜಿಲ್ಲಾ ಪರಿಷತ್ತಿನಲ್ಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ ಅಂತ ಹೇಳುತ್ತಾರೆ. ಇಲ್ಲಿ ಎ.ಪಿ.ಎಂ.ಸಿ. ಯಲ್ಲಿ ಈ ಹಣವನ್ನು ಕೊಟ್ಟು, 50 ಕಿಲೋಮೀಟರ್ ತೆಗೆದುಕೊಂಡಿರುವುದನ್ನಾದರೂ ಪ್ರತಿ ತಾಲ್ಲೂಕಿನಲ್ಲಿ ಪೂರ್ಣಮಾಡುತ್ತೀರಾ ಎನ್ನುವುದು ನಮಗೆ ಸ್ಪಷ್ಟವಾಗಿಲ್ಲ. ರೈತರ ಹಿತದೃಷ್ಟಿಯಿಂದ, ಗ್ರಾಮೀಣ ಜನರ ಬದುಕಿನ ಪ್ರಶ್ನೆ ಇದಾಗಿರುವುದರಿಂದ, ಇದು ಎರಡೂ ಪ್ರಶ್ನೆಗಳಿಗೆ ನೇರವಾದ ಉತ್ತರ ಬೇಕು. ಒಂದು 95-96ರ ಅವಧಿಯ 5 ಪರ್ಸೆಂಟ್ ರಿಯಾಯ್ತಿಯನ್ನು ತುಂಬಿಕೊಡುವಂಥಾದ್ದು. ಮತ್ತು ಈ ವರ್ಷಕ್ಕೂ ಅದನ್ನು ಕಾರ್ಯರೂಪಕ್ಕೆ ತರುತ್ತೀರಾ ಎನ್ನುವಂಥಾದ್ದು. ಎ.ಪಿ.ಎಂ.ಸಿ. ರಸ್ತೆ ಬಗ್ಗೆ ಆಕಸ್ಮಾತ್ ಹಣ ಇಲ್ಲದೆ ನಿಮಗೆ ಮಾಡುವುದಕ್ಕೆ ಆಗದೇ ಇದ್ದರೆ, ವಾಪಾಸ್ಸು ಜಿಲ್ಲಾ ಪರಿಷತ್ತಿಗಾದರೂ ಕೊಟ್ಟು ಆ ತಾಲ್ಲೂಕು ಪಂಚಾಯಿತಿ ದುಡ್ಡಿನಲ್ಲಾದರೂ ನಾವು ರಿಪೇರಿ ಮಾಡಿಸಿಕೊಳ್ಳುತ್ತೇವೆ. ಅದೂ ಇಲ್ಲದಂತಾಗಿದೆ. ಇವೆರಡರ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ನಾಗಪ್ಪ (ನಿಯಂತ್ರಿತ ಮಾರುಕಟ್ಟೆ ರಾಜ್ಯಮಂತ್ರಿ) : ಎ.ಪಿ.ಎಂ.ಸಿ.ದ್ದು ಈಗಾಗಲೇ ಲೆಟರ್‌ನ್ನು ಎಲ್ಲರಿಗೂ ಕಳಿಸಿಕೊಟ್ಟಿದ್ದೇವೆ. ಈಗಾಗಲೇ ಅದನ್ನು ಹತ್ತನೆ ತಾರೀಖಿನ ಒಳಗಡೆ ಸೆಕೆಂಡ್ ಇನ್‌ಸ್ಟಾಲಮೆಂಟ್‌ನ್ನು ನಾವು ಬಿಡುಗಡೆ ಮಾಡುತ್ತೇವೆ, ತಾವು ತಮ್ಮ ರಸ್ತೆಗಳನ್ನು ಕೊಡಬೇಕು ಎಂದು ಹೇಳಿ ಲೆಟರ್‌ನ್ನು ಕಳಿಸಿಕೊಟ್ಟಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ನಿಮ್ಮ ಮಾತನ್ನು ನಂಬಿ 50 ಕಿಲೋಮೀಟರ್ ರಸ್ತೆಯನ್ನು ಕೊಟ್ಟುಬಿಟ್ಟಿದ್ದೇವೆ. ದಯಮಾಡಿ ನನ್ನ ಪ್ರಶ್ನೆಯನ್ನು ಅರ್ಥಮಾಡಿಕೊಳ್ಳಿ. ಹೋದವರ್ಷ, ಐವತ್ತೈದು ಕಿಲೋಮೀಟರ್ ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಎ.ಪಿ.ಎಂ.ಸಿ. ಯಿಂದ ನಾವು ಮಾಡುತ್ತೇವೆ ಎಂದಿದ್ದಕ್ಕೆ ನಾವು ಕೊಟ್ಟುಬಿಟ್ಟಿದ್ದೇವೆ; ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ

ಪಂಚಾಯತಿಗೆ ಸೇರಿದ ರಸ್ತೆಗಳನ್ನು. ಈಗ ತಾಲ್ಲೂಕು, ಜಿಲ್ಲಾ ಪಂಚಾಯಿತಿ ದುಡ್ಡಿನಲ್ಲಿ ನಾವು ಬೇರೆ ಕಾಮಗಾರಿಗಳನ್ನು ಪ್ರಪೋಸ್ ಮಾಡುವ ಹಾಗೂ ಇಲ್ಲ. ನಿಮ್ಮ ಅಧಿಕಾರಿಗಳನ್ನು ಕೇಳಿದರೆ, ನಮ್ಮ ಹತ್ತಿರ ದುಡ್ಡಿಲ್ಲ, ನಾವು ಮಾಡುವುದಿಲ್ಲ ಎನ್ನುತ್ತಾರೆ. ಈಗ ತೆಗೆದುಕೊಂಡಿರುವ ಐವತ್ತೈದು ಕಿಲೋಮೀಟರನ್ನು ಪೂರ್ಣ ಮಾಡುತ್ತೀರೋ? ಅರ್ಧಂಬರ್ಧ ದುಡ್ಡು ಕೊಟ್ಟಿದ್ದಾರೆ ಅಷ್ಟೆ. ಇನ್ನು ಉಳಿದಿದ್ದನ್ನು ಮಾಡುತ್ತಿಲ್ಲ.

ಶ್ರೀ ಎಚ್. ನಾಗಪ್ಪ : ಈಗ ನಾವು ತೆಗೆದುಕೊಂಡಿರತಕ್ಕಂಥಾದ್ದು ನಿಜ. ಆದರೆ ನಾವು ಈಗಾಗಲೇ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಹೇಳಿ ಎಲ್ಲಾ ಸೆಕ್ರೆಟರಿಗಳನ್ನು ಮತ್ತು ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಮೀಟಿಂಗ್‌ಮಾಡಿ ನಮ್ಮಲ್ಲಿ ಅದನ್ನು ಮೈಂಟೇನ್ ಮಾಡುವುದಕ್ಕೆ ಸಾಧ್ಯವಿಲ್ಲ, ಅದಕ್ಕೆ ಅದನ್ನು ಪುನಃ ಜಿಲ್ಲಾ ಪಂಚಾಯ್ತಿಗೋ, ಪಿ.ಡಬ್ಲ್ಯೂ.ಡಿ. ಗೋ ಕೊಟ್ಟು ಮಾಡಿಸಬೇಕು ಎಂದು ತೀರ್ಮಾನ ತೆಗೆದುಕೊಳ್ಳುತ್ತಿದ್ದೇವೆ. ಆದಷ್ಟು ಜಾಗ್ರತೆ ಅದನ್ನು ತೆಗೆದುಕೊಂಡು ತಮಗೆ ಸರ್ಕ್ಯುಲರನ್ನು ಕಳಿಸಿಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮಗೆ ಆದರೆ ಮಾಡಿ, ಆಗದಿದ್ದರೆ ಈ ನಿಮಿಷಕ್ಕೆ ತಾವು ಸರ್ಕಾರಿ ಆಜ್ಞೆ ಮಾಡಿ ವಾಪಾಸ್ಸು ಕೊಟ್ಟುಬಿಡಿ. ನಾವು ಹೇಗಾದರೂ ಬದುಕಿಕೊಳ್ಳುತ್ತೇವೆ.

ಶ್ರೀ ಹೆಚ್. ನಾಗಪ್ಪ : ಇದನ್ನು ಜಿಲ್ಲಾ ಪಂಚಾಯತಿ ಅಥವಾ ಪಿ.ಡಬ್ಲ್ಯೂ.ಡಿ. ಮುಖಾಂತರವಾದರೂ ಮಾಡಿಸಬೇಕು.

(ಗೊಂದಲ)

ಮಾನ್ಯ ಸದಸ್ಯರು : ಕೋರ್ಟಿನಲ್ಲಿ ಸ್ಟೇ ಇದೆ. ಅದರ ಬಗ್ಗೆ ಏನು ಹೇಳುತ್ತಾರೆ?

ಶ್ರೀ ಹೆಚ್. ನಾಗಪ್ಪ : ಮಾರ್ಚ್ ತಿಂಗಳಲ್ಲಿ 15 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದೇವೆ. ಆದರೆ ಮೇನ್‌ಟೆನೆನ್ಸ್ ನಾವು ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ಕಾರಣಕ್ಕೋಸ್ಕರವಾಗಿ ಅದಕ್ಕೆ ಸಂಬಂಧಪಟ್ಟಂಥ ಸೆಕ್ರೆಟರಿ ಇವರುಗಳನ್ನೆಲ್ಲ ಕರೆಸಿ, ಅದನ್ನು ನಾವು ಮಾಡುವುದಿಲ್ಲ, ಮೇಯೆಂಟೆನೆನ್ಸ್ ನೀವೇ ಮಾಡಿಕೊಳ್ಳಿ ಅಂತ ಬಿಡುತ್ತಿದ್ದೇವೆ. ಮತ್ತೆ ಮುಂದೆ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ನಮ್ಮ ಕೈಯಲ್ಲಿ ಸಾಧ್ಯವಾಗುವುದಿಲ್ಲ. ಆದ್ದರಿಂದ ಜಿಲ್ಲಾ ಪಂಚಾಯತ ಅಥವಾ ಪಿ.ಡಬ್ಲ್ಯೂ.ಡಿ. ಮುಖಾಂತರ ನಾವು ಮಾಡಿಸುತ್ತೇವೆ. ಅದಕ್ಕೆ ದುಡ್ಡನ್ನು ನಾವು ಜಿಲ್ಲಾ ಪಂಚಾಯತಗೆ ಮತ್ತು ಪಿ.ಡಬ್ಲ್ಯೂ.ಡಿ. ಗೆ ಲಿಮಿಟ್ ಮಾಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಇನ್ನೊಂದು ನೀವು ಹೇಳಲಿಲ್ಲ. ಕೋಪರೇಟಿವ್ ಲೋನ್‌ನ್ನು ಯಾರು ರೈತರು ಸಮಯಕ್ಕೆ ಸರಿಯಾಗಿ ಅಸಲು ಮತ್ತು ಬಡ್ಡಿಯನ್ನು ಕಟ್ಟಿದರೋ, ಅವರಿಗೆ 95-96 ಅವಧಿಯ ಪರ್ಸೆಂಟ್ ರಿಯಾಯಿತಿಯನ್ನು ಇದುವರೆಗೂ ಪಾವತಿ ಮಾಡಿಲ್ಲ. ಅದನ್ನು ಕೂಡಲೇ ಪಾವತಿ ಮಾಡುವುದಕ್ಕಾದರೂ ತಾವು ಆದೇಶ ಕೊಡುತ್ತೀರಾ? ಇದು ಪಾಲಿಸಿ ಡಿಸಿಶನ ಆಗಿದೆ, ನಾವು ಹೇಳಿದರೆ ಸಾಕು. ತಮ್ಮ ಸರ್ಕಾರ ಇದನ್ನು ಘೋಷಣೆ ಮಾಡಿ, ರೈತರು ದುಡ್ಡನ್ನು ಕಟ್ಟಿಯಾಗಿದೆ, ಅದನ್ನು ಈ ವರ್ಷ ಅನ್ವಯ ಮಾಡುತ್ತೀರೋ ಇಲ್ಲವೋ?

ಶ್ರೀ ಜೆ. ಎಚ್. ಪಟೇಲ್ : ಅದು ಹೇಳುತ್ತೇವೆ.

ಉಪಾಧ್ಯಕ್ಷರು : ಮತ್ತೆ ಮುಂದಿನವರು ಯಾರಾದರೂ ಕೇಳಿರಿ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿ ತಮ್ಮ ಉತ್ತರದಲ್ಲಿ, ತಮ್ಮ ಸರ್ಕಾರ ಒಂದು ಎರಡು ವರ್ಷದಲ್ಲಿ ಸುಮಾರು 1200 ಕೋಟಿ ರೂಪಾಯಿಗಳನ್ನು ನೀರಾವರಿಗೋಸ್ಕರ ಖರ್ಚು ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ಈಗ ನಮ್ಮ ಅವಧಿ ಎರಡು ವರ್ಷ ಕಳೆದು ಇನ್ನು ಮೂರು ವರ್ಷ ಇದೆ. ಆದ್ದರಿಂದ ತಮ್ಮಮೇಲೆ ಹೆಚ್ಚಿನ ಜವಾಬ್ದಾರಿಕೆ ಇದೆ. ಬಚಾವತ್ ತೀರ್ಪಿನ ಅನ್ವಯ ಇನ್ನು ನಾಲ್ಕು ವರ್ಷಗಳಲ್ಲಿ ನಮ್ಮ ಸಂಪೂರ್ಣ ಹಕ್ಕನ್ನು ನಾವು ಸಾಧಿಸಬೇಕಾಗಿದೆ. ಇವತ್ತು ನಮ್ಮ ಸಂಪೂರ್ಣ ಹಕ್ಕಿನ ನೀರಿನ ಬಳಕೆ ಮಾಡಬೇಕಾದರೆ, ಈಗಾಗಲೇ ಹಿಂದೆ ನಾವು ನೀವು ಸೇರಿ ಖರ್ಚುಮಾಡಿರುವುದನ್ನು ಬಿಟ್ಟು, ಇನ್ನು ಆರುಸಾವಿರ ಕೋಟಿ ರೂಪಾಯಿ ಸಂಪನ್ಮೂಲ ಬೇಕಾಗುತ್ತದೆ. ತಾವು ಮಾತನಾಡಬೇಕಾದರೆ 1200 ಕೋಟಿ ರೂಪಾಯಿ ಸಾಧನೆ ಮಾಡಿದ್ದೇವೆ. ಎನ್ನತಕ್ಕಂಥ ಮಾತನ್ನು ಇಲ್ಲಿ ಹೇಳಿದ್ದೀರಿ. ಆದರೆ ನೀರಿನ ಜವಾಬ್ದಾರಿಕೆ ನಿಮ್ಮಮೇಲೆ ಇದೆ. ನಮ್ಮ ಹಕ್ಕನ್ನು ಉಳಿಸಿಕೊಳ್ಳಬೇಕಾದರೆ ಯಾವರೀತಿಯಾಗಿ 6000 ಕೋಟಿ ಸಂಪನ್ಮೂಲವನ್ನು ತರುತ್ತೇವೆ ಎಂದು ಕೂಡ ಹೇಳಬೇಕು. ಅದು ಬಹಳ ಮುಖ್ಯವಾದಂಥ ಪ್ರಶ್ನೆಯಾಗಿದೆ. ಇನ್ನೊಂದು ಬಹಳ ಮುಖ್ಯವಾಗಿರುವುದು ಎಂದರೆ, ಈಗಾಗಲೇ ನಮಗೆ 729 ಟಿ.ಎಂ.ಸಿ. ನೀರಿನ ಅಧಿಕಾರಿ ಬಚಾವತ್ ತೀರ್ಪಿನ ಅನ್ವಯ ಇದೆ, ಅದರ ಸಂಪೂರ್ಣ ಬಳಕೆಗೋಸ್ಕರ ಈಗಾಗಲೇ ಯೋಜನೆಗಳನ್ನು ಮಾಡಿದ್ದೇವೆ. ಅದು ಎಷ್ಟು ಬಳಕೆ ಮಾಡಿದ್ದೇವೆ, ಬಳಕೆ ಮಾಡಬೇಕಾಗಿರತಕ್ಕಂಥಾದ್ದು, ಇನ್ನು ಮುಂದೆ ಕೆಲಸ ಆಗಿರಬೇಕಾಗಿರತಕ್ಕಂಥಾದ್ದು ಪ್ರಶ್ನೆ ಬೇರೆ. ಆದರೆ ನಿಮ್ಮ ಸ್ಕೀಮ್ 'ಎ' ಪ್ರಕಾರ ಈಗಲೂ ಕೂಡ ಸುಮಾರು 51 ಟಿ.ಎಂ.ಸಿ. ನೀರು ಉಳಿತಾಯ ಆಗುತ್ತಿದೆ. ಹೇಗೆ ಎಂದರೆ ಸುಮಾರು 28 ಟಿ.ಎಂ.ಸಿ. ನೀರು ತುಂಗಭದ್ರಾ ವ್ಯಾಲಿನಲ್ಲ ಬಳಕೆ ಆಗುತ್ತಿಲ್ಲ.

5.10 ಪಿ.ಎಂ

(ಸಭಾಧ್ಯಕ್ಷರಾದ ಶ್ರೀ ರಮೇಶ್‌ಕುಮಾರ್‌ರವರು ಪೀಠದಲ್ಲಿ ಉಪಸ್ಥಿತರಾದರು)

ಅದೇ ರೀತಿಯಾಗಿ, ತುಂಗಭದ್ರಾ ಪಿಲ್ಟ ಅಪ ಆಗುವುದರಿಂದ ಸುಮಾರು 21 ಟಿ.ಎಂ.ಸಿ. ನೀರು ಉಳಿಕೆಯಾಗುತ್ತದೆ. ಅಂದಾಗ, ಸ್ಕೀಮ್ "ಎ" ಅಡಿಯಲ್ಲಿಯೇ 51 ಟಿ.ಎಂ.ಸಿ.ನೀರು ಉಳಿಯತಕ್ಕಂಥ ಸಂದರ್ಭ ಇದೆ. ಅಲ್ಲದೆ, ಈ ಸ್ಕೀಮ್ ಪ್ರಕಾರ ಭೂಮಿಯಲ್ಲೂ ಕೂಡ, ಯಾವ ಯಾವ ರಾಜ್ಯದ ರೇಷಿಯೋ ಏನು ಎನ್ನುವುದೂ ಕೂಡ ತೀರ್ಮಾನವಾಗಿದೆ. ಮತ್ತೆ ಸ್ಕೀಮ್ 'ಎ' ಮತ್ತು ಸ್ಕೀಮ್ 'ಬಿ' ಅಡಿಯಲ್ಲಿ ಈಗಾಗಲೇ ನೀವೇ ಒಪ್ಪಿಕೊಂಡಿರುವ ರೀತಿಯಲ್ಲಿ ನಮ್ಮ ರಾಜ್ಯಕ್ಕೆ ಸುಮಾರು 180 ಟಿ.ಎಂ.ಸಿ. ಪಾಲು ಬರತಕ್ಕ ಎಲ್ಲಾ ಸಾಧ್ಯತೆಗಳಿವೆ. ಅಧ್ಯಕ್ಷರೇ ಮಾನ್ಯ ಪ್ರಧಾನಿಗಳಿದ್ದಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈಗಾಗಲೇ ಭದ್ರಾಯೋಜನೆ ಚಿತ್ರದುರ್ಗ ಮತ್ತು ತುಮಕೂರು ಭಾಗಕ್ಕೆ ನೀರು ಕೊಡತಕ್ಕ ದಿಸೆಯಲ್ಲಿ ಸರ್ವೆ ಕಾರ್ಯಕೂಡ ಮುಗಿದಿದೆ ಎಂದು ಹೇಳಿದ ಮಾತನ್ನು ನಾನು ಪತ್ರಿಕೆಯಲ್ಲಿ ನೋಡಿದ್ದೇನೆ. ತುಮಕೂರು ಮತ್ತು ಚಿತ್ರದುರ್ಗ ಭಾಗದಲ್ಲಿ ಜನ ಅತ್ಯಂತ

ಸಂಕಷ್ಟದಲ್ಲಿದ್ದಾರೆ. ಅವರ ಸಮಸ್ಯೆಯನ್ನು ಬಗೆಹರಿಸಬೇಕೆಂಬ ಚಿಂತನೆ ನಿಮಗೆ ಇದ್ದಿದ್ದೇ ಆದರೆ, ಮತ್ತು ಸ್ಕೀಮ್ 'ಎ' ನಲ್ಲಿ ಉಳಿಯತಕ್ಕ ನೀರು ಮತ್ತು ಸ್ಕೀಮ್ 'ಬಿ' ನಲ್ಲಿ ಬರಬೇಕಾಗಿರತಕ್ಕನೀರು, ಎರಡನ್ನೂ ಸೇರಿಸಿ, ಇವತ್ತು ಭದ್ರಾ ಮೇಲ್ದಂಡೆ ಯೋಜನೆ ಎಂದು ಮಾಡಿದ್ದಾರೆ. ಈಗಾಗಲೇ ಅದಕ್ಕೆ ತುಂಗಾ ತಿರುವು ಎಂದು ಹೇಳುತ್ತಿದ್ದಾರೆ. ನೀವು ಏನಾದರೂ ಹೆಸರು ಕೊಟ್ಟುಕೊಳ್ಳಿ. ಆದರೆ ಭದ್ರಾ ಮೇಲ್ದಂಡೆ ಯೋಜನೆ ಏನಿದೆ, ಅದರ ಹೆಸರನ್ನು ಬದಲಿಸತಕ್ಕ ಶಕ್ತಿ ಯಾರಿಗೂ ಇಲ್ಲ, ಮಾಡಲೂ ಬಾರದು. ಏಕೆಂದರೆ ಭದ್ರಾ ಕೊಡುವುದರಲ್ಲಿ ಏನೂ ಇಲ್ಲ. ಅದರಲ್ಲೇನೋ ರಾಜಕೀಯ, ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ದಯಮಾಡಿ ಕನಿಷ್ಟ ನೀವು100 ಟಿ.ಎಂ.ಸಿ. ನೀರನ್ನು ನಾವು ಕೊಡಿಸುತ್ತೇನೆ, ಉಳಿಸುತ್ತೇನೆ ಎಂಬ ಮಾತು ಹೇಳಬೇಕಾಗಿತ್ತು. ಅಲೋಕೇಷನ್ ಆಫ್ ವಾಟರ್ ಆಗಬೇಕಾಗಿರತಕ್ಕಂಥಾದ್ದು ಬಹಳ ಮುಖ್ಯ. ಅಲೋಕೇಷನ್ ಮಾಡಿ, ಈ ಯೋಜನೆಯನ್ನು ಇವತ್ತು ಸರ್ವೆ ಮಾಡುವ ಸಂದರ್ಭದಲ್ಲಿ, ಸಂಪೂರ್ಣವಾದ ಸರ್ವೆ ಮಾಡಿಸಿ, ತುಮಕೂರು ಮತ್ತು ಚಿತ್ರದುರ್ಗ ಭಾಗಕ್ಕೆ ಹೆಚ್ಚಿನ ನೀರನ್ನು ಕೊಡಿಸತಕ್ಕಂತಾದ್ದಕ್ಕೆ, ಹೆಚ್ಚಿನ ಅಲೋಕೇಶನ್ ಮಾಡುವುದಕ್ಕೆ ತೀರ್ಮಾನ ಮಾಡಿ. ಆ ಪ್ರಕಾರ ಸರ್ವೆ ಮಾಡಿಸಿ ಈ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೀರಾ? ಎಂಬ ಬಗ್ಗೆ ಉತ್ತರ ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಹಾತ್ಮಗಾಂಧಿ ಹೀಗೆ ಹೇಳಿದರು, ದೇಶ ಹಾಗಿತ್ತು ಎಂದು ಹೇಳುತ್ತಾ, ನಮ್ಮ ಯಾವುದೇ ಪ್ರಶ್ನೆಗೆ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕೆ ಹೋಗಲಿಲ್ಲ. ದೇಶದ ದಯನೀಯ ಪರಿಸ್ಥಿತಿ ಬಗ್ಗೆ ಇಬ್ಬರೂ ಚರ್ಚೆ ಮಾಡಿದರು. ಪರಿಹಾರ ಮುಂದೆ ಕಂಡುಹಿಡಿದುಕೊಳ್ಳೋಣ ಎಂದು ಹೇಳಿದರು. ನಿಮ್ಮ ರಾಜ್ಯದ ಸ್ಥಿತಿ ಹೇಗೆ ಆಗಿದೆ, ಜನರ ಸ್ಥಿತಿ ಈ ರೀತಿ ಆಗಿದೆ, ಅದಕ್ಕೆ ಪರಿಹಾರ ಸೂಚಿಸಿ ಏನಾದರೂ ಉತ್ತರ ಕೊಡುತ್ತೀರಾ? ನಿಮ್ಮ ರಾಜ್ಯಪಾಲರ ಭಾಷಣದಲ್ಲಿ ಯಾವುದೂ ಸ್ಪಷ್ಟೀಕರಣ ಇಲ್ಲವಲ್ಲ ಎಂದು ಕೇಳಿದರೆ, ಅದುಬಿಟ್ಟು ಉಳಿದ ಎಲ್ಲದಕ್ಕೂ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಯಾವುದರ ಬಗ್ಗೆ ಕ್ಲಾರಿಫಿಕೇಷನ್ ಕೇಳಬೇಕೋ ನಮಗೆ ಅರ್ಥವಾಗುತ್ತಾ ಇಲ್ಲ.

ಶ್ರೀ ಜೆ. ಹೆಚ್. ಪಟೇಲ್ : ಇಲಾಖಾವಾರು ಏನೇನು ಅಚೀವ್‌ಮೆಂಟಾಗಿದೆ, ಎಂಬುದನ್ನೆಲ್ಲಾ ಹೇಳಿದ್ದೇನೆ. ಅವರು ಆಗ ಇರಲಿಲ್ಲವೆಂದು ಕಾಣುತ್ತೆ. ಎಲ್ಲಾ ಡಿಪಾರ್ಟ್‌ಮೆಂಟ್‌ನ ಮೇಲೂ ಉತ್ತರ ಕೊಟ್ಟಿದ್ದೇನೆ. ನಿದ್ದೆ ಬಂದಿದ್ದರೆ ಎಚ್ಚರಿಸಬಹುದು, ನೀವು ಮಲಗಿದಹಾಗೆ ಮಾಡಿದರೆ, ನಾನೇನು ಮಾಡುವುದಕ್ಕಾಗುತ್ತದೆ?

ಶ್ರೀ ಮಂಜುನಾಥ್ ಸಿ. ಕುನ್ನೂರ್ : ಸನ್ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ ಧಾರವಾಡದಲ್ಲಿ ಉಚ್ಚ ನ್ಯಾಯಾಲಯ ಪೀಠವನ್ನು ಸ್ಥಾಪನೆ ಮಾಡುವುದರ ಬಗ್ಗೆ, ಸರ್ಕಾರದ ಕ್ರಮದ ವಿಚಾರವಾಗಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ತಮ್ಮ ಮುಖೇನ ಕೇಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಈಗಾಗಲೇ ಸದನಕ್ಕೂ ತಿಳಿಸಿದ್ದೇವೆ. ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಿಗೂ ಪತ್ರ ಬರೆದಿದ್ದೇವೆ, ಕೇಂದ್ರಸರ್ಕಾರಕ್ಕೂ ಬರೆದಿದ್ದೇವೆ. ರಾಜ್ಯಸರ್ಕಾರದ ವತಿಯಿಂದ ಯಾವುದೇ ಪತ್ರವಾಗಲೀ, ರೆಕ್ಮಂಡೇಷನ್ ಆಗಲೀ ಮಾಡದೇ ಇಲ್ಲ. ಇಲ್ಲಿಯವರೆಗೆ ಸಂಪೂರ್ಣವಾಗಿ ಕಳುಹಿಸಿದ್ದೇವೆ; ಯಾವುದನ್ನೂ ನಿಲ್ಲಿಸಿಲ್ಲ.

ಶ್ರೀ ವಸಂತ್ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೇ, 1986 ನೇ ಇಸವಿಯಲ್ಲಿ ಜಿಲ್ಲಾ ಪಂಚಾಯ್ತಿಗಳು ಅಸ್ತಿತ್ವಕ್ಕೆ ಬಂದವು. ಸಂದರ್ಭದಲ್ಲಿ ರಾಜ್ಯದಲ್ಲಿ ಸುಮಾರು 106 ಖಾಸಗಿ ಪ್ರೌಢಶಾಲೆಗಳು ಮಂಜೂರಾಗಿದ್ದವು. ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 11 ಖಾಸಗಿ ಪ್ರೌಢಶಾಲೆಗಳು ಅನುದಾನ ಸಹಿತ ಎಂದು ಮಂಜೂರಾತಿಯಾಗಿದ್ದವು. ಅದರ ಬಗ್ಗೆ ಮಾನ್ಯ ಸಚಿವರು ಹೇಳಿದಾಗ, ನಮ್ಮಲ್ಲಿ ಹಣ ಇಲ್ಲವೆನ್ನುವ ರೀತಿಯಲ್ಲಿ ನನಗೆ ಉತ್ತರ ಕೊಟ್ಟಿದ್ದರು. ನಾನು ಒಂದು ಸಲಹೆಯನ್ನು ಕೊಡುತ್ತಿದ್ದೇನೆ. ಪ್ರತಿ ವರ್ಷ ನೀವು 100 ಸರ್ಕಾರಿ ಪ್ರೌಢ ಶಾಲೆಗಳನ್ನು ತೆರೆಯುತ್ತಿದ್ದೀರಿ. ಹೋದ ವರ್ಷ ಅಂದರೆ 1995-96ನೇ ಇಸವಿಯಲ್ಲಿ ಸಾಧಾರಣ 100 ಸರ್ಕಾರಿ ಪ್ರೌಢಶಾಲೆಗಳನ್ನು ತೆರೆದಿದ್ದೀರಿ. ನನ ಸಲಹೆ ಏನೆಂದರೆ, ಪ್ರತಿ ವರ್ಷ 25 ಖಾಸಗಿ ಶಾಲೆಗಳಿಗೆ ತಾವು ಅನುದಾನ ಕೊಟ್ಟು ಸಹಕರಿಸಬೇಕಾಗಿ ನಾನು ತಮ್ಮಲ್ಲಿ ಕೇಳುತ್ತಿದ್ದೇನೆ. ಇನ್ನೊಂದು ಪ್ರಶ್ನೆ ಸೀಗಡಿ ಕೃಷಿ ಬಗ್ಗೆ ಈಗಾಗಲೇ ಸುಪ್ರೀಂ ಕೋರ್ಟ್ ಆರ್ಡರ್ ಬಂದಿದೆ, ಮಾರ್ಚ್ 31ರೊಳಗೆ ಈ ಸೀಗಡಿ ಕೃಷಿಯನ್ನು ಬಂದ್ ಮಾಡಬೇಕು ಎಂದು ಆಜ್ಞೆಬಂದಿದೆ. ನನ್ನ ಸಲಹೆ ಏನೆಂದರೆ, ತಾವು ಹಾಲಿ ಕೇಂದ್ರಸರ್ಕಾರದಲ್ಲಿ ನಮ್ಮ ರಾಜ್ಯದವರೇ ಪ್ರಧಾನಿಗಳಿದ್ದಾರೆ. ತಾವು ಸಲಹೆ ಮಾಡಿ. ಏಕೆಂದರೆ ಸೀಗಡಿ ಕೃಷಿಯಲ್ಲಿ ಸುಮಾರು 25 ಸಾವಿರ ಜನರು ಕೆಲಸ ಮಾಡುತ್ತಿದ್ದಾರೆ. ಒಂದುವರ್ಷಕ್ಕೆ ಸುಮಾರು 200 ಕೋಟಿ ರೂಪಾಯಿಗಳ ವಿದೇಶಿ ವಿನಿಮಯ ಆಗುತ್ತಾ ಇದೆ. ಸುಮಾರು 200 ಕೋಟಿ ವೆಚ್ಚ ಈಗಾಗಲೇ ಆಗಿದೆ. ಕರ್ನಾಟಕ ರಾಜ್ಯದಲ್ಲಿ ಒಂದು ಸಾವಿರ ಹೆಕ್ಟೇರ ಭೂಮಿಯನ್ನು ಈ ಸೀಗಡಿ ಕೃಷಿಗೆ ಕೊಟ್ಟಿದ್ದೇವೆ. ಆದ್ದರಿಂದ, ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ಈ ಕೋಸ್ಟಲ ರೆಗ್ಯುಲೇಷನ್ ಆಕ್ಟ ಏನಿದೆ, ಅದಕ್ಕೆ ತಿದ್ದುಪಡಿ ತರುವುದಕ್ಕೆ ಕೇಂದ್ರ ಸರ್ಕಾರದ ನಮ್ಮವರೇ ಪ್ರಧಾನ ಮಂತ್ರಿಗಳಿಗೆ ತಾವು ಸಲಹೆ ಮಾಡಬೇಕಾಗಿ ಕೇಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : 1-6-1987ರಿಂದ ಈಚೆಗೆ ಯಾವುದೇ ಪ್ರೌಢಶಾಲೆ ಅಥವಾ ಪ್ರಾಥಮಿಕ ಶಾಲೆಗೆ ಅನುಮತಿ ಕೊಟ್ಟಿದ್ದರೆ, ಅದು ಶಾಶ್ವತ ಅನುದಾನದ ಆಧಾರದ ಮೇಲೆ ಕೊಟ್ಟಿರತಕ್ಕಂಥಾದ್ದು, ಯಾವ ಪಾಠಶಾಲೆಗಳಿಗೂ ನಾವು ಅನುದಾನ ಕೊಟ್ಟಿಲ್ಲ. ಮಾನ್ಯ ಸ್ನೇಹಿತರು ಹೇಳಿದಹಾಗೆ, 1995-96ರಲ್ಲಿ ರಾಜ್ಯದಲ್ಲಿ ಯಾವುದೇ ಸರ್ಕಾರಿ ಪ್ರೌಢಶಾಲೆಗಳನ್ನು ಕೊಟ್ಟಿಲ್ಲ. 1995-97ರಲ್ಲಿ ಕೊಟ್ಟಿದ್ದೇವೆ. ಅವುಗಳಿಗೆ ಉಪಾಧ್ಯಾಯರನ್ನು ಮತ್ತು ಕಟ್ಟಡಗಳನ್ನು ಕೊಡುವುದಕ್ಕೆ ಸರ್ಕಾರ ತೀವ್ರವಾಗಿ ಯೋಚನೆ ಮಾಡುತ್ತಿದೆ.

ಶ್ರೀ ಜಯಪ್ರಕಾಶ್ ಹೆಗಡೆ : ಮಾನ್ಯ ಸದಸ್ಯರು ಸೀಗಡಿ ಕೃಷಿ ಬಗ್ಗೆ ಏನೊಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ನಾವು ಸುಪ್ರೀಂಕೋರ್ಟಿನ ಆದೇಶದ ಮೇಲೆ, ರಿವ್ಯೂ ಪಿಟಿಷನ್ ಫೈಲ್ ಮಾಡಿದೆ. ಅದಿನ್ನೂ ಸುಪ್ರೀಂಕೋರ್ಟಿನ ಮುಂದೆ ಪೆಂಡಿಂಗ್ ಇದೆ. ಅಲ್ಲಿ ತೀರ್ಮಾನವಾದ ಮೇಲೆ ಮುಂದಿನ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಸಭಾಧ್ಯಕ್ಷರೇ, ಮೊನ್ನೆ ನಾನು ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡುವಾಗ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪನೆಯಾಗಿರತಕ್ಕ ಬೃಹತ್ ಕೈಗಾರಿಕೆಗಳ ಬಗ್ಗೆ ಹಾಗೂ ಎಂ.ಆರ್.ಪಿ.ಎಲ್.ನ ಚಳುವಳಿಯಾದಾಗ, 24-12-95ರಂದು ಹಿಂದಿನ

ಮುಖ್ಯಮಂತ್ರಿಗಳಾದ ದೇವೇಗೌಡರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಎಲ್ಲಾ ಶಾಸಕರುಗಳನ್ನು ಕರೆಸಿ, ಕೆಲವು ನಿರ್ಣಯಗಳನ್ನು ತೆಗೆದುಕೊಂಡಿದ್ದರು. ಸುಮಾರು 19 ನಿರ್ಣಯಗಳನ್ನು ತೆಗೆದುಕೊಂಡಿದ್ದಾರೆ. ಸರ್ಕಾರಿ ಆದೇಶ ಕೂಡ ಹೊರಡಿಸಲಾಗಿದೆ. 29-12-1995ಕ್ಕೆ ಸರ್ಕಾರಿ ಆದೇಶದ ಪ್ರಕಾರ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇನ್ನು ಮುಂದೆ ಯಾವುದೇ ಬೃಹತ್ ಕೈಗಾರಿಕೆಗಳಿಗೆ ಪರವಾನಗಿ ಕೊಡುವುದರ ಮುನ್ನ ದಕ್ಷಿಣ ಜಿಲ್ಲೆಯ ಧಾರಣ ಶಕ್ತಿಯನ್ನು ಅಧ್ಯಯನ ಮಾಡುತ್ತೇವೆ ಎಂದು ಹೇಳುವಂಥ ಒಂದು ಸರ್ಕಾರಿ ಆದೇಶವನ್ನು ಹೊರಡಿಸಿದ್ದಾರೆ. ಅದರ ಜೊತೆಗೆ ಎಂ.ಆರ್.ಪಿ.ಎಲ್.ಗೆ ಸಂಬಂಧಿಸಿದಂತೆ, ಅನೇಕ ನಿಯಮಾವಳಿಗಳನ್ನು ಕೂಡ ರೂಪಿಸಿದ್ದಾರೆ. ಒಂಭತ್ತು ನಿಯಾಮಾವಳಿಗಳನ್ನು ರೂಪಿಸಿದ್ದಾರೆ. ಇವತ್ತಿನವರೆಗೆ ಆ ಸರ್ಕಾರಿ ಆದೇಶದ ಪಾಲನೆಯಾಗಿರುವುದಿಲ್ಲ. ಅದನ್ನು ಪಾಲನೆ ಮಾಡುತ್ತೀರೋ ಅಥವಾ ಇಲ್ಲವೋ ಎಂಬುದನ್ನು ಹೇಳಬೇಕು. ಇದರ ಜೊತೆಗೆ ಬಾರ್ಜಮೌಂಟೆಡ್ ಜನರೇಟರ್ಸ್ ಬಗ್ಗೆ ಪರಿಸರ ಮಾಲಿನ್ಯದ ವರದಿಯನ್ನು ಕೊಡಬೇಕೆಂದು ನಾವು ಕೇಳಿಕೊಂಡಿದ್ದೆವು. ಅದು ನಮ್ಮ ಕಮಿಟಿಯಲ್ಲೂ ಬಂದಿತ್ತು. ಆಗ ಕೇಳಿದರೂ ಕೂಡ, ಆ ಮಾಲಿನ್ಯ ವರದಿಯ ಬಗ್ಗೆ ಯಾವುದೇ ಪ್ರಸ್ತಾಪ ಮಾಡದೇ ಅದು ಒಳ್ಳೆಯದು, ಇದು ಒಳ್ಳೆಯದು ಎನ್ನುವಂಥ ಒಂದು ಸಾಂಕೇತಿಕಶಬ್ದವನ್ನು ಹೇಳಿ ನೀವು ಅಭಿವೃದ್ಧಿಗೆ ವಿರೋಧ ಮಾಡುತ್ತೀರಿ ಎನ್ನುವಂಥ ಒಂದು ಸಾಂಕೇತಿಕಶಬ್ಧವನ್ನು ಹೇಳಿ ನೀವು ಅಭಿವೃದ್ಧಿಗೆ ವಿರೋಧ ಮಾಡುತ್ತೀರಿ ಎನ್ನುವಂಥ ಒಂದೇ ಮಾತನ್ನು ಹೇಳುತ್ತಾರೆಯೇ ವಿನಹ, ಸ್ಪಷ್ಟವಾಗಿ ಇದರ ನಿಲುವನ್ನು ಅವರು ಹೇಳಲಿಲ್ಲ. ಆಮೇಲೆ ನಾನು ಈ ಹಿಂದೆ, ಕೆಲವು ಭ್ರಷ್ಟಾಚಾರದ ಬಗ್ಗೆ ನಿರ್ದಾಕ್ಷಿಣ್ಯವಾಗಿ, ನೇರವಾಗಿ ಆರೋಪ ಮಾಡಿದಾಗ ಇಲ್ಲವೆಂದು ಹೇಳಿದರು. ನಾನು ಈ ಹಿಂದೆ ಕಂದಾಯ ಇಲಾಖೆಯ ಮಂತ್ರಿಗಳಿಗೆ ನಿರ್ದಿಷ್ಟವಾಗಿ ಒಬ್ಬ ವಿಲೇಜ್ ಅಕೌಂಟೆಂಟ್ ಬಗ್ಗೆ ಬೆಂಗಳೂರು ಗ್ರಾಮಾಂತರ ಪ್ರದೇಶದ ನೂರಾರು ಎಕರೆ ಭೂಮಿಯನ್ನು ಮಾಡತಕ್ಕ ಅನ್ಯಾಯದ ಬಗ್ಗೆ ದಾಖಲೆ ಪತ್ರ ನಾನು ಕೊಟ್ಟಿದ್ದೆ. ಅದರ ಬಗ್ಗೆ ಇವತ್ತಿನವರೆಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಮತ್ತು ಸ್ಪಷ್ಟೀಕರಣವನ್ನು ಈ ಸದನಕ್ಕೆ ಕೊಟ್ಟಿಲ್ಲ. ಭ್ರಷ್ಟಾಚಾರ ಮಾಡಿದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಯಾವ ಕ್ರಮಕೈಗೊಂಡಿದ್ದೀರಿ ಎನ್ನುವ ಪ್ರಶ್ನೆಗೆ ಇವತ್ತಿನವರೆಗೆ ನಿರ್ದಿಷ್ಟ ಉತ್ತರ ಬರಲಿಲ್ಲ. ಇನ್ನು ಶಾಸಕರ ಮೇಲೆ ಸುಳ್ಳು ಆರೋಪ ಹೂಡಿ, ಕ್ರಿಮಿನಲ್ ಮೊಕದ್ದಮೆ ಹೂಡಿದ ಬಗ್ಗೆ ಸ್ಪಷ್ಟನೆ ಕೊಡಬೇಕೆಂದು...

ಅಧ್ಯಕ್ಷರು : ತೀರ್ಮಾನವಾದ ವಿಚಾರಗಳನ್ನೆಲ್ಲಾ ನೀವು ಮತ್ತೆ ಹೇಳುತ್ತಿದ್ದೀರಿ.

ಶ್ರೀ ಯು.ಆರ್. ಸಭಾಪತಿ : ಆಮೇಲೆ ಸಾರಾಯಿ ಮಾರಾಟದ ನಿಷೇಧದ ಬಗ್ಗೆ ಈ ಸಾರಿ ರಾಜ್ಯಪಾಲರ ಭಾಷಣದಲ್ಲಿ ಯಾವುದೇ ಪ್ರಸ್ತಾವನೆ ಇಲ್ಲ. ಅದನ್ನು ನೀವು ಕೈಬಿಟ್ಟಿದ್ದೀರಿ. ನೀವು ಸಾರಾಯಿ ಮಾರಾಟ ನಿಷೇಧವನ್ನು ಮಾಡುವುದೇ ಅದಲ್ಲಿ, ಆ ಮಾರಾಟಗಾರರಿಗೆ ಪುನರ್ ವಸತಿ ಮಾಡುವುದರ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆ. ಅದರ ಬಗ್ಗೆಯೂ ಮುಖ್ಯ ಮಂತ್ರಿಗಳು ಉತ್ತರ ಕೊಡಲಿಲ್ಲ. ಕೊನೆಯದಾಗಿ ಅವರು ಕೆಲವು ಮಾತುಗಳನ್ನು ಆಡಿದರು. ಮಧ್ಯಪಾನ ಮತ್ತು ಹೆಂಗಸರ ಬಗ್ಗೆ ಟಿ.ವಿ.ಯಲ್ಲಿ ಮಾತನಾಡುತ್ತಾ ಹೇಳಿದರು. ನಮ್ಮ ಊರಿನಲ್ಲಿರುವ ಕಾಲೇಜಿಗೆ ವಿದ್ಯಾರ್ಥಿ ಸಂಘದವರು

ನನ್ನನ್ನು ಆಹ್ವಾನ ಮಾಡಿದರು. ನಾನು ವಿದ್ಯಾರ್ಥಿಗಳಿಗೆ ಕೆಲವು ಕಿವಿ ಮಾತುಗಳನ್ನು ಹೇಳಿದೆ. ವಿವಿಧ ಆಕರ್ಷಣೆಗಳಿಗೆ ಬಲಿ ಬೀಳಬೇಡಿ. ಮಧ್ಯಪಾನದಿಂದ ದೂರ ಇರಿ. ಡ್ರಗ್ಸ್‌ನಿಂದ ದೂರ ಇರಿ. ಹೆಣ್ಣುಮಕ್ಕಳ ಚಟದಿಂದ ದೂರ ಸರಿ. ಹೆಣ್ಣು ಮಕ್ಕಳ ಚಟದಿಂದ ದೂರ ಇರಿ ಅಂತ. ಹಾಗೆ ಹೇಳಿದಾಗ ಒಬ್ಬ ವಿದ್ಯಾರ್ಥಿ ಎದ್ದು ನನ್ನ ಹತ್ತಿರ ನೇರವಾಗಿ ಕೇಳಿಬಿಟ್ಟ. ನಿಮ್ಮ ಮುಖ್ಯ ಮಂತ್ರಿಗಳು ಅವರ ಹವ್ಯಾಸದ ಬಗ್ಗೆ ಬಹಿರಂಗವಾಗಿ ಹೇಳಿದ್ದಾರೆ. ಅವರೇ ಈ ರೀತಿ ಸಂದೇಶ ಕೊಟ್ಟಿದ್ದಾರೆ. ಇದಕ್ಕೆ ನಾವು ಯಾವರೀತಿ ಉತ್ತರ ಕೊಡಬೇಕು....

ಅಧ್ಯಕ್ಷರು : ಅದೆಲ್ಲಾ ಆಗಿದೆ ಬಿಡಿ......

(ಗೊಂದಲ)

ಅಧ್ಯಕ್ಷರು : ಸಭಾಪತಿಯವರೇ ನಾನು ಹೇಳುವುದನ್ನು ಕೇಳಿ. ಇವತ್ತು ಕಡೆ ದಿನ ತಾವು ಸ್ಪಷ್ಟೀಕರಣ ಕೇಳಿ. ಆ ವಿಚಾರ ಸದನ ಪ್ರಾರಂಭವಾದ ಮೇಲೆ ಸುಮಾರು 20 ಸಾರಿ ಚರ್ಚೆ ಆಗಿದೆ. ಅವರು ಉತ್ತರ ಹೇಳಿದ್ದಾರೆ ಅವರ ನಿಲುವನ್ನು ಅವರು ಸಾಬೀತು ಮಾಡಿದ್ದಾರೆ. ನಾವು ಕೂಡ ಅದರ ಬಗ್ಗೆ ವ್ಯಾಖ್ಯಾನ ಮಾಡಿದ್ದೇವೆ. ಇಲ್ಲ ಎರಡು ವಿಧದ ಜನ ಇದ್ದಾರೆ. ತಾವು ಏನಾದರೂ ಮಾಡಿದರೆ ಅದು ಒಳ್ಳೆಯದೋ ಕೆಟ್ಟದ್ದೋ ಅದನ್ನು ಒಪ್ಪಿಕೊಳ್ಳುವವರು. ಇನ್ನು ಕೆಲವರು ಎಲ್ಲವನ್ನು ಮಾಡಿ ಮುಚ್ಚಿಟ್ಟುಕೊಳ್ಳುವಂತಹ ಆಷಾಡಭೂತಿ ತನ ಮಾಡುವವರು ಇದ್ದಾರೆ. ಏಕೆ ಮತ್ತೆ ಮತ್ತೇ ಅದೇ ವಿಚಾರ ಚರ್ಚೆ ಮಾಡುತ್ತೀರಿ?

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ ಮುಖ್ಯಮಂತ್ರಿಯಂತಹ ಜವಾಬ್ದಾರಿಯುತವಾದ ಸ್ಥಾನದಲ್ಲಿ ಕುಳಿತುಕೊಂಡು ಕರ್ನಾಟಕ ರಾಜ್ಯದ ಯುವಜನತೆಗೆ ಕೊಡುವ ಸಂದೇಶದಬಗ್ಗೆ ಜನ ನಮ್ಮಲ್ಲಿ ಪ್ರಶ್ನಿಸಿದಾಗ ನಾವು ಯಾವ ಉತ್ತರವನ್ನು ಕೊಡಬೇಕು. ನಾವು ಇದೇ ರೀತಿ ಹೇಳಬೇಕೇ? ನಾವು ಆಷಾಡಭೂತಿ ತನ ತೋರಿಸೋಣ ನೀವು ಮಾಡಿಕೊಳ್ಳುವುದು ಮಾಡಿ ಅಂತ ಹೇಳಬೇಕೇ?

ಅಧ್ಯಕ್ಷರು : ಅದು ನಮಗೆ ಸಂಬಂಧ ಇಲ್ಲ ಅಂತ ಹೇಳಬೇಕು. ಆಯಿತು ಮುಗಿಸಿ.

ಶ್ರೀ ಯು.ಆರ್. ಸಭಾಪತಿ : ಮಾನ್ಯಮುಖ್ಯಮಂತ್ರಿಗಳು ನಾನು ಕೇಳಿದ ಕೆಲವು ಪ್ರಶ್ನೆಗಳಿಗೆ ಸ್ಪಷ್ಟೀಕರಣ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಯು.ಬಿ. ಬಣಕಾರ : ಮಾನ್ಯ ಅಧ್ಯಕ್ಷರೇ ತುಂಗಾ ಮೇಲ್ದಂಡೆ ಯೋಜನೆಯಲ್ಲಿ ಅಂದಿನ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು ಅಡಿಗಲ್ಲು ಹಾಕಿದಾಗ ಅದರ ಅಂದಾಜು ವೆಚ್ಚ 339 ಕೋಟಿ ರೂಪಾಯಿಗಳಾಗಿತ್ತು. ಈಗ ಅದರ ಅಂದಾಜು ವೆಚ್ಚ 669 ಕೋಟಿ ರೂಪಾಯಿಗಳಿಗೆ ಏರಿದೆ. ಬಹುಶಃ ಅದು 2 ಸಾವಿರ ಇಸವಿ ವೇಳೆಗೆ ಅದರ ಅಂದಾಜು ವೆಚ್ಚ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಮುಟ್ಟುವ ಪ್ರಸಂಗ ಇದೆ. ಇಂತಹ ಸಂದರ್ಭದಲ್ಲಿ ಪ್ರತಿ ವರ್ಷ 7-8 ಕೋಟಿ ರೂಪಾಯಿಗಳನ್ನು ಮಾತ್ರ ಬಜೆಟ್‌ನಲ್ಲಿ ಇಡುತ್ತಿದ್ದಾರೆ. ಆದ್ದರಿಂದ ಈ ವರ್ಷದ ಬಜೆಟ್‌ನಲ್ಲಿ 200 ಕೋಟಿ ರೂಪಾಯಿಗಳನ್ನಾದರೂ ಮೀಸಲಿಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ಮಾತನಾಡತಕ್ಕಂಥ ಸಂದರ್ಭದಲ್ಲಿ ಎಂ.ಎಸ್.ಐ.ಎಲ್.ನ ಬಗ್ಗೆ ಮಾತನಾಡುತ್ತಾ ಹೇಳಿದರು. ಇದರಲ್ಲಿ ಸೆಕೆಂಡ್ಸ್ ಹೆಚ್ಚಾಗುತ್ತಿದೆ ಎನ್ನುವುದು ನಮ್ಮ ಅನುಭವಕ್ಕೆ ಬಂತು ಅದ್ದರಿಂದ ಮಾಡುತ್ತೇವೆಂದು ಹೇಳಿದರು. ಆದ್ದರಿಂದ ಮಾನ್ಯ ಅಧ್ಯಕ್ಷರೇ ನಾನು ಹೇಳುವುದೇನೆಂದರೆ ಈ ಕಾನೂನು ಮೊದಲು ತಂದಾಗ ಹೈಕೋರ್ಟಿನಲ್ಲಿ ಸ್ಟೇ ಇತ್ತು. ಸುಪ್ರೀಂ ಕೋರ್ಟಿನಲ್ಲಿ ಸ್ಟೇ ಇತ್ತು. ಈ ಮಧ್ಯೆ ಯಾರು ಮಾರಾಟ ಮಾಡುತ್ತಿದ್ದರೋ ಅವರೆಲ್ಲರೂ ಕೂಡ ಮಾರಾಟ ಮಾಡುವುದಕ್ಕೆ ಅವಕಾಶ ಇತ್ತು. ಎಂ.ಎಸ್.ಐ.ಎಲ್. ನವರು ಮಾರಾಟ ಮಾಡುವುದಕ್ಕೆ ಅವಕಾಶ ಇರಲಿಲ್ಲ. ಸುಪ್ರೀಂ ಕೋರ್ಟಿನಲ್ಲಿ ಕನ್‌ಫರ್ಮ್ ಆದಮೇಲೆ ಇವರು ಇದನ್ನು ಇಂಪ್ಲಿಮೆಂಟ್ ಮಾಡಿಲ್ಲ. ಆದ್ದರಿಂದ ರೆಕಾರ್ಡ್‌ನಲ್ಲಿ ಈ ಸೆಕೆಂಡ್ಸ್ ಆಗಿದೆ ಎನ್ನುವ ಅನುಭವ ಬಂತು ಅದ್ದರಿಂದ ಮಾಡಿದ್ದೇವೆ ಎಂದು ಹೇಳುವುದು ಅಷ್ಟು ಸರಿಯಾದುದು ಅಲ್ಲ. ಅಲ್ಲಿ ರೆಕಾರ್ಡ್ಸ್ ಸರಿ ಮಾಡಬೇಕಾಗುತ್ತದೆ. ಆ ತರಹ ತಮಗೆ ಯಾರಾದರೂ ಹೇಳಿದ್ದರೆ ಅದು ತಪ್ಪಾಗುತ್ತದೆ ಅದನ್ನು ಸರಿ ಮಾಡಿಕೊಳ್ಳಬೇಕು. ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನಲ್ಲಿ ಆಗಿದ್ದು ಅಫಿಡವಿಟ್ ಹಾಕಿದ್ದಾರೆ. ಎಂ.ಎಸ್.ಐ.ಎಲ್. ನವರಿಗೆ ಕೊಟ್ಟಿದ್ದಕ್ಕೆ ಏನು ಕಾರಣ ಅಂತ ಹೇಳಿದರೆ ಸೆಕೆಂಡ್ಸ್ ತಪ್ಪಿಸುವುದಕ್ಕೋಸ್ಕರ ನಾವು ಈ ಕಾನೂನು ತಂದಿದ್ದೇವೆಂದು ಹೇಳಿ ಪ್ರಮಾಣ ಪತ್ರವನ್ನು ಸ್ಟೇಟ ಗೌರ್ನಮೆಂಟನವರ ಪರವಾಗಿ ಅಫಿಡವಿಟ್ ಹಾಕಿದ್ದಾರೆ. ಆದುದರಿಂದ ಸದನಕ್ಕೆ ತಪ್ಪು ಅಭಿಪ್ರಾಯ ಕೊಟ್ಟಂತೆ ಆಗುತ್ತದೆ. ಅದಕ್ಕೆ ಸರಿಯಾದ ಉತ್ತರವನ್ನು ಕೊಡಬೇಕು. ಎರಡನೆಯ ವಿಷಯ ಮಾನ್ಯ ಖರ್ಗೆಯವರು ಮಾತನಾಡುತ್ತಾ ಹೇಳಿದರು. ನಾನಾದರೂ ಕೇಳುವುದು ಇಷ್ಟೇ. ಮಹಿಳೆಯರಿಗೂ ಮೀಸಲಾತಿಯನ್ನು ತಾವು ಇಟ್ಟಿರತಕ್ಕಂಥ ಸಂದರ್ಭದಲ್ಲಿ ಬ್ಯಾಕ್‌ಲಾಗ್ ಕೊಡತಕ್ಕಂಥ ಸಂದರ್ಭದಲ್ಲಿ ಮಹಿಳೆಯರಿಗೆ ಕೊಡಬೇಕಾದಂತಹ ಬ್ಯಾಕಲಾಗ ಕೊಡಲು ನಮ್ಮನ್ನು ಕರೆದು ಎಲ್ಲೆಲ್ಲಿ ಮಹಿಳೆಯರು ಯಾವ ಯಾವ ಇಲಾಖೆಗಳಲ್ಲಿ ಕಡಿಮೆ ಇದ್ದಾರೆ, ಅಲ್ಲಿ ಮಹಿಳೆಯರನ್ನು ತುಂಬಲು ತಾವು ಅವಕಾಶ ಮಾಡಿ ಕೊಡುತ್ತೀರಾ? ಮೂರನೆಯ ಪ್ರಶ್ನೆ ಬಹಳ ದುಃಖದಿಂದ ತಾವು ಅವಕಾಶ ಮಾಡಿ ಕೊಡುತ್ತೀರಾ? ಮೂರನೆಯ ಪ್ರಶ್ನೆ ಬಹಳ ದುಃಖದಿಂದ ಹೇಳುತ್ತಿದ್ದೇನೆ ಮಾನ್ಯ ಮುಖ್ಯಮಂತ್ರಿಗಳು ಟಿ.ವಿ.ಯಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಯಾರ‍್ಯಾರು ಸೌಂದರ್ಯ ಸ್ಪರ್ಧೆಯನ್ನು ವಿರೋಧಿಸಿದರೋ ಅವರೆಲ್ಲರೂ ಮೆಂಟಲಿ ರಿಟಾರಡೆಡ ವ್ಯಕ್ತಿಗಳು ಎನ್ನತಕ್ಕಂಥ ಮಾತನ್ನು ಉಚ್ಚಾರ ಮಾಡಿದ್ದಾರೆ. ಇಡೀ ಮಹಿಳೆಯರು ಇದರ ಬಗ್ಗೆ ಯಾರ‍್ಯಾರು ಮಾತನಾಡಿದರೋ ಅವರು ಇದರಿಂದ ಬಹಳ ನೊಂದಿದ್ದಾರೆ. ಅದರಲ್ಲಿ ನಾನು ಕೂಡ ಒಬ್ಬರು. ಅಂದರೆ ಮೆಂಟಲಿ ರಿಟಾರ್‌ಡೆಡ್ ಆಗಿರತಕ್ಕಂಥ ಸದಸ್ಯರು ಈ ಸದನದಲ್ಲಿ ಇರಬಹುದೇ? ಅಥವಾ ಇಲ್ಲವೇ ಎನ್ನತಕ್ಕಂಥ ಪ್ರಶ್ನೆ ಮತ್ತು ಜಿಜ್ಞಾಸೆ ಕೂಡ ನನ್ನಲ್ಲಿ ಬಂದಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಡಿಫೆಂಡ್ ಮಾಡಿಕೊಂಡು, ನಾನು ಹೇಳಿದ್ದೇ ಸರಿ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅವರು ಹೇಳಿದ್ದೇ ಸರಿ ಆದರೆ ಅವರು ಈ ಸದನದಲ್ಲಿ ಇರಬೇಕಾಗುತ್ತದೆ. ನಾನು ಈ ಸದನದಲ್ಲಿ ಇರುವುದಕ್ಕೆ ಕಾನೂನಿನಲ್ಲಿ ಕೂಡ ಅವಕಾಶ ಇಲ್ಲ ಏಕೆಂದರೆ ಮೆಂಟಲಿ ರಿಟಾರ್‌ಡಡ್ ಆಗಿರುವವರು ವಿಧಾನಸಭೆ ಸದಸ್ಯರಾಗುವುದಕ್ಕೆ ಅವಕಾಶ ಇರುವುದಿಲ್ಲ. ಅದು ಸರಿಯಲ್ಲ ಎನ್ನುವುದಾದರೆ ಅವರು ದಯವಿಟ್ಟು ಈ ಸಂದರ್ಭದಲ್ಲಿ ಈ ಬಗ್ಗೆ ಕ್ಲಾರಿಫಿಕೇಶನ್ಸ್ ಕೊಡಬೇಕಾಗುತ್ತದೆ.

ಅಧ್ಯಕ್ಷರು : ಇಲ್ಲ ಸದಸ್ಯರಾಗಿ ಇರುವುದಕ್ಕೆ ನೀವು ಮೆಂಟಲಿ ರಿಟಾರ್‌ಡಡ್ ಆಗಿರುವವರು ವಿಧಾನ ಸಭೆ ಸದಸ್ಯರಾಗುವುದಕ್ಕೆ ಅವಕಾಶ ಇರುವುದಿಲ್ಲ. ಅದು ಸರಿಯಲ್ಲ ಎನ್ನುವುದಾದರೆ ಅವರು ದಯವಿಟ್ಟು ಈ ಸಂದರ್ಭದಲ್ಲಿ ಈ ಬಗ್ಗೆ ಕ್ಲಾರಿಫಿಕೇಷನ್ಸ್ ಕೊಡಬೇಕಾಗುತ್ತದೆ.

ಅಧ್ಯಕ್ಷರು : ಇಲ್ಲಿ ಸದಸ್ಯರಾಗಿ ಇರುವುದಕ್ಕೆ ನೀವು ಮೆಂಟಲಿ ರಿಟಾರ್‌ಡಡ್ ಹೌದೋ ಅಲ್ಲವೋ ಎನ್ನುವುದಕ್ಕೆ ಸರ್ಟಿಫೈ ಮಾಡಬೇಕಾಗಿರುವವರು ನಾನು. ನಾನು ಸರ್ಟಿಫೈ ಮಾಡುತ್ತೇನೆ ತಾವು ಮೆಂಟಲಿ ಸೌಂಡ ಆಗಿದ್ದೀರಿ.

ಶ್ರೀಮತಿ ಪ್ರಮೀಳಾ ಎಸ್. ನೇಸರ್ಗಿ : ಮಾನ್ಯ ಅಧ್ಯಕ್ಷರೇ ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಯಥಾರಾಜ ತಥಾಪ್ರಜೆ. ಬಹಳ ಚೆನ್ನಾಗಿ ಗಾಂಧೀಜಿಯಿಂದ ಹಿಡಿದು ಇಲ್ಲಿಯವರೆಗೂ ಫಿಲಾಸಫಿ ಬಂತು. ನಾವು ತಿಳಿದುಕೊಂಡಿರುವುದು ಮಕ್ಕಳಾಗಿ ಸಣ್ಣ ಮಕ್ಕಳಿಂದ ನಮಗೆ ಏನು ಹೇಳುತ್ತಿದ್ದರು ರಾಜ ಹೇಗೆ ಇರುತ್ತಾರೋ ಹಾಗೆ ಪ್ರಜೆಗಳು ಇರುತ್ತಾರೆ ಅಂತ. ಈ ರಾಜ್ಯದ ಮುಖ್ಯಮಂತ್ರಿ ಹೇಗಿರುತ್ತಾರೋ ಹಾಗೆ ಪ್ರಜೆಗಳು ಇರುತ್ತಾರೆ. ಈ ರಾಜ್ಯದಲ್ಲಿರತಕ್ಕಂಥ ಮುಖ್ಯಮಂತ್ರಿಗಳು ಏನನ್ನು ಹೇಳುತ್ತಾರೋ ಅದನ್ನು ಜನರು ಕಿವಿಗೊಟ್ಟು ಕಣ್ಣಲ್ಲಿ ನೋಡುತ್ತಿರುತ್ತಾರೆ. ಆದ್ದರಿಂದ ನಾನು ಮದಿರಾ ವೈನು ಇವೆಲ್ಲಾ ಕೂಡ ನನಗೆ ಬೇಕು ಅಂತ ಹೇಳಿದಾಗ ಒಂಟಿ ಕಾಲಿನಲ್ಲಿ ಏನು ಸನ್ಮಾನ್ಯ ಮಂಜುರವರು.....

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ಸ್ವಲ್ಪ ಇರಬೇಕು. ನೀವು ಮಾತನಾಡುವಾಗ ನಾವು ಕೇಳಿದ್ದೇವೆಯೋ ಇಲ್ಲವೋ? ಮಾನ್ಯ ಅಧ್ಯಕ್ಷರೇ ಈ ರೀತಿ ಅದಾಗ ಮಾನ್ಯ ಎಲ್ಲಾ ಮಹಿಳೆಯರಿಗೂ ಕೂಡ ಅಥವಾ ಯುವ ಜನಾಂಗದಲ್ಲಿ ಇವತ್ತು ನಮ್ಮ ಮುಖ್ಯಮಂತ್ರಿಗಳೇ ವೈನ್ ಅಂಡ್ ವುಮೆನ್ ಅಂತ ಹೇಳಿದಾಗ ಸನ್ಮಾನ್ಯ ಮಂಜುನಾಥ ಅವರು ಒಂಟಿ ಕಾಲಿನಲ್ಲಿ ನಿಂತರು. ಈ ಇಡೀ ದೇಶದ ಪ್ರಜೆಗಳು ಕರ್ನಾಟಕ ರಾಜ್ಯದ ಪ್ರಜೆಗಳು ಇವತ್ತಿನದಿವಸ ಮುಖ್ಯಮಂತ್ರಿಗಳ ಮಾತುಗಳನ್ನು ಕೇಳಿಕೊಂಡು ಅದೇ ರೀತಿ ಕನಸ್ಸಿನಲ್ಲಿ 5 ಗಂಟೆಗಳಕಾಲ ಕಥೆಗಳನ್ನು ಬಹಳ ಚೆನ್ನಾಗಿ ಹೇಳಿ ವಿಮರ್ಶೆ ಮಾಡಿ ಹೀಗೆ ಆಯಿತು ನಾನು ಒಂದು ನಿಮಿಷ ಹೇಳಿಬಿಟ್ಟೆ ನೀವು ಗಂಟೆಗಳ ಕಾಲ ಅದನ್ನೇ ಹೇಳುತ್ತಿದ್ದೀರಲ್ಲ ನಾನಾದರೂ ಹೇಳುವುದು ಇಷ್ಟೇ ನೀವು ಒಂದು ನಿಮಿಷ ಹೇಳಿಬಿಟ್ಟು ಏನೂ ಆಗಿಲ್ಲ ಅಂತ ಇದ್ದೀರ. ಆದರೆ ಇಡೀ ಕರ್ನಾಟಕರಾಜ್ಯದಲ್ಲಿರತಕ್ಕಂಥ ಯುವಜನಾಂಗ ಮತ್ತು ಮಹಿಳೆಯರು ಎಲ್ಲರೂ ಕೂಡ ಬಹಳ ನೊಂದಿದ್ದಾರೆ. ಇದೇ ರೀತಿ ನಮ್ಮ ಮಕ್ಕಳು ಆದರೆ ನಮ್ಮ ಗತಿ ಏನು ಎಂದು ಇವತ್ತು ದುಃಖ ಪಡುತ್ತಿದ್ದಾರೆ. ಆದ್ದರಿಂದ ತಾವು ಅದನ್ನು ಸಮರ್ಥನೆ ಮಾಡಿಕೊಳ್ಳುವುದರಲ್ಲಿ ಅರ್ಥವಿಲ್ಲ. ತಪ್ಪಾಗಿರುವುದನ್ನು

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ, ಇದನ್ನು ನಾವು ಒಪ್ಪುವುದಕ್ಕೆ ಆಗುವುದಿಲ್ಲ. ಪ್ರಮೀಳಾರವರ ಅಭಿಪ್ರಾಯ ಇಡೀ ರಾಜ್ಯದ ಅಭಿಪ್ರಾಯವಲ್ಲ. ಪ್ರಮೀಳಾ ರವರ ಅಭಿಪ್ರಾಯ ಈ ಸದನದ ಅಭಿಪ್ರಾಯವಲ್ಲ. ಇದನ್ನು ತಾವು ಸಹ ಅರ್ಥ ಮಾಡಿಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಭಾಷಣ ಮಾಡುವಾಗ ಬೆಳಿಗ್ಗೆ 3 ಗಂಟೆ ಮತ್ತು ಈಗ 5 ಗಂಟೆಗೆ ಭಾಷಣ ಮಾಡುವಾಗ ನಿದ್ದೆ ಮಾಡಿದರು. ಅವರಿಗೆ ಏನೂ ವಿಚಾರವೇ ಗೊತ್ತಿಲ್ಲ. ಈಗ ಅವರು ಮಾತನಾಡುತ್ತಾರೆ ಇಲ್ಲಿ ಕುಳಿತುಕೊಂಡು ಎಂದು ಹಾಗೆ ಈ ಸದನದಲ್ಲಿ ಹೇಳಬಾರದು ಅಂತ ನಾನು ಬಹಳ ಗಂಭೀರವಾಗಿ ಕುಳಿತಿದ್ದೆ. ಗೊರಕೆ ಹೊಡೆಯುವ ಶಬ್ದ ಬರುತ್ತಿತ್ತು ನಾವು ಸುಮ್ಮನ್ನೆ ಕುಳಿತಿದ್ದೆವು.

ಶ್ರೀ ಎಲ್.ಆರ್. ಶಿವರಾಮೇಗೌಡ : ಅದೆಲ್ಲಾ ಸುಳ್ಳು.

ಶ್ರೀ ವಾಟಾಳ್ ನಾಗರಾಜ್ : ನಾನು ಸುಳ್ಳು ಹೇಳಿದ್ದರೆ ನಾನು ರಾಜೀನಾಮೆ ಕೊಡುತ್ತೇನೆ ಮಾನ್ಯ ರಾಜೇಂದ್ರನ್ ಅವರನ್ನು ಕೇಳಿ.

ಶ್ರೀ ಎಸ್. ರಾಜೇಂದ್ರನ್ : ಅವರು ಸುಳ್ಳು ಹೇಳಲಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ ಇವರೆಲ್ಲಾ ಸೇರಿ ಏನೋ ಪಿತೂರಿ ನಡೆಸುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗ ಏನೋ ಎಚ್ಚರ ಆಗಿ ಅವರು ಹೇಳುತ್ತಿದ್ದಾರೆ. ಈಗ ಕೊನೆಗೆ ಅವರು ಭಾಷಣ ಮಾಡಿದರಲ್ಲ ಸಮರ್ಥನೆ ಮಾಡಿಕೊಂಡರಲ್ಲ ಅದನ್ನೆಲ್ಲಾ ಲಿಟರೇಚರ್ ತೆಗೆದುಕೊಂಡು ಪಬ್ಲೀಶ್ ಮಾಡಿ ಹಂಚಿಕೊಂಡು ಬನ್ನಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಏನು ತೊಂದರೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇವರ ಕುರ್ಚಿಯನ್ನು ಆ ಕಡೆಗೆ ಬದಲಾವಣೆ ಮಾಡಿ. ಇವರು ನಮ್ಮವರೋ ಆ ಕಡೆಯವರೋ ಎನ್ನುವ ಅನುಮಾನ ನಮಗೆ ಬಂದಿದೆ. ಮಾನ್ಯ ಶಿವರಾಮೇಗೌಡರ ಬಗ್ಗೆ ನಮಗೆ ಬಹಳ ಗೌರವ, ಏಕೆಂದರೆ ಗುರಗುರ್ ಅಂತ ಗೊರಕೆ ಬಂತು, ನಾನು ಹೇಳಬಾರದು ಅಂದುಕೊಂಡಿದ್ದೆ. ಇದು ಏನು ಹೀಗೆ ಬರುತ್ತಿದೆ ಯಲ್ಲ ಶಬ್ದ ಅಂತ ನಿಂತು ನೋಡಿ ನಾನು ಮಾನ್ಯ ರಾಜೇಂದ್ರನ್ ಅವರಿಗೆ ಏನು ಮಾಡೋಣ ಅಂತ ಹೇಳಿದೆ. ಹೋಗಿ ಬಿಟ್ಟುಬಿಡೋಣ ಅವರ ನಿದ್ರೆಯ ಬಂಘ ನಾವು ಏಕೆ ಮಾಡಬೇಕು ಅಂತ ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ನೀವು ಇಲ್ಲಿ ಧರಣಿ ಮಾಡಬೇಡಿ, ಒಂಟಿ ಕಾಲಿನ ಮೇಲೆ ನಿಲ್ಲಬೇಡಿ ಎಂದು ಹೇಳಿದರು. ಇಲ್ಲಿ ಇವರು ಗೊರಕೆ ಹೊಡೆಯುವುದಕ್ಕೆ ನೀವು ಏನು ಹೇಳಬೇಕು ಹೇಳಿ. ಏನಾದರೂ ಹೇಳಿದಿರಾ? ನಿದ್ರೆ ಮಾಡುವವರಿಗೆ ಗೊರಕೆ ಹೊಡೆಯುವವರಿಗೆ ಹೇಳಿದಿರಾ?

SRI J.H. PATEL : There is a ruling. Sleeping is no unparliamentary bu snoring is. ನಿದ್ದೆ ಮಾಡುವುದು ಅನಪಾರ್ಲಿಮೆಂಟರಿ ಅಲ್ಲ. ರೂಲಿಂಗ ಇದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ ಒಬ್ಬ ಮನುಷ್ಯನಿಗೆ ಅವಮಾನ ಆದರೆ ಅವರಿಗೆ ದುಃಖ ಆದರೆ, ಮಾನ್ಯ ಮುಖ್ಯಮಂತ್ರಿಗಳು ಕ್ಷಮಾಪಣೆ ಕೇಳಬೇಕಾದುದು ಅವರ ಆದ

ಕರ್ತವ್ಯ. ಈ ವಿಷಯದಲ್ಲಿ ಕರ್ನಾಟಕ ರಾಜ್ಯದ ಅಸಂಖ್ಯಾತ ಮಹಿಳೆಯರು ನೊಂದಿದ್ದಾರೆ. ಆದ್ದರಿಂದ ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಇನ್ನೊಬ್ಬರಿಗೆ ಮಾದರಿ ಆಗಬಾರದು, ಮತ್ತು ಕ್ಷಮಾಪಣೆ ಕೇಳಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಕೊನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ನಾನು ನೂರು ದಿನ ಶಾಸನ ಸಭೆಗಳನ್ನು ಮಾಡುವುದಕ್ಕೆ ಸಿದ್ಧವಾಗಿದ್ದೇನೆ ಆದರೆ ಧರಣಿ ಮಾಡುವುದನ್ನು ಬಿಡಬೇಕು ಅಂತ ಹೇಳಿದರು. ನಾನು ಹೇಳುವುದು ಸಬ್ಜೆಕ್ಟ್ ಕಮಿಟೀಸ್ ಬೇಡ. ನೂರು ದಿವಸ ಅಲ್ಲ ಇನ್ನೂ ಜಾಸ್ತಿದಿವಸ ಮಾಡಲಿ ಅವರು ಎಷ್ಟು ಸಮರ್ಥರಾಗಿದ್ದಾರೋ ಅದಕ್ಕಿಂತ ಹತ್ತರಷ್ಟು ನಾವು ಕೂಡ ತಯಾರಾಗಿ ಬರುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ಅಧ್ಯಕ್ಷರೆ, ಯಾರು ಅವರು?

ಶ್ರೀ ರಮೇಶ್ ಸಿ. ಜಿಗಜಿಣಗಿ : ಈ ಮನೆಯ ಸದಸ್ಯರು.

ಶ್ರೀ ವಾಟಾಳ್ ನಾಗರಾಜ್ : ಹೌದೇ? ತಮಗೆ ಗೊತ್ತಾ ಈ ಮನೆಯ ಸದಸ್ಯರು? ಮಾನ್ಯ ಮುಖ್ಯಮಂತ್ರಿಗಳು ಆಗಲೇ ಅದನ್ನೇ ಹೇಳಿದರು. ಎಷ್ಟು ಗಾಂಭೀರ್ಯವಾಗಿ ಹಾಗೆಲ್ಲಾ ಮಾತನಾಡಬಾರದು, ನಾವು ನೂರು ದಿವಸ ನಡೆಸುತ್ತೇವೆ ಅಂತ. ಅವರು ಏನು ಮಾತನಾಡುತ್ತಾರೆಂದು ನಮಗೆ ಕೇಳುಸುತ್ತಿಲ್ಲ, ಏನು ಹೇಳುತ್ತಾರೆಂದು ಕೇಳುವ ಹಾಗಿಲ್ಲ, ಕಂದಾಯ ಸಚಿವರು ಎದ್ದು ನಿಂತುಕೊಳ್ಳುತ್ತಾರೆ, ಕುಳಿತುಕೊಳ್ಳುತ್ತಾರೆ, ಇದು ಸರಿಯೋ? ಸರಿ ಎಂದರೆ ಉಟ್ ಭೈಸ್ ಹೊಡೆಯಿರಿ ಯಾರು ಬೇಡ ಅಂತಾರೆ?

ಶ್ರೀ ರಮೇಶ್ ಸಿ. ಜಿಗಜಿಣಗಿ : ಬೆಳಗಿನವರೆಗೂ ರಾಮಾಯಣ ಕೇಳಿ, ಬೆಳಿಗ್ಗೆ ಎದ್ದು ಸೀತೆ ರಾಮನಿಗೆ ಏನು ಆಗುತ್ತಾಳೆ ಎಂದು ಕೇಳಿದ ಹಾಗೆ ಆಯಿತು ಎಂದು ಹೇಳಿದೆ ಅಷ್ಟೇ.

ಶ್ರೀ ವಾಟಾಳ್‌ನಾಗರಾಜ್ : ಬೆಳಗಾನ ರಾಮಾಯಣ ಕೇಳಿ, ಬೆಳಿಗ್ಗೆ ಎದ್ದು ರಾಮನಿಗೆ ಸೀತೆ ಏನಾಗಬೇಕು ಎಂದು ಕೇಳಿದ ಮಾತನ್ನು ಅವರು ಹೇಳಿದರು. ಅದಕ್ಕೆ ಒಂದು ವ್ಯಾಖ್ಯಾನವನ್ನು ನಾನು ಹೇಳುತ್ತೇನೆ "ಒಂದು ಹಳ್ಳಿಯಲ್ಲಿ ರಾಮಾಯಣ ನಡೆಯುತ್ತಿತ್ತು, ಒಬ್ಬ ರಾಮಾಯಣವನ್ನು ನೋಡಲು ರಾಗಿ ಮುದ್ದೆ ಊಟ ಮಾಡಿ ಮಾರಮ್ಮನ ಗುಡಿ ಹತ್ತಿರ ಇದ್ದ ಕಲ್ಲಿನ ಪಕ್ಕ ಬಂದು ಕುಳಿತ, ಆಮೇಲೆ ನಿದ್ದೆ ಮಾಡಿದ, ನಿದ್ದೆ ಮಾಡುವಾಗ ಮೂಗಿನಿಂದ ಉಸಿರಾಡುವ ಬದಲು ಬಾಯಿ ಮೂಲಕ ಉಸಿರು ಆಡುತ್ತಿದ್ದ, ಆಗ ಆ ಕಡೆ ಒಂದೆರಡು ನಾಯಿಗಳು ಬಂದು ಮನುಷ್ಯ ಅಲ್ಲಿದ್ದಾನೆಂದು ತಿಳಿಯದೆ ಅವನ ಬಾಯಿಗೆ ಮೂತ್ರ ವಿಸರ್ಜನೆ ಮಾಡಿ ಹೋದವು" ಬೆಳಿಗ್ಗೆ ಎದ್ದು ರಾಮನಿಗೂ ಸೀತೆಗೂ ಏನಾಯಿತೆಂದು ಕೇಳಿದ್ದಕ್ಕೆ 'ಬಹಳ ಉಪ್ಪುಪ್ಪು' ಎನ್ನುತ್ತಿದ್ದ.

ಅಧ್ಯಕ್ಷರು : ಸ್ಪಷ್ಟೀಕರಣವನ್ನು ಕೇಳಲು ಸುಮಾರು ಜನ ಕೈ ಎತ್ತಿದ್ದೀರಿ ಕೆಲವರು ಬಹಳ ಹೊತ್ತು ಲಂಬಿಸುತ್ತಿದ್ದೀರಿ ಮುಖ್ಯಮಂತ್ರಿಗಳು, ನನಗೆ ಒಂದು ಕಾರ್ಯಕ್ರಮ ಇದೆ, ನಾನು ಹೋಗಬೇಕೆಂದು ಹೇಳುತ್ತಾರೆ. ಬರೀ ರಿಪಿಟೇಷನ್ ಮಾಡುತ್ತಿದ್ದೀರಿ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಸನ್ಮಾನ್ಯ ಅಧ್ಯಕ್ಷರೆ, ನಾನು ಒಂದೇ ಮಾತಿನಲ್ಲಿ ಹೇಳಿ ಮುಗಿಸುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಭೂಮಿಗೆ ಧರಣಿ ಮಾಡುತ್ತಾರೆಂದು ಹೇಳಿದರು. ಪಾಪ ಹೆಚ್ಚಾದಾಗ 'ಭೂಮಿ ತಾಯಿ ಬಾಯಿ ತೆರೆ' ಎಂದು ಇದೆ. ಅದಕ್ಕೆ ಭೂಮಿ ಕಚ್ಚಬೇಕಾಗುತ್ತದೆ. ಅದಕ್ಕೆ ಯಾರೂ ಕೂಡಾ ಕೆಟ್ಟದಾಗಿ ಭಾವನೆ ಮಾಡಿಕೊಳ್ಳುವುದು ಬೇಡವೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಅಧ್ಯಕ್ಷರು : ನಾನು ಏನು ಮಾಡಲಿ? ನಾನು ಯಾರ ಅವಕಾಶವನ್ನೂ ಕಿತ್ತುಕೊಳ್ಳಲಿಲ್ಲ. ನೀವೇ ನಿಮ್ಮ ಅವಕಾಶಗಳನ್ನೆಲ್ಲಾ ಕಳೆದುಕೊಳ್ಳುತ್ತಿದ್ದೀರಿ, ಹತ್ತು ಗಂಟೆಯವರೆಗೆ ಬೇಕಾದರೂ ನಾನು ಕುಳಿತುಕೊಳ್ಳುತ್ತೇನೆ, ನನಗೆ ತಾಳ್ಮೆ ಇದೆ. ಮುಖ್ಯಮಂತ್ರಿಗಳು ಬೇಗ ಹೋಗಬೇಕೆಂದು ಹೇಳುತ್ತಿದ್ದಾರೆ, ಅವರು ಬೆಳಿಗ್ಗೆಯಿಂದ ಇಲ್ಲಿ ಕುಳಿತುಕೊಂಡು ಅವರ ಕೆಲಸವನ್ನು ಮಾಡಿದ್ದಾರೆ. ಎಲ್ಲರೂ ಸ್ಪೀಚ್ ಮಾಡುತ್ತೀರಿ, ಸ್ಪಷ್ಟೀಕರಣಕ್ಕೂ ಸ್ಪೀಚ್‌ಗೂ, ಕ್ವೆಶ್ಚನ್‌ಗೂ, ಸಪ್ಲಿಮೆಂಟರಿಗೂ, ಕಾಲಿಂಗ್ ಅಟೆನ್‌ಷನ್‌ಗೂ, ಜೀರೋ ಅವರಗೂ, ಯಾವುದಕ್ಕೂ ಡಿಫರೆನ್ಸ್ ಇಲ್ಲ. ನನಗೇ ಗೊತ್ತಿಲ್ಲವೇನೋ ಎಂದು ಜನ ತಿಳಿದುಕೊಂಡು ಬಿಟ್ಟರೆ, ನನಗೆ ಕಷ್ಟವಾಗುತ್ತದೆ. ನನಗೆ ಎಲ್ಲಾ ಗೊತ್ತಿದೆ, ಆದರೆ ರೆಗ್ಯುಲೇಟ್ ಮಾಡುವುದಕ್ಕೆ ಆಗುತ್ತಿಲ್ಲ.

ಶ್ರೀ ಅಯನೂರು ಮಂಜುನಾಥ್ : ಸನ್ಮಾನ್ಯ ಅಧ್ಯಕ್ಷರೆ, ನಾನು ಒಂಟಿ ಕಾಲಿನಲ್ಲಿ ನಿಂತಾಗ ಈ ಸಭೆಯಲ್ಲಿ 4 ಬೇಡಿಕೆಗಳನ್ನು ಮಂಡನೆ ಮಾಡಿದ್ದೆ. ವಿಶೇಷವಾಗಿ ಅದು ಮುಖ್ಯಮಂತ್ರಿಗಳ ಜಿಲ್ಲೆ. ಹೊಸ ನಗರ ತಾಲ್ಲೂಕಿನಲ್ಲಿ ರೆವಿನ್ಯೂ ಅಧಿಕಾರಿಗಳು ಹೇಳದೆ ಕೇಳದೆ ರಾತ್ರೋ ರಾತ್ರಿ ಕಾನೂನು ಪಾಲನೆ ಮಾಡದೆ ಅರಣ್ಯ ಇಲಾಖೆಗೆ ಭೂಮಿಯನ್ನು ವರ್ಗಾವಣೆ ಮಾಡಿಬಿಟ್ಟಿದ್ದಾರೆ. ಇದರಿಂದಾಗಿ ಬಗರ್ ಹುಕುಂ ಮಾಡಿದವರಿಗೆ ನಾವು ಮಂಜೂರಾತಿ ಮಾಡಿದರೂ ಪಟ್ಟಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಯಾವ ಜಿಲ್ಲೆಯೊಳಗೆ ರೈತರಿಗೆ ಭೂಮಿ ಸಿಗಬೇಕೆಂದು ಸಮಾಜವಾದಿ ಹೋರಾಟ ಮಾಡಿಕೊಂಡು ಬಂದಿದ್ದರೋ ಅಂಥ ಜಿಲ್ಲೆಯೊಳಗೆ ರೈತರು ಬೀದಿಪಾಲಾಗುತ್ತಿದ್ದಾರೆ. ಆ ಭೂಮಿಯನ್ನು ಕಂದಾಯ ಇಲಾಖೆಗೆ ವಾಪಸ್ ಮಾಡಬೇಕೆಂದು ನಾನು ಪ್ರಶ್ನೆಯನ್ನು ಹಾಕಿದ್ದೆ, ಎರಡನೆಯದಾಗಿ, ಹೊಸನಗರ ತಾಲ್ಲೂಕಿನಲ್ಲಿ ಕಾಲೇಜು ಕಟ್ಟಡದ ಕೆಲಸ 1994ನೇ ಇಸವಿಯಿಂದ ಹಾಗೆ ನಿಂತುಬಿಟ್ಟಿದೆ. 46 ಲಕ್ಷ ರೂಪಾಯಿಗಳ ಎಸ್ಟಿಮೇಟ್‌ನಲ್ಲಿ ಪ್ರಾರಂಭವಾದ ಕಾಲೇಜಿನ ಕೆಲಸ ಇದುವರೆಗೆ 46 ಲಕ್ಷ ರೂಪಾಯಿಗಳಿಗೆ ಕಾಲೇಜು ಇಲ್ಲವಾದ್ದರಿಂದ ಕಟ್ಟಡವನ್ನು ಕೂಡಲೇ ಕಟ್ಟಿಸಿಕೊಡಬೇಕೆಂದು ಮತ್ತು ಅಲ್ಲಿ ಆಗಿರುವ ಅವ್ಯವಹಾರವನ್ನು ತನಿಖೆ ಮಾಡಬೇಕೆಂದು ಪಿ.ಡಬ್ಲ್ಯೂ.ಡಿ ಇಲಾಖೆಗೆ ಸಂಬಂಧಪಟ್ಟಂತೆ ಒಂದು ಪ್ರಶ್ನೆ ಹಾಕಿದ್ದೆ. ಮೂರನೆಯದು, ಕಂದಾಯ ಮಂತ್ರಿಗಳಿಗೆ ಪ್ರಶ್ನೆ ಮಾಡಿದ್ದೇನೆ, ಶಿವಮೊಗ್ಗ ಜಿಲ್ಲೆಯ ವ್ಯಾಪ್ತಿಯನ್ನು 5 ಕಿಲೋಮೀಟರ್ ಜಾಸ್ತಿ ಮಾಡಿರುವುದರಿಂದ ಬಗರಹುಕುಂ ಮಾಡಿರುವವರಿಗೆ ಪಟ್ಟ ಕೊಡುವುದಕ್ಕಾಗುತ್ತಿಲ್ಲವಾದ್ದರಿಂದ, 1991ರ ಮೊದಲು ಯಾರು ಅರ್ಜಿಗಳನ್ನು ಹಾಕಿದ್ದಾರೋ ಅವರುಗಳಿಗೆ ವಿನಾಯಿತಿಯನ್ನು ಕೊಡಿ, ಇಲ್ಲದೆ ಹೋದರೆ, ನಾನು ಶಿವಮೊಗ್ಗ ತಾಲ್ಲೂಕು ಮತ್ತು ಹೊಸನಗರ ತಾಲ್ಲೂಕಿನ ಬಗರ ಹುಕುಂ ಸಾಗುವಳಿ ಕಮಿಟಿಯ ಅಧ್ಯಕ್ಷನಾಗಿದ್ದರೂ ಕೂಡ ಕಿಲೋಮೀಟರ್

ವ್ಯಾಪ್ತಿಯಿಂದಾಗಿ ಭೂಮಿಯನ್ನು ಮಂಜೂರು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಫಾರೆಸ್ಟ್ ಮತ್ತು ಕಂದಾಯ ಅಧಿಕಾರಿಗಳ ವ್ಯಾಪ್ತಿಯನ್ನು ಕಡಿಮೆ ಮಾಡಬೇಕೆಂದು ಕೇಳಿದ್ದೇನೆ, ಇನ್ನು 4ನೆಯ ಮತ್ತು ಕೊನೆಯದಾಗಿ ಶುಗರ್ ಫ್ಯಾಕ್ಟರಿ ಎಂಪ್ಲಾಯಿಸ್‌ಗೆ ಕಳೆದ 9 ತಿಂಗಳಿನಿಂದ ವೇತನ ಸಿಗದೆ ಅವರು ಬೀದಿ ಪಾಲಾಗಿದ್ದಾರೆ. ಕಬ್ಬಿನ ಬೆಳೆಗಾರರಿಗೆ ಸರಿಯಾಗಿ ಹಣ ಸಿಗಲಿಲ್ಲ, ಫ್ಯಾಕ್ಟರಿ ಮುಚ್ಚಿ ಹೋಗಿದೆ. ಈ ನಾಲ್ಕು ಅಂಶಗಳನ್ನು ನಮ್ಮ ಜಿಲ್ಲೆಯವರೇ ಮುಖ್ಯಮಂತ್ರಿಗಳಾಗಿರುವುದರಿಂದ ಈ ಸಂದರ್ಭದಲ್ಲಿ ಅವರ ಗಮನಕ್ಕೆ ತರಬೇಕು ಹಾಗೂ ಪರಿಹಾರ ಕಂಡುಕೊಳ್ಳಬೇಕು ಎನ್ನುವ ಉದ್ದೇಶದಿಂದ ನಾನು ಒಂಟಿಕಾಲಿನ ಮೇಲೆ ನಿಂತಿದ್ದೆ. ಒಂಟಿಕಾಲಿನಲ್ಲಿ ತಪಸ್ಸು ಮಾಡಿದಂಥ ತಪಸ್ವಿಗೆ ಭಗವಂತ ಪ್ರತ್ಯಕ್ಷ ಆಗಿದ್ದ. ವರವನ್ನೂ ಕೊಟ್ಟಿದ್ದ. ಈಗ ಮುಖ್ಯಮಂತ್ರಿಗಳು ಇದ್ದಾರೆ, ಒಂಟಿ ಕಾಲಿನಲ್ಲಿ ನಿಂತು ಎತ್ತಿದ್ದಂಥ ಈ ಸಮಸ್ಯೆಗಳಿಗೆ ಪರಿಹಾರವು ವರದ ರೂಪದಲ್ಲಿ ನಮ್ಮ ಜನಕ್ಕೆ ಸಿಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ರೇವುನಾಯಕ ಬೆಳಮಾಗಿ : ಸನ್ಮಾನ್ಯ ಅಧ್ಯಕ್ಷರೆ, ಕಡೆಯ ದಿವಸವಾದರೂ ನನಗೆ ಮಾತನಾಡಲು ಅವಕಾಶ ಕೊಟ್ಟು ತಮಗೆ ವಂದನೆಯನ್ನು ಸಲ್ಲಿಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ, ರಾಜ್ಯದ ಕೃಷಿಕರಿಗೆ ಹೆಚ್ಚಿನ ಆದ್ಯತೆ ಕೊಟ್ಟಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ, ಮಾನ್ಯ ಅಧ್ಯಕ್ಷರೆ, ನಾನು ನೊಂದು ಹೇಳುತ್ತಿದ್ದೇನೆ, 1993-94ನೇ ಸಾಲಿನಲ್ಲಿ ಕಬ್ಬು ಸರಬರಾಜು ಮಾಡಿರುವ ರೈತರುಗಳಿಗೆ ಇನ್ನೂ ಹಣ ಪಾವತಿಯಾಗಿಲ್ಲ. ತೊಗರಿ ಬೆಳೆಯಾಗಲೀ, ರಾಗಿ ಆಗಲೀ, ಜೋಳ ಆಗಲಿ, ಗೋಧಿ ಆಗಲೀ ಬೆಳೆಯಬೇಕಾದರೆ ವರ್ಷದ 12 ತಿಂಗಳಲ್ಲೂ ರೈತರುಗಳು ಬೆವರು ಸುರಿಸಿ ನೊಂದು ಕೆಲಸ ಮಾಡಬೇಕಾಗುತ್ತದೆ. ಫ್ಯಾಕ್ಟರಿಗಳನ್ನು ಮಾಡುವ ಬಗ್ಗೆ ಸರ್ಕಾರವು ಸಬ್ಸಿಡಿ ಕೊಡುತ್ತಿದೆ. ಆದರೆ, ರೈತರು ಬೆಳೆದಂಥ ಬೆಳೆಗಳಿಗೆ ನಿರ್ದಿಷ್ಟ ಧಾರಣೆ ಕೂಡ ಕೊಡುತ್ತಿಲ್ಲ. ತೊಗರಿ ಬೆಳೆ ಬೆಳೆಯಬೇಕಾಗುತ್ತದೆ, ಬಹಳ ಮೆಹನತ್ ಮಾಡಬೇಕಾಗುತ್ತದೆ, ಆದ್ದರಿಂದ ತೊಗರಿ ಬೆಳೆಗೆ ಟನ್ ಒಂದಕ್ಕೆ ಕನಿಷ್ಠ 2 ಸಾವಿರ ರೂಪಾಯಿಗಳನ್ನಾದರೂ ಸರ್ಕಾರ ಕೊಡಬೇಕು. ಮತ್ತು ಅಳಂದ ತಾಲ್ಲೂಕಿನಲ್ಲಿ ಕಬ್ಬು ಬೆಳೆದ ರೈತರುಗಳು ಶುಗರ್ ಫ್ಯಾಕ್ಟರಿಗೆ ಸಪ್ಲೈ ಮಾಡಿದ ಮೇಲೆ ರೈತರುಗಳಿಗೆ ಇನ್ನೂ ಹಣ ಪಾವತಿ ಮಾಡಿಲ್ಲದೆ ಇರುವುದರಿಂದ ಆದಷ್ಟು ಬೇಗ ರೈತರುಗಳಿಗೆ ಕಬ್ಬಿನ ಹಣವನ್ನು ಕೊಡಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಆಮೇಲೆ ಗುಲ್ಬರ್ಗಾ ಜಿಲ್ಲೆಯ 19 ಹಳ್ಳಿಗಳಲ್ಲಿ ಅನಾವೃಷ್ಟಿ ಮಳೆಯಿಂದ ಅಲ್ಲಿ ಬೆಳೆದ ಜೋಳ, ಗೋಧಿ ಮತ್ತು ಅನೇಕ ಇತರ ಬೆಳೆಗಳು ನಾಶವಾಗಿವೆ. ಈ ಬಗ್ಗೆ ಜಿಲ್ಲಾಧಿಕಾರಿಗಳು ಮತ್ತು ಕೃಷಿ ಅಧಿಕಾರಿಗಳು ಬಂದು ನೋಡುಕೊಂಡು ಹೋಗಿದ್ದಾರೆ. ಆ ಬಗ್ಗೆ ಯಾವಾಗ ಪರಿಹಾರವನ್ನು ಕೊಡಲಾಗುತ್ತದೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತಿದ್ದೇನೆ.

ಶ್ರೀ ಕೆ. ಶ್ರೀನಿವಾಸ ಗೌಡ : ಮಾನ್ಯ ಅಧ್ಯಕ್ಷರೆ, ಇನ್ನು ಮುಂದಕ್ಕೆ ರೈತರುಗಳು ಹಾಕಿಕೊಂಡಿರುವ ಪಂಪಸೆಟ್ಟುಗಳಿಗೆ ಮೀಟರುಗಳನ್ನು ಅಳವಡಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ, ಆ ಬಗ್ಗೆ ನನಗೆ ಒಂದು ಸ್ಪಷ್ಟೀಕರಣ ಬೇಕಾಗಿದೆ. ವಿದ್ಯುಚ್ಛಕ್ತಿ ದರವನ್ನು ನಿಗದಿ ಮಾಡುವ ಬಗ್ಗೆ ನೇಮಿಸಲಾಗಿದ್ದ ಸದನ ಸಮಿತಿಯಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೆ. ಆ ಸಮಿತಿಯಲ್ಲಿ, ಒಂದು ಹೆಚ್.ಪಿ.ಗೆ ನೂರು ರೂಪಾಯಿ ಹಾಕಬೇಕೆಂದು ತೀರ್ಮಾನ ಮಾಡಲಾಗಿತ್ತು, ಅದರಂತೆ ಒಂದು ಹೆಚ್.ಪಿಗೆ ನೂರು ರೂಪಾಯಿಗಳನ್ನೇ

ಫಿಕ್ಸ್ ಮಾಡುತ್ತಾರೋ ಅಥವಾ ಯೂನಿಟ್ ಆಧಾರದ ಮೇಲೆ ಫಿಕ್ಸ್ ಮಾಡುತ್ತಾರೋ ಎಂಬ ಬಗ್ಗೆ ಸ್ಪಷ್ಟೀಕರಣ ಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ಪಂಪ್‌ಸೆಟ್ಟುಗಳು ಜಾಸ್ತಿ ಇರುವುದರಿಂದ ನಮಗೆ ಈ ಬಗ್ಗೆ ಸ್ಪಷ್ಟೀಕರಣ ಬೇಕಾಗಿದೆ.

5.40 ಪಿ.ಎಂ

ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವಾಗ ಒಂದು ಆಪಾದನೆಯನ್ನು ಮಾಡಿದ್ದೆ. ಅದೇನೆಂದರೆ ತಾರೀಖು 25.06.91ರಂದು 15 ಎಕರೆ 28 ಗುಂಟೆ ಜಮೀನನ್ನು ಐಎಎಸ್ ಆಫೀಸರ್ಸ್ ಅಸೋಸಿಯೇಷನ್‌ಗೆ ಅತ್ಯಂತ ಕಡಿಮೆ ರೇಟಿನಲ್ಲಿ ಅಂದರೆ ಆರು ಲಕ್ಷ 90 ಸಾವಿರ ಒಂದು ಎಕರೆಗೆ ಎಂದು ತಾವು ಮಂಜೂರು ಮಾಡಿದ್ದೀರಿ ಆದರೆ. ಅದರ ಬೆಲೆ ಕೋಟ್ಯಾಂತರ ರೂಪಾಯಿಗಳು ಆಗುತ್ತದೆ. ಅದರ ಪಕ್ಕದ ಜಮೀನಿಗೆ ತಾವು 25ಲಕ್ಷ ರೂಪಾಯಿ ಎಕರೆಯಂತೆ ಭಾರತ ಸರ್ಕಾರಕ್ಕೆ ಪೋಸ್ಟ್ ಆಫೀಸ್ ಕಟ್ಟುವುದಕ್ಕೆ ಕೊಟ್ಟಿದ್ದೀರಿ. ಮತ್ತು ಎನ್‌ಜಿಎಫ್ ಜೊತೆ ಐದು ಕೋಟಿ ರೂಪಾಯಿ ವ್ಯಾಪಾರ ಮಾಡುತ್ತಿದ್ದೀರಿ. ಕೋಟ್ಯಾಂತರ ರೂಪಾಯಿ ಸರ್ಕಾರಕ್ಕೆ ಲುಕ್ಸಾನು ಆಗುತ್ತದೆ ಎಂದು ನಾನು ಹೇಳಿದ್ದೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು. ಇನ್ನೊಂದು ಸಣ್ಣ ವಿಚಾರ ಇದೆ. ನ್ಯಾಶನಲ್ ಸ್ಪೋರ್ಟ್ಸ್ ವಿಚಾರದಲ್ಲಿ ಈಗಾಗಲೇ 800 ಲಕ್ಷ ರೂಪಾಯಿ ರಿಲೀಸ್ ಆಗಿದೆ, 250 ಲಕ್ಷ ರೂಪಾಯಿ ರಿಲೀಸ್ ಆಗಿದೆ. ಮತ್ತು 500 ಲಕ್ಷ ರೂಪಾಯಿಗಳಲ್ಲಿ 250 ಮತ್ತೆ ರಿಲೀಸ್ ಆಗಿದೆ. ತಾವು ಈಗ 1300 ಲಕ್ಷ ರೂಪಾಯಿಗಳನ್ನ ಕೊಡುತ್ತಿದ್ದೀರಿ. ಪ್ಲಾನ್ ಅಂಡ್ ಎಸ್ಟಿಮೇಷನ್ ಕೊಡಲಿಲ್ಲ. ಇದರ ಬಗ್ಗೆ ನಾವು ತನಿಖೆ ನಡೆಸಬೇಕು ಎಂದು ಹೇಳಿದ್ದೆವು. ಸಿ. ಓಡಿಗಾದರೂ ಒಪ್ಪಿಸಿ ಅಥವಾ ಹೌಸ್ ಕಮಿಟಿ ಮಾಡಿ ಎಂದು ಹೇಳಿದ್ದೆವು. ಅದರ ಬಗ್ಗೆ ತಾವು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಈಗ ಅವರ ಸಂಪೂರ್ಣ ಭಾಷಣಕ್ಕೆ ನಾವೇನೂ ಕೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ ಗಂಟೆಗಟ್ಟಲೆ ಬೇಕಾಗುತ್ತದೆ, ಅದನ್ನು ಬಿಟ್ಟು ಬಿಟ್ಟಿದ್ದೇವೆ. ಈಗ ಒಂದೇ ಒಂದು ಪ್ರಶ್ನೆ. ವಿಶ್ವಸುಂದರಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಪೋಲೀಸ್‌ನವರಿಗೆ ಭತ್ಯೆ ಕೊಡುವ ವಿಚಾರ. 12 ರೂಪಾಯಿ ಒಂದು ತಿಂಗಳಿಗೆ ಕೊಡುತ್ತಿದ್ದಾರೆ. ಇದನ್ನು ನೂರು ರೂಪಾಯಿ ಮಾಡಬೇಕು ಎಂಬ ಬೇಡಿಕೆ ಇದೆ. ಸಾಮಾನ್ಯ ಪೋಲೀಸ್‌ನವರ ಪ್ರಶ್ನೆ ಇದು. ವಿಶೇಷವಾಗಿ ಕೋರ್ಟ್‌ನಲ್ಲಿ ಡ್ಯುಟಿಯಲ್ಲಿರತಕ್ಕವರಿಗೆ ಒಂದು ದಿನಕ್ಕೆ 20 ರೂಪಾಯಿ ಕೊಡಬೇಕು ಎನ್ನತಕ್ಕ ವಿಚಾರ ಇದೆ. ವಿಶ್ವಸುಂದರಿ ಸ್ಪರ್ಧೆಯಲ್ಲಿ ಪೋಲೀಸ್‌ನವರ ಕೆಲಸಕ್ಕೋಸ್ಕರವಾಗಿ ಎಂದು ಅವರಿಂದ ಐದು ಕೋಟಿ ರೂಪಾಯಿ ದುಡ್ಡು ಸಂಗ್ರಹ ಮಾಡಿದರು, ಆ ದುಡ್ಡನ್ನು ಪೋಲೀಸ್‌ನವರಿಗೆ ಹಂಚಿಲ್ಲ. ಅವರ ಭತ್ಯೆಗೆ ಇದುವರೆಗೂ ಹಂಚಿಲ್ಲ. ಆ ದುಡ್ಡು ಏನು ಆಯಿತು? ಭತ್ಯೆ ಹಂಚಿದ್ದಾರಾ? ಅಷ್ಟು ಸಾಕು. ಮಿಕ್ಕಿದ್ದು ನಾವು ಹೇಳುವುದಕ್ಕೆ ಹೋದರೆ ಬಹಳ ಸುದೀರ್ಘ ಆಗುತ್ತದೆ. ಧರಣ ಪತಣ ಮಾಡಬೇಡಿ ಎಂದು ಹೇಳಿಬಿಟ್ಟಿದ್ದಾರೆ. ಮತ್ತು ಸಭಾತ್ಯಾಗ ಮಾಡಿ ಎಂದು ಹೇಳಿದ್ದಾರೆ. ಇದು ನೋಡಿದಾಗ ನಮಗೆ ಸ್ವಲ್ಪ ಭಯ ಭೀತಿ ಬರುತ್ತಿದೆ. ನಾವು ಅದನ್ನೇ ಮಾಡುತ್ತೇವೆ. ಅವರು ಏನು ಬೇಕಾದರೂ ತಿಳಿದುಕೊಳ್ಳಲಿ. ಸಭಾತ್ಯಾಗ ಮಾಡುತ್ತೇವೆ, ಧರಣಿ ಮಾಡುತ್ತೇವೆ, ಮಾಡಬೇಕಾಗುತ್ತದೆ. ಹಿಂದೆ ಈ ಸದನದಲ್ಲಿ

ಅವರಿಗೂ ಗೊತ್ತಿದೆ. 1967 ರಲ್ಲಿ ಕೆ.ಎಚ್.ರಂಗನಾಥ ಅವರು ಇದ್ದರು; ಎಸ್.ಎಂ.ಕೃಷ್ಣ ಅವರು ಇದ್ದರು. ಎಸ್. ಶಿವಪ್ಪನವರು, ಚನ್ನಬಸಪ್ಪನವರು, ಸಿದ್ಧವೀರಪ್ಪನವರೂ ಇದ್ದರು. ಇಲ್ಲಿ ಒಂದು ವಾರ ಧರಣಿ ನಡೆಯಿತು. ಒಂದು ದಿನ ಎರಡು ದಿನ ಅಲ್ಲ. ಒಂದು ವಾರ ಹಗಲೂ ರಾತ್ರಿ ಧರಣಿ ಮಾಡಿದರು. ಅವತ್ತು ಎಂ. ವಿ. ರಾಮರಾಯರು ಗೃಹ ಮಂತ್ರಿಗಳಾಗಿದ್ದರು. ಶ್ರೀಮಾನ್ ಗೋಪಾಲ ಗೌಡರು ಆರೋಪ ಮಾಡಿದ ತಕ್ಷಣ ರಾಜೀನಾಮೆ ಕೊಟ್ಟುಬಿಟ್ಟರು. ಈಗ ನಾವು ದಿನವೆಲ್ಲಾ ಧರಣಿ ಅಲ್ಲ, ಉರುಳು ಸೇವೆ ಮಾಡಿದರೂ ಏನೂ ಆಗುವುದಿಲ್ಲ. ಅದಕ್ಕೋಸ್ಕರ ಧರಣಿ ಮಾಡಬೇಡಿ, ಸತ್ಯಾಗ್ರಹ ಮಾಡಬೇಡಿ ಎಂದರೆ ಪರಿಸ್ಥಿತಿ ಏನು? ಅವತ್ತಿನ ಪರಿಸ್ಥಿತಿ ಬೇರೆ, ಇವತ್ತಿನ ಪರಿಸ್ಥಿತಿ ಬೇರೆ.

ಅಧ್ಯಕ್ಷರು : ಸ್ಪಷ್ಟೀಕರಣ ಕೇಳಿ

ಶ್ರೀ ವಾಟಾಳ್ ನಾಗರಾಜ್ : ಹಿಂದೆ ಒಂದು ವಾರ ಧರಣಿ ಮಾಡಿದ್ದಾರೆ. ಈಗ ಸಂದರ್ಭ ಬಂದಾಗ ಧರಣಿ ಮಾಡಬೇಕಾಗುತ್ತದೆ. ಪರಿಸ್ಥಿತಿ ತಮಗೆ ಗೊತ್ತಿದೆ. ನಾನು ಜಾಸ್ತಿ ಹೇಳುವುದಕ್ಕೆ ತಯಾರಾಗಿಲ್ಲ. ಆದರು ಸರಿ ಇಲ್ಲ ಇವರು ಸರಿ ಇಲ್ಲ ಎಂದು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಧರಣಿ ಮಾಡತಕ್ಕದ್ದು ಪ್ರಜಾಪ್ರಭುತ್ವದಲ್ಲಿ ಇದ್ದದ್ದೇ, ಸಭಾತ್ಯಾಗ ಮಾಡತಕ್ಕದ್ದು ಇದ್ದದ್ದೇ. ಅದನ್ನು ತೆಗೆದುಹಾಕತಕ್ಕ ಪ್ರಶ್ನೆ ಇಲ್ಲ. ಅದು ಅವರಿಗೆ ಸೇರಿದ್ದುದು, ಅದನ್ನು ಬಿಟ್ಟು ಬಿಡೋಣ. ಸಾಮಾನ್ಯ ಪೋಲೀಸ್‌ನವರಿಗೆ ಕೊಡತಕ್ಕ ಭತ್ಯೆ ಬಗ್ಗೆ ತಾವು ಹೇಳಿ. ನಾವು ಸುದೀರ್ಘವಾಗಿ ಪೋಲೀಸ್‌ನವರ ಬಗ್ಗೆ ಮಾತನಾಡಿದೆವು, ತಾವು ಅದರ ಬಗ್ಗೆ ಉತ್ತರ ಕೊಡಲಿಲ್ಲ. ಅದರ ಬಗ್ಗೆ ನಾನು ಚಿಂತೆ ಪಡುವುದಕ್ಕೆ ಹೋಗುವುದಿಲ್ಲ. ಇವತ್ತು ತಾವು ಬೆಳಿಗ್ಗೆ ಪತ್ರಿಕೆಯಲ್ಲಿ ನೋಡಿರಬಹುದು. ಒಬ್ಬ ಹೆಣ್ಣು ಮಗಳನ್ನು ಬೆಂಗಳೂರು ನಗರದಲ್ಲಿ ಆರು ಜನ ಎಳೆದುಕೊಂಡು ಹೋಗಿ ಅತ್ಯಾಚಾರ ಮಾಡಿದ್ದಾರೆ. ನಾನು ವಿಚಾರ ಹೇಳಿದೆ. ಅದು ಹಾಳಾಗಿ ಹೋಗಲಿ. ಅದರ ಬಗ್ಗೇನೂ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಪೋಲೀಸ್‌ನವರಿಗೆ ಕೊಡತಕ್ಕ ಭತ್ಯೆ ಬಗ್ಗೆ ಅವರು ಹೇಳಿ ಬಿಟ್ಟರೆ ಸಾಕು.

ಅಧ್ಯಕ್ಷರು : ಸುಮಾರು ಜನ ಸದಸ್ಯರು ಹೇಳಿದ್ದಾರೆ. ತಾವು ಹೇಳುವ ಹಾಗೆ ಇದ್ದರೆ ಹೇಳಿ.

ಶ್ರೀ ಬಿ. ಎಸ್. ಪಾಟೀಲ್ : ಅಧ್ಯಕ್ಷರೆ, ಒಂದು ಕ್ಲಾರಿಫಿಕೇಶನ್ ಕೇಳುತ್ತಿದ್ದೇನೆ 1995-96ನೇ ಸಾಲಿಗೆ ಕೋಆಪರೇಟೀವ್ ಲೋನನ್ನು ರೈತರ ಸಮಯಕ್ಕೆ ಸರಿಯಾಗಿ ಕಟ್ಟಿದರೆ, ಐದು ಪರ್ಸೆಂಟ್ ರಿಯಾಯಿತಿ ಬಡ್ಡಿಯಲ್ಲಿ ಕೊಡುತ್ತಿದ್ದರು. ಅದನ್ನು ಇದುವರೆಗೆ ತುಂಬಿ ಕೊಟ್ಟಿಲ್ಲ. ಮತ್ತೆ ಈ ವರ್ಷ ಅದನ್ನು ಅನ್ವಯ ಮಾಡುತ್ತೀರೋ ಇಲ್ಲವೋ ಎನ್ನುವ ವಿಚಾರ ಮಾನ್ಯ ಸಹಕಾರ ಸಚಿವರು ತಿಳಿಸಬೇಕು, ಅವರು ಆಗ ಇರಲಿಲ್ಲ.

ಶ್ರೀ ಎಸ್. ಎಸ್. ಪಾಟೀಲ್ (ಸಹಕಾರ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ನಾವು ರೈತರು ಸಕಾಲದಲ್ಲಿ ಸಾಲವನ್ನು ಕಟ್ಟಿದಂತಹವರಿಗೆ ಐದು ಪರ್ಸೆಂಟ್ ಇನ್‌ಸೆಂಟೀವ್ ಕೊಡಬೇಕು ಎಂದರೆ ತೀರ್ಮಾನ ಮಾಡಿ ಹೇಳಿದ್ದೆವು. ಆದರೆ ನಾವು ಇಲ್ಲಿ ಹೇಳಿದ ತಕ್ಷಣ ನಬಾರ್ಡ್‌ನವರು ನಮಗೆ

ನೋಟೀಸ್ ಕೊಟ್ಟರು. ನಾವು ನಿಮಗೆ ಹಣ ಪುನಃ ತಡೆ ಹಿಡಿಯುತ್ತೇವೆ, ನೀವು ಆ ರೀತಿ ಮಾಡಬಾರದು. ಆರ್ಥಿಕ ಸ್ಥಿತಿ ಹಾಳಾಗುತ್ತದೆ ಎಂದು ನಮಗೆ ಆಬ್ಜೆಕ್ಷನ್ ಮಾಡಿದ್ದಾರೆ. ಆದರಿಂದ ಅದು ನಿಂತಿದೆ. ಆದರೂ ಸಹ ನಬಾರ್ಡ್‌ನವರನ್ನು ಒಪ್ಪಿಸಿ ಕೊಡುವಂತಹ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಈ ವರ್ಷ ಅನ್ವಯ ಮಾಡುತ್ತೀರೋ?

ಶ್ರೀ ಎಸ್.ಎಸ್. ಪಾಟೀಲ : ಈ ವರ್ಷ ಕೊಡುತ್ತೇವೆಂದು ನಾವು ಹೇಳಿಲ್ಲ. ಆವಾಗಿನಿಂದ ಬಂದಿರುವ ಪ್ರಶ್ನೆ ಇದು.

ಶ್ರೀ ಬಿ. ಎಸ್. ಯಡಿಯೂರಪ್ಪ : ಈ ವರ್ಷ ಕೊಡುವುದಿಲ್ಲವೇ? ಈ ವರ್ಷವಾದರೂ ಕೊಡುತ್ತೀರೋ ಇಲ್ಲವೋ ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಈ ವರ್ಷ ನಾವು ಇನ್ನೂ ಹೇಳಿಲ್ಲ. ಇದು ಹೋದ ವರ್ಷದ ಪ್ರಶ್ನೆ ನಬಾರ್ಡ್‌ನವರು ಅಡ್ಡ ಇದ್ದಾರೆ. ನಬಾರ್ಡ್‌ನವರಿಂದ ತಡೆ ಹೋದರೆ ನಾವು ಕೊಡುತ್ತೇವೆ. ಅವರು ಕೊಡಲಿಕ್ಕೆ ಒಪ್ಪುತ್ತಾ ಇಲ್ಲ.

ಶ್ರೀ ಬಿ. ಎಸ್.ಯಡಿಯೂರಪ್ಪ : ನಿಮ್ಮ ಸರ್ಕಾರದ ಕಮಿಟ್‌ಮೆಂಟ್. ನಾನು ಹೇಗೆ ಮಾತನಾಡಬೇಕು ಎಂದು ನನಗೆ ಜವಾಬ್ದಾರಿ ಇದೆ. ತಾವೇ ನಿಮ್ಮ ಸರ್ಕಾರದವರು ಘೋಷಣೆ ಮಾಡಿದ್ದನ್ನು ನಬಾರ್ಡ್‌ನವರು ಎಲ್ಲದಕ್ಕೂ ಅಬ್ಜೆಕ್ಷನ್ ಮಾಡಿಕೊಂಡು ಬರುತ್ತಿದ್ದಾರೆ. 1995-96 ವಿಚಾರ ಇದು. ಈ ವರ್ಷ ನೀವು ಕೊಡದೇ ಹೋದರೆ ನಾವು ಕೇಳುವುದಕ್ಕೆ ಹೋಗುವುದಿಲ್ಲ. ನೀವು ಹೇಳಿದ್ದೀರಿ;

ಶ್ರೀ ಎಸ್.ಎಸ್. ಪಾಟೀಲ : ನಮಗೆ ನಿಮಗಿಂತ ಅವರಿಗೆ ಬಡ್ಡಿಯಲ್ಲಿ ರಿಯಾಯಿತಿ ಕೊಡಬೇಕೆಂದು ಒಲವು ಇದೆ. ಆದರೆ ಏನು ಆಗಿದೆ ಎಂದರೆ ನಾವು ಇಲ್ಲಿ ಸ್ಟೇಟ್‌ಮೆಂಟ್ ಕೊಟ್ಟ ತಕ್ಷಣ ನಮಗೆ ಒಂದು ನೋಟೀಸ್ ಬಂತು. ಹಿಂದೊಮ್ಮೆ ತಡೆ ಹಿಡಿದಿದ್ದರು ಹಾಗೆ ಈ ವರ್ಷವೂ ಫೈನಾನ್ಸ್ ತಡೆ ಹಿಡಿದು ಬಿಡುತ್ತಿದ್ದರು.

ಶ್ರೀ ಬಿ. ಎಸ್. ಯಡಿಯೂರಪ್ಪ : ನಾನು ಏಕೆ ಹೇಳುತ್ತಿದ್ದೇನೆ ಎಂದರೆ ನಮ್ಮ ಕಾರ್ಯಕ್ರಮ ಇದೆ. ನಿಮ್ಮ ಬಜೆಟ್ ಅಧಿವೇಶನ ಪ್ರಾರಂಭದ ದಿನ ರೈತರನ್ನು ಕರದುಕೊಂಡು ಬರುತ್ತೇವೆ. ನಬಾರ್ಡ್‌ವಿಚಾರ ನಮ್ಮ ರೈತರಿಗೆ ಗೊತ್ತಿಲ್ಲ, ಕಾನೂನು ಗೊತ್ತಿಲ್ಲ, ನೀವು ಹೇಳಿದಿರಿ, ಸಾಲ ತೆಗೆದುಕೊಂಡು ಬಂದು ಮರು ಪಾವತಿ ಮಾಡಿದ್ದಾರೆ. ಐದು ಪರ್ಸೆಂಟ್ ನೀವು ಆವಾಗ ಹಿಡಿದುಕೊಂಡೇ ಕಟ್ಟಿ ಎಂದು ಹೇಳಬೇಕಾಗಿತ್ತು. ನಿಮ್ಮನ್ನು ನಂಬಿ ಅವರು ಕಟ್ಟಿದ್ದಾರೆ. ವಾಪಸ ಕೊಡದೇ ಇದ್ದರೆ ಏನು ವಿಚಾರ ಇದು? ಮುಖ್ಯ ಮಂತ್ರಿಗಳು ಧರಣಿ ಮಾಡಬೇಡಿ ಎಂದು ಹೇಳಿದ್ದಾರೆ. ನಿಮ್ಮ ಮನೆ ಮುಂದೆ ಬಂದು ಧರಣಿ ಕುಳಿತುಕೊಳ್ಳಬೇಕಾಗುತ್ತದೆ, ಉಪವಾಸ ಕುಳಿತುಕೊಳ್ಳಬೇಕಾಗುತ್ತದೆ. ದಯಮಾಡಿ ಸರ್ಕಾರದ ಸ್ಪಷ್ಟ ನಿಲುವನ್ನು ಹೇಳಬೇಕಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ನಮ್ಮ ನಿಲುವು ಅದೇ, ನಬಾರ್ಡ್ ನವರು ಒಪ್ಪಿದರೆ ಖಂಡಿತವಾಗಿ ನಾವು ಕೊಡುತ್ತೇವೆ.

ಒಬ್ಬ ಮಾನ್ಯ ಸದಸ್ಯರು : ಅವರು ಒಪ್ಪಿಲ್ಲ ಎಂದರೆ ತಾವು ಒಪ್ಪಿಸಬೇಕಲ್ಲ.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಯಡಿಯೂರಪ್ಪನವರು, ಮಾನ್ಯ ರಾಮಕೃಷ್ಣ ಅವರುಗಳು ಹೇಳಿದ್ದನ್ನೆಲ್ಲಾ ಆಗಲೇ ಪ್ರಸ್ತಾಪ ಮಾಡಿದ್ದೇನೆ. ಇದರೊಳಗೆ ಹೊಸದಾಗಿ ಯಾವುದೂ ಇಲ್ಲ. ಆದರೂ ಇದಕ್ಕೆ ತಕ್ಕ ಉತ್ತರವನ್ನು ತಕ್ಕ ವ್ಯವಸ್ಥೆಯನ್ನು ಮಾಡಿಸುತ್ತೇನೆ. ನಾವು ಮೀಟರ ಅಳವಡಿಸಿದರೂ ಹೆಚ್.ಪಿ ಆಧಾರದ ಮೇಲೆ ಹಾಕುತ್ತೇವೆ. ಮೀಟರ್ ಅಳವಡಿಸುವುದು ಎಷ್ಟು ವಿದ್ಯುತ್ತನ್ನು ನಾವು ಬಳಸುತ್ತೇವೆ ಎಂದು ತಿಳಿದುಕೊಳ್ಳುವುದಕ್ಕೆ.

ಅಧ್ಯಕ್ಷರು : ಪ್ರಶ್ನೆ ಏನೆಂದರೆ

> "ಫೆಬ್ರವರಿ 11, 1997ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞನಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ"

"ಪ್ರಸ್ತಾವನ್ನು ಅಂಗೀಕರಿಸಲಾಯಿತು"

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರ ನಾವು ಹೇಳಿದಂತಹ ಯಾವುದೇ ರೈತರ ಸಮಸ್ಯೆಗೆ ಉತ್ತರ ಕೊಡಲಿಲ್ಲ. ರೈತ ವಿರೋಧಿ ಸರ್ಕಾರಕ್ಕೆ ಪ್ರತಿಭಟನೆ ಮಾಡಿ ನಾವು ಈ ಸದನದಿಂದ ಹೊರಗೆ ಹೋಗುತ್ತಿದ್ದೇವೆ. ಕರೆಂಟ್ ಇಲ್ಲ ಮೀಟರ್ ಹಾಕಬೇಡಿ ಎಂದರೆ ಮೀಟರ್ ಹಾಕುತ್ತಾರೆ.

(ಮಾನ್ಯ ಬಿಜೆಪಿ ಸದಸ್ಯರುಗಳು ಮಾನ್ಯ ಯಡಿಯೂರಪ್ಪನವರ ಜೊತೆ ಸಭಾತ್ಯಾಗ ಮಾಡಿದರು)

(ಗೊಂದಲ)

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ :

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ದಿನಾಂಕ 27ನೇ ಫೆಬ್ರವರಿ, 1997ರಂದು ಕರ್ನಾಟಕ ವಿಧಾನ ಪರಿಷತ್ತು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತೇನೆ"

1) ಕರ್ನಾಟಕ ಧನ ವಿನಿಯೋಗ ವಿಧೇಯಕ, 1997

2) ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 1997

(ಮಾನ್ಯ ಸದಸ್ಯರಾದ ಶ್ರೀ ಜಿ.ಪಿ. ಶ್ರೀರಾಮ ರೆಡ್ಡಿಯವರು ಸಭಾತ್ಯಾಗ ಮಾಡಿದರು.)

(ಮಾನ್ಯ ಸದಸ್ಯರಾದ ಶ್ರೀವಾಟಾಳ್‌ನಾಗರಾಜ್ ಅವರು ಸಭಾತ್ಯಾಗ ಮಾಡಿದರು.)

(ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಯಾವುದೇ ಜವಾಬ್ದಾರಿ ಉತ್ತರ ದೊರಕಲಿಲ್ಲ ಎಂದು ಮಾನ್ಯ ರೈತರ ಸಂಘ ಸದಸ್ಯರಾದ ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರು ಸಭಾತ್ಯಾಗ ಮಾಡಿದರು.)

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಮೀಟರ್ ವಿಚಾರ ಏನು ಇದೆಯಲ್ಲಾ, ಮೀಟರ್ ಹಾಕುವುದರಿಂದ ರೈತರಿಗೆ ತೊಂದರೆ ಆಗುತ್ತದೆ ಎನ್ನತಕ್ಕ ಪ್ರಸ್ತಾವನೆಯನ್ನು ಮಾಡಿದಮೇಲೆ, ಕೂಡ ಪುನಃ ನಾವು ಅದನ್ನೇ ಮಾಡುತ್ತೇವೆ ಎಂದರೆ ಹೇಗೆ? ತಾವು ಏನು ಹೇಳಿದಿರಿ ಅಂದರೆ ಮೀಟರ್ ಅಳವಡಿಸಿದ ಮೇಲೆ ಮೂರು ಕಂತಿನಲ್ಲಿ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಿರಿ. 960 ರೂಪಾಯಿ ಈಗ ತೆಗೆದುಕೊಳ್ಳುವುದಿಲ್ಲ, ಅದನ್ನೂ ತೆಗೆದು ಹಾಕಿದ್ದೇವೆ ಎನ್ನತಕ್ಕದ್ದು. ಮತ್ತು ಯಾವುದು ವರ್ಕ್ ಆರ್ಡರ್ ಇಶ್ಯೂ ಮಾಡಿದ್ದೇವೆ. ಅದಕ್ಕಂತೂ ನಾವು ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. ಆದರೆ ಈಗ ನೋಟೀಸ್ ನಮಗೂ ಕೂಡ ಬಂದು ಕೊಟ್ಟಿರಬಹುದು. ಪೆನಾಲ್ಟಿ ಕಡಿಮೆ ಆದರೂ ಸಹ ಎಲ್ಲಕ್ಕೂ ಕೂಡ ಪೆನಾಲ್ಟಿ ಎಂದು ಟ್ರೀಟ್ ಮಾಡುತ್ತಿದ್ದಾರೆ. ತಾವು ಹೇಳುವುದು ಒಂದು, ಆದೇಶ ಕೊಡುವುದು ಒಂದು ಆಗಿದೆ.

ಅಧ್ಯಕ್ಷರು : ಬೆಳಿಗ್ಗೆ ಮಾನ್ಯ ದರ್ಶನಾಪುರ ಅವರು ಏನು ಹೇಳಿದರು ಎಂದರೆ ಕಮ್ಯುನಿಕೇಶನ್ ಗ್ಯಾಪ್‌ನಿಂದ ಅಲ್ಲಿ ಯಾವುದಾದರೂ ಆ ಭಾಗದಲ್ಲಿ ಆ ರೀತಿ ಆಗಿರುತ್ತದೆ ಎಂದು ಹೇಳಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೇಳಿದರು. ಆದರೆ ಇವರು ಪುನಃ ಈಗ ಪ್ರಸ್ತಾಪ ಮಾಡಿದರು. ನಾವು ಮೀಟರ್ ಹಾಕಲೇಬೇಕಾಗುತ್ತದೆ. ಎಷ್ಟು ಕನ್‌ಸ್ಯೂಮ್ ಮಾಡುತ್ತಾರೆಂದು ತಿಳಿದುಕೊಳ್ಳಲು ಹಾಕುತ್ತೇವೆ ಎಂದರು. ಇವರು ಮೀಟರ್ ಹಾಕುತ್ತೇವೆ ಎಂದಾಗ ಅವರು ಅಡ್ವಾನ್ಸ್‌ನಲ್ಲಿ ದುಡ್ಡನ್ನು ವಸೂಲು ಮಾಡುತ್ತಿದ್ದಾರೆ. ಮೀಟರ್ ಹಾಕುವುದು ಮುಂದೆ. ನಾನು ಏಕೆ ಹೇಳುತ್ತಿದ್ದೇನೆ ಎಂದರೆ ಮೀಟರ್ ಹಾಕಿದ ಮೇಲೆ ದುಡ್ಡು ತೆಗೆದುಕೊಳ್ಳುತ್ತೇವೆ ಎನ್ನತಕ್ಕವರು, ಮೊದಲೇ ದುಡ್ಡು ವಸೂಲಿ ಮಾಡುತ್ತೇವೆ ಎಂದರೆ ಇದೊಂದು ಡ್ಯುಯಲ್ ಪಾಲಿಸಿ ಎರಡನೆಯದು ನಾನೊಂದು ಕ್ಲಾರಿಫಿಕೇಶನ್ ಕೇಳಿದೆ, ಅದಕ್ಕೆ ಉತ್ತರ ಹೇಳಲಿಲ್ಲ.

ಅಧ್ಯಕ್ಷರು : ಮೋಷನ್ ಮೂವ್ ಆಯಿತಲ್ಲ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 118 ಕೋಟಿ ರೂಪಾಯಿ ಬಗ್ಗೆ ಹೇಳಲಿಲ್ಲ. ಈ ಎಕ್ಸೈಸ್ ರೂಲ್ ವಿತ್ ಡ್ರಾ ಮಾಡುವ ಬಗ್ಗೆನೂ ಹೇಳಲಿಲ್ಲ. ಅದಕ್ಕಾಗಿ ನಮ್ಮ ಇನ್ನೊಂದು ವಿಚಾರ ಇದೆ.

ಇನ್ನೊಂದು ಸ್ಪೆಷಲ್ ಕಾಂಪೊನೆಂಟ್ ವಿಚಾರದ ಬಗ್ಗೆ ನಾನು ಕೇಳಿದೆ ಎಲ್ಲೆಲ್ಲಿ ಥೆಫ್ಟ್ ಇದೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ನಾನೇನು ಹೇಳಿದೆ ಪ್ರಿಯಾರಿಟಿ ಛೇಂಜ್ ಆಗಿಲ್ಲ. ಆದರೆ ಯಾವುದೇ ಒಂದು ಡೆವಲಪ್‌ಮೆಂಟ್‌ನಲ್ಲಿ ಕಡಿಮೆ ಆಗಿಲ್ಲ ಎಂದು ಹೇಳಿದರು. ಆದರೆ ಡೆವಲಪ್‌ಮೆಂಟ್‌ನಲ್ಲಿ ನಾವು 710 ಕೋಟಿ ರೂಪಾಯಿ ಖರ್ಚು ಮಾಡಿದ ಮೇಲೆ ಅಲ್ಲಿ ಏನು ಉಳಿಯುತ್ತದೆ? ಅದಕ್ಕಾಗಿ ನಾವು ಯಾವುದಕ್ಕೂ ಉತ್ತರ ಕೊಡುವುದಿಲ್ಲ, ಸಂಬಂಧಪಟ್ಟ ಇಲಾಖೆಯವರು ಉತ್ತರ ಕೊಡುತ್ತಾರೆ ಎಂದರೆ ಇದು ಸರಿಯಲ್ಲ. ನಮಗೆ ಸಮರ್ಪಕವಾದಂತಹ ಉತ್ತರ ದೊರಕಿಲ್ಲ. ಅದಕ್ಕಾಗಿ ನಾವು ವಾಕ್‌ಔಟ್ ಮಾಡುತ್ತೇವೆ.

(ಕಾಂಗ್ರೆಸ್ ಸದಸ್ಯರು ಮಾನ್ಯ ವಿರೋಧ ಪಕ್ಷದ ನಾಯಕರೊಂದಿಗೆ ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು : ಅದನ್ನು ತೆಗೆಸಿ ಆಯಿತು. ಮಧ್ಯಾಹ್ನ ಕಾನೂನು ಸಚಿವರು ಬಂದು ಹೇಳಿದ್ದಾರೆ. ಅವರು ಆಗಲೇ ನಿರ್ಣಯ ತೆಗೆದುಕೊಂಡಿದ್ದಾರೆ. ಅದನ್ನು ವಿತ್‌ಡ್ರಾ ಮಾಡಿದ್ದಾರೆ. They have withdrawn the case. ಈಗ ಸಭೆಯನ್ನು ಅನಿರ್ದಿಷ್ಟ ಕಾಲದ ವರೆಗೆ ಮುಂದೂಡುತ್ತೇನೆ.

(ವಿಧಾನ ಸಭೆಯು 5.50ಕ್ಕೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು)

(+ ಈ ಚಿನ್ಹೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)